1933

ಶಿವಾನುಭವ ಗ್ರಂಥಮಾಲಾ ನಂ॥ ೩೭

ACC NO
244

# ಹರಿಹರನ ರಗಳೆಗಳು

## ಭಾಗ ೪

ಸಂಪಾದಕರು.

ರಾ॥ ಸಾ॥ ಫ. ಗು. ಹಳಕಟ್ಟಿ

ಬಿ. ಎ. ಎಲ್. ಎಲ್. ಬಿ.

ACC NO
047

033:155Har
Hal.4
7994

ವಿಜಾಪುರ.

ಬೆಲೆ ಆಣೆ

ACC NO 214

ಗ್ರಂಥಾಲಯ

7994

Ac. NO 047

# ಪ್ರಸ್ತಾವನೆ.

ಈ ಗ್ರಂಥದಲ್ಲಿ ಮಹಾಕವಿ ಹರಿಹರನು ರಚಿಸಿದ ಪುರಾತನರ ರಗಳೆಗಳಲ್ಲಿಯ ೯ ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ೧ನೇ ಭಾಗದಲ್ಲಿ ೭ ರಗಳೆಗಳು ಪ್ರಸಿದ್ಧವಾಗಿವೆ. ಕನ್ನಡ ವಾಙ್ಮಯದಲ್ಲಿ ರಗಳೆಗಳು ಒಂದು ಮಹತ್ವದ ಸ್ಥಾನವನ್ನು ಹೊಂದಿರುತ್ತವೆ. ಇವುಗಳಲ್ಲಿ ಹರೀಶ್ವರನು ರಚಿಸಿದ ರಗಳೆಗಳೇ ಬಹಳ ಮಹತ್ವವಾದವುಗಳು. ಇವುಗಳಲ್ಲಿ ಅವನು ಹೊರಪಡಿಸಿದ ವಿಚಾರಗಳು ಅತ್ಯಂತ ಉಚ್ಚತರವಾದವುಗಳು. ಈ ರಗಳೆಗಳು ಲೋಕಾದರಕ್ಕೆ ಪಾತ್ರವಾಗುವವೆಂದು ನಾವು ನಂಬಿದ್ದೇವೆ.

ಈ ಗ್ರಂಥದ ಪ್ರತಿಗಳು ನಮಗೆ ಮೈಸೂರು ಓರಿಎಂಟಲ್ ಲೈಬ್ರರಿಯಿಂದ ಒಂದು ಮತ್ತು ತುಮಕೂರು ಜಿಲ್ಹಾ ದಂಡಿನಶಿವರದಲ್ಲಿಯ ಶಿ. ಮೂ. ಕಲ್ಲಯ್ಯನವರಿಂದ ದೊರೆದದ್ದು ಎರಡನೆಯದು ಹೀಗೆ ಎರಡು ಪ್ರತಿಗಳ ಸಹಾಯದಿಂದ ಈ ಗ್ರಂಥವನ್ನು ಸಿದ್ಧಪಡಿಸಿದ್ದೇವೆ. ಈ ಪ್ರತಿಗಳನ್ನು ನಮಗೆ ಕಳಿಸಿಕೊಟ್ಟದ್ದಕ್ಕಾಗಿ ಉಭಯತರಿಗೂ ನಾವು ಋಣಿಯಾಗಿದ್ದೇವೆ.

ಫ. ಗು. ಹಳಕಟ್ಟಿ

ಸಂಪಾದಕ.

The Vijay College
LIBRARY
VIJAY COLLEGE
BIJAPUR.

# ಅನುಕ್ರಮಣಿಕೆ


(೧) ಕಾರಿಕಾಲಮ್ಮೆ ೧

(೨) ರುದ್ರ ಪಶುಪತಿ ೧೫

(೩) ತಿರುನಾಳ್ಪೋವರ್ ೨೭

(೪) ತಿರುಕುರುಂಪೆ ತೊಂಡರ್ ೪೧

(೫) ಅರಿವಾಳ್ತಾಂಡರ್ ೪೮

(೬) ಒಲಘಾಂಡ ಮೂರ್ತಿ ೫೫

(೭) ಮುರುಘರ್ ೬೧

(೮) ಅಯ್ಯಡಿಯರ್ ೬೭

(೯) ಮಾನಕಂಜರ ೭೦


# ಕಾರಿಕಾಲಮ್ಮೆಯ ರಗಳೆ.

**ಕಂದ—** ಸಕಲ ಜನಂ ಕಾಣುತೆ।
ಕೌತುಕಮೆನಲಾ ಕಾರಿಕಾಲೊಳಿಪ್ಪಮ್ಮೆಯುರಂ।
ಸುಕರಮೆನೆ ಮೆರೆದನಾನಂ।
ದಕರಂ ಕರುಣಾಬ್ಧಿ ಹಂಪೆಯು ವಿರೂಪಾಕ್ಷಂ॥

## ರಗಳೆ.

ಧರೆಗೆಸೆವ ಚೋಳದೇಶದೊಳೊಂದು ಸುಖಕರಂ
ಕರಮೊಪ್ಪುವುದು ಕಾರಿಕಾಲೆಂಬ ಶಿವಪುರಂ
ಅಲ್ಲಿರ್ಪಳೋರ್ವಳ್ಶಿವಜ್ಞಾನಸಂಪನ್ನೆ
ಸಲ್ಲಲಿತ ಸತ್ಯ ಭಕ್ತ್ಯಾಗಮ ಪ್ರತಿಪನ್ನೆ
ತನ್ನ ನಾಮಂ ಕಾರಿಕಾಲಮ್ಮೆ ಎಂಬುದದು
ಪನ್ನಗಾಭರಣಂಗತಿ ಪ್ರೇಮ ಹರ್ಷವದು
ತನಗೆ ಪತಿಯಾಗಿರ್ಪನಲ್ಲಿ ವಾಣಿಕಶೆಟ್ಟಿ
ಧನದಂಗೆ ಪುರುಡಿಪ ಸದರ್ಥತ್ವಮಂ ಮುಟ್ಟಿ
ಆತಂಗೆ ಸತಿಯಾಗಿ ಸಮ ಸುಖದೊಳೊಪ್ಪುತುಂ
ನೂತನ ಶಿವಭಕ್ತಿಯುಂ ಮನದೊಳಪ್ಪುತುಂ
ಗುಪ್ತಮಾಹೇಶ್ವರಿ ಪರಾಧೀನೆ ಪತಿಭಕ್ತೆ
ಆಪ್ತೆ ಶರ್ವಂಗೆ ಭಕ್ತ್ಯಾವಲೋಕನಯುಕ್ತೆ

ಇರ್ಪಳಾರುಂ ಭಕ್ತೆ ಎಂದರಿಯರಾಕೆಯಂ
ಸರ್ಪಭೂಷಣ ಚರಿತ ಭರಿತಾವಲೋಕೆಯಂ
ಅತ್ತೆ ಮಾವಂ ಗಂಡರರಿಯರಾ ಭಕ್ತಿಯಂ
ಮತ್ತೆ ಮನೆಯೊಳಗುಳ್ಳರರಿಯರಾ ಭಕ್ತಿಯಂ
ಬೋನವಂ ಮಾಡುವೆಡೆ ದೇವಾರ್ಚನಾಸ್ಥಳಂ
ಏನೆಂಬೆನಲ್ಲಿ ಸಿಂಹಾಸನಂ ಕರತಳಂ
ನೆನೆವ ಘನ ಚಿಂತೆ ಸಕಲ ಸ್ತೋತ್ರವಭವಂಗೆ

ಮನದ ನಿರ್ಮಳವಗ್ಗವಣಿ ಮಹಾದೇವಂಗೆ
ಕೆಯ್ಯ ಕೀರೆಯೆ ಪರಿಮಳದ ಪುಷ್ಪವಭವಂಗೆ
ಸುಯ್ಯ ಕಂಪೆ ಗುಗ್ಗುಳ ಧೂಪವಾ ಮಹಿಮಂಗೆ
ನೋಟವೇ ಬೆಳಗಿನಾರತಿ ಶಂಕರಂಗಲ್ಲಿ
ಊಟವಲ್ಲಿಯೆ ಸವೆದ ಬೋನದೋಗರವಲ್ಲಿ
ಇಂತಾರುವರಿಯದಂತಿರೆ ಶಿವನನರ್ಚಿಪಳು
ಇಂತು ಶಿವಭಕ್ತಿಯಂ ಮನದೊಳಗೆ ಪೆರ್ಚಿಪಳು
ಓವಿ ಸಾಧಿಸಿ ಬೆಳೆಯಿಸುವಳಲ್ಲಿ ಭಕ್ತಿಯಂ
ತೀವಿ ತುಳ್ಕಾಡಿ ಮುಚ್ಚುವಳಂಜಿ ಭಕ್ತಿಯಂ
ರುದ್ರಲೋಕವೆ ಪುಟ್ಟಿದೂರೆಂದು ಭಾವಿಪಳು
ರುದ್ರನೇ ತಂದೆಯುಂ ತಾಯೆಂದು ಭಾವಿಪಳು
ಕೈಲಾಸವೇ ತವರ್ಮನೆ ಯೆಂದು ಭಾವಿಪಳು
ಶೂಲಿಯುಣಾಗರ್ಸಹೋದರರೆಂದು ಭಾವಿಪಳು
ಆಸುರದ ಸಂಸಾರಮಂ ಗಿರಿಜೆಗರಿಪುವಳು
ಆಸರಂ ಬೇಸರಂ ಶಂಕರಂಗರಿಪುವಳು
ಮನದೊಳಗೆ ಮನ್ನಿಸುವಳರ್ಚಿಸುವಳಾಡುವಳ್
ಮನದೊಳಗೆ ನೋಡುವಳ್ ಮನದೊಳಗೆ ಪಾಡುವಳ್
ಮನದೊಳಗೆ ದೇವಂಗೆ ಬಿನ್ನಪಂ ಮಾಡುವಳ್
ಮನದೊಳಗೆ ಸಂಸಾರದಿರವಿಂಗೆ ಪೇಸುವಳ್
ಅನವರತ ಪರಮ ಶಿವಚಿನ್ಮೂರ್ತಿ ಚಿಂತಾಮೌನಿ
ಅನಸೂಯೆ ಭಕ್ತಿಯಭಿಮಾನಿ ಲಿಂಗಧ್ಯಾನಿ
ಮಾಡುವುದು ಕೆಲಸವದು ಪೂಜೆ ಸರ್ವೇಶಂಗೆ
ನೋಡುವುದು ಮನವಾರ್ತೆದರ್ಶನವದೀಶಂಗೆ
ತಾನರಿವಳಿಂದುಧರನರಿವನರಿವವರಿಲ್ಲ
ಏನೆಂಬಿನೀ ಪೂಜೆಯಂ ಶಂಭುವೇ ಬಲ್ಲ

ಇಂತು ಗುಪ್ತಾರಾಧನಾನಂದೆ ಇಪ್ಪುದಂ
ಕಂತುಹರನೆಂತು ಲೆಕ್ಕಿಸಲಾರನಿಂತಿದಂ
ಪ್ರಕಟಿಸುವೆನೆಂಬ ಭರದಿಂ ಚಂದ್ರಶೇಖರಂ
ಸಕಳ ಲೋಕಕ್ಕರುಪಲೆಂದು ಸರ್ವೇಶ್ವರಂ



ಸಾಧು ಭಕ್ತನ ವೇಷಮಂ ತಳೆದನೊಲ್ದಿತ್ತ
ವೇಧೆಯೊಳಗಿರ್ದನಾ ಕಾರಿಕಾಲೆಯೊಳತ್ತ

ಒಂದು ದಿನವಿರುತಲಲ್ಲಿ ಮಾಣಿಕಶೆಟ್ಟಿ
ಗೆಂದಂದು ಕಾಣ್ಕೆಯಂ ತಂದಂ ಮನಂ ಮುಟ್ಟೆ
ಋಳೆಯಿಂದಂ ಕೆಲವು ಕಾಲದ ಫಲಂಗಳಂ
ಬಾಳ ಚೂತವು ಪೂತ ಕಲ್ಪಫಲತತಿಗಳಂ
ಅಮ್ಮೆಗೆ ರಜತಗಿರಿಯ ಪಯಣಮಂ ತರ್ಪಂತೆ
ಅಮ್ಮೆಗಿದಿರಂ ದೃಷ್ಟಫಳಮುಮಂ ತೋರ್ಪಂತೆ
ತಂದು ಕಾಣ್ಕೆಯನೀಯೆ ಕಂಡು ನೆರೆ ಕೊಂಡಾಡಿ
ತಂದವರ್ಗುಡಕೊಟ್ಟು ಕಳುಪಿ ಹಣ್ಣಂ ನೋಡಿ
ಹಾರೈಸಿ ಹೊಸ ಫಲವಿದೆಂದು ಹರುಷಂಬಟ್ಟು
ಕಾರಿಕಾಲಮ್ಮೆಯರ ಕೆಯ್ಯೊಳೊಲವಿಂ ಕೊಟ್ಟು
ಅತಿ ಸುರಕ್ಷಿತದಿಂದ ಬಯ್ತಿಡೆನುತುಂ ಪೇಳ್ದು
ಪತಿ ಹೋದನತ್ತ ವ್ಯವಹಾರಮಂ ತಾಳ್ದು

ಹೋಗೆ ಕಂಡಳು ಫಲಂಗಳನಪೂರ್ವಂಗಳಂ
ರಾಗದಿಂ ಕೊಂಡು ಬಂದಳ್ನೂತನಂಗಳಂ
ಆಹಾ ಶಿವಂಗೆ ಶಿವಭಕ್ತರ್ಗೆ ಯೋಗ್ಯವಿವು
ಆಹಾ ಮಹಾದೇವ ಮರ್ತ್ಯರ್ಗಯೋಗ್ಯವಿವು
ಎಂದವಂ ಬೈತಿಟ್ಟು ಕೆಲಸದ ಶಿವಾರ್ಚನೆಗೆ
ಬಂದಳಾ ಗುಪ್ತ ಮಾಹೇಶ್ವರಿಯಡುವ ಮನೆಗೆ
ಎಂದಿನಂದದೆ ನಿತ್ಯ ನೇಮಂಗಳಂ ಮಾಡಿ
ತಂದು ಬೋನಕ್ಕೆ ಮೇಲೋಗರಮುಮಂ ಕೂಡಿ
ಆರೋಗಿಸಲ್ಕಿಕ್ಕಲನುವಾಗುತಿರಲಲ್ಲಿ

ಹಾರೈಸಿ ಶಂಕರಂ ರೂಪುದೋರಿದನಲ್ಲಿ
ಏಕಮುಖವೆಳೆಯ ಜಡೆ ಪುಲಿದೊವಲ್ವಿಸ್ತರಂ
ಲೋಕದೊಳ್ಸುಳಿವ ತಪಸಿಗಳಂತಿರಲ್ಕರಂ
ಇರ್ದಿರ್ದು ಈ ಎಡೆಗೆ ಬಂದ ಪರಿ ಎಂತಯ್ಯ

ಇರ್ದಿರ್ಪುದೇಕೆ ಭವಿಗಳ ಮನೆಗೆ ಬಂದಯ್ಯೆ
ಏಕೆ ಬಂದ್ಯೆ ಮನೆಯುವರ್ಕ್ಕರಂ ಪೊಲ್ಲೆನಲ್
ಏಕೆ ಬಂದ್ಯೆ ಭಕ್ತೆ ಇಲ್ಲಿಯುಂಟೇ ಎನಲ್
ಭಕ್ತೆ ಎನಲವ್ವ್ಮನರಿದೊಡೆ ಕಂದಿದಪಳೆಂದು
ಯುಕ್ತಿಯಿಂ ಸುಮ್ಮನಿರಲಮ್ಮ್ಯೆಯನುಚಿತವೆಂದು
ಭಕ್ತರೆಂದರಿಯೆವಾರೆಂದರಿಯೆವೆಲೆಯಮ್ಮ
ಭಕ್ತಿಗಟ್ಟ್ಯೋಗರವನಿಕ್ಕು ಪೋದಪೆವಮ್ಮ
ಎನೆ ಗುಪ್ತತನದೊಳಿರಲಾರದುಕ್ಕಲ್ಭಕ್ತಿ
ಮನದೊಳಕ್ಕಾಡಿ ನಾಲಿಗೆಗೆ ಬರುತಿರೆ ಭಕ್ತಿ
ಮನದ ಗರ್ಭಿಣಿ ಜಿಹ್ವೆಯಿಂ ಬೆಸಲೆಯಪ್ಪಂತೆ
ತನುವಿಡಿದ ಭಕ್ತಿಯಿಂ ಕಾಣ್ಬಾತುಸುರುದಳಂತೆ
ಆರುವುಂ ಕಾಣ್ಬದಕೆ ಮುನ್ನವಾರೋಗಿಪುದು
ಆರುವರಿಯದ ತೆರದಿ ತ್ವರಿತದಿಂ ಕರುಣಿಪುದು
ದೇವ ಕಂಡೊಡೆ ಭಕ್ತಿಯಿಂತರುಪಿದಂತಕ್ಕು
ದೇವ ಬಳಿಕಾಂ ಬದುಕೆನರಿದೊಡಿರಿದಂತಕ್ಕು
ಎನುತಲ್ಲಿ ಯಾರೋಗಣೆಗೆ ಕೊಟ್ಟು ಬೇಗದಿಂ
ಘನ ಮಹಿಮ ಹದುಳನಾರೈಸೆಂದು ರಾಗದಿಂ
ಮನೆಯುವರ್ಕಂಡೊಡಂ ಕೊಲುಗೆನ್ನನೆನುತಲ್ಲಿ
ತನಿವಣ್ಣನೆರಡರೊಳಗೊಂದನಿಕ್ಕಿದಳಲ್ಲಿ
ಇಕ್ಕೆ ನಲಿದಾರೋಗಿಸುತಿರ್ಪ ಸಮಯದೋಳ್

ದಿಕ್ಕನೇ ಮನೆಯ ಸೆಟ್ಟಿ ಬಂದನಾ ಪೊಳ್ತಿನೊಳ್
ಬರಲವಂ ನಸುಗಾಣದಂತೆಯೆ ಭವಂ ಪೋದ
ಉರವಣಿಸುತಾ ಸೆಟ್ಟಿ ಸಂದೇಹಿಸಲ್ಪೋದ
ಇತ್ತಲಾ ಸೆಟ್ಟಿಗೆಡೆಮಾಡಿದಳ್ ಶಿವಭಕ್ತೆ
ಚಿತ್ತದೊಳಗಂಜುತ್ತಲಂಜೆನೆನುತುಂ ಭಕ್ತೆ
ಎಡೆ ಮಾಡಿ ಯುಗಲಕ್ಕೆ ಹೆರೆ ಸಾರ್ದು ನಿಂದಿರಲು
ಕಡು ಹಸಿದು ಶೆಟ್ಟಿ ಹಣ್ಣೆಲ್ಲಿ ತಾರೆಂದೆನಲು
ಇಕ್ಕಿದಳು ಪಣ್ಣೊಂದು ತಂದು ಎಡೆಯೊತ್ತಿಂಗೆ
ಮಿಕ್ಕ ಸಂದೇಹದಿಂ ಶಂಕಿಸುತೆ ಗಂಡಂಗೆ
ತಂದಿಕ್ಕಲಿನ್ನೊಂದು ಹಣ್ಣೆಲ್ಲಿ ತಾರೆನಲ್



ಬಂದಳ್ಪರಿಚ್ಛೇದಿಸಿದಳಲ್ಲಿ ಭೋಂಕೆನಲ್
ಕೆಯ್ಯೊಡನೆ ಹರಣಮಂ ಬೆರಿಸಿ ಕೆಯ್ಯಿಕ್ಕಿದಳ್
ಕೆಯ್ಯ ಮೇಲೇ ತೋರ್ಪನೆನ್ನನೆನುತಿರಿಸಿದಳ್
ಇಂದುಧರನಲ್ಲಿಂದೆ ಮುನ್ನವಂಜುತ್ತೊಂದು
ತಂದಮೃತ ಫಲವನೊಲ್ದಿರಿಸೆ ನೇಹದೊಳಂದು
ಕಂಡಾಗಳಾ ಹಣ್ಣ ಬಸಿರೊಳಗೆ ಬಂದಂತೆ
ಕಂಡು ಪರಮಾಸ ಪರಮ ಹರ್ಷದೊಳಗಿದ್ದಂತೆ
ಭಾವಿಸಲ್ತೆಗೆದಳಾನಂದಮಂ ತೆಗೆವಂತೆ
ದೇವಲೋಕದ ಪರಸ್ಥಾನಮಂ ತೆಗೆವಂತೆ
ತೆಗೆದು ತಂದಿಕ್ಕಿದಳ್ನಲಿದು ಪತಿಯುಗಲಲ್ಲಿ

ಬಗೆಯೊಳಂ ಕೌತುಕಂ ಬಟ್ಟು ನೋಡುತ್ತಲ್ಲಿ
ಸೆಟ್ಟಿ ಕೈಮುಟ್ಟಿ ಮೈರೋಮಾಂಚವಾಗುತಿರೆ
ದಿಟ್ಟಸಲ್ಪಣ್ಣಳ್ಗೆ ಸವಿಗಳಂ ಸವಿಸುತಿರೆ
ಎಲ್ಲಿಯದು ಪೇಳೆನಗೆ ಕಾರಣಿಕೆ ಈ ಫಲಂ
ಎಲ್ಲಿಯದು ಪೇಳೆಲೆ ಮಹಾ ಪುರುಷೆ ಈ ಫಲಂ
ಎಂದು ನಡನಡುಗಿ ಯಾತಂ ಮುಟ್ಟಲಂಜುತ್ತೆ
ಇಂದುಮುಖಿ ಯರಿದನೆಂದಿತ್ತ ನಡನಡಗುತ್ತೆ
ಇರೆ ಸುಮ್ಮನಿರದೆ ಪೇಳೆನಗಿದೆಲ್ಲಿಯ ಫಳಂ
ಹರಕರುಣವಲ್ಲದೀ ನೆಲದೊಳಿಲ್ಲೀ ಫಳಂ
ಎನೆ ಪೇಳಲುಂ ಪೇಳದಿರಬಾರದಿನ್ನೆಂದು
ಮನದೊಳಗೆ ಸಿಡಿಮಿಡಿಗೊಳುತ್ತಲುಸುರ್ದಳು ನಿಂದು
ಹರಭಕ್ತನೋರ್ವನಾನಂದದಿಂದಂ ಬರಲ್
ಹರುಷದಿಂದೊಂದು ಹಣ್ಣಂ ಕೊಟ್ಟೆನಿಂತಿರಲ್
ನೀವೀಗಳಾ ಹಣ್ಣನಾರ್ತದಿಂದ ಬೇಡೆ
ದೇವನಿರಿಸಿದನಮೃತಫಲವನೊಂದಂ ನೋಡೆ
ಆ ಹಣ್ಣಿದೆಂದು ಪೇಳ್ದೊಡೆ ಸೆಟ್ಟಿ ನಡುಗಿದಂ

ಆ ಹೊತ್ತೆ ಸತಿ ಯೆಂಬ ಭಾವ ಮುನ್ನುಡುಗಿದಂ
ಮುನ್ನವೇ ಸಂದೇಹಿಸುತ್ತಿರ್ದೆನೆಲೆ ತಾಯೆ
ಇನ್ನೆನ್ನ ಸತಿ ಯೆಂದು ನುಡಿಯೆಂ ಮಹಾಮಾಯೆ

ಇಂತು ಕರುಣಿಸಿ ಹರಂ ಪ್ರತ್ಯಕ್ಷವಪ್ಪನೇ
ಇಂತಪ್ಪ ಸತಿಯರುಂಟೇ ಶಿವಂ ಬರ್ಪನೇ
ತಾಯೆ ನೀವೇ ಕೊಳ್ವುದೀ ಹಣ್ಣಿದೆನಗರಿದು
ತಾಯೆ ನಿಮ್ಮಂ ಮರೆಯಿಸಿರ್ದ ಪರಿ ಧರೆಗರಿದು
ಇನಿತು ದಿವಸಂ ನಿಮ್ಮನಂತಿಂತು ನುಡಿದುದಕೆ
ಇನಿತು ಕಾಲಂ ಉದಾಸೀನವಂ ಮಾಡಿದಕೆ
ಕರುಣಿಪುದು ಕಾವುದೆನ್ನಂ ಕಾರಿಕಾಲಮ್ಮ
ಉರವಣಿಪ ಮಾಯೆಯಿಂ ತೆಗೆವುದೆನ್ನಮ್ಮಮ್ಮ
ಇನ್ನೆನಗೆ ನೀವೇ ಗುರುಸ್ಥಾನವೆಲೆ ತಾಯೆ
ಇನ್ನೆನ್ನ ಭವ ಬಂಧನವನುಡುಗಿಸೆಲೆ ತಾಯೆ
ಕರುಣಿಪುದುಪದೇಶವನು ಮಾಳ್ಪುದಿನ್ನೆನಗೆ
ಪರಮಾರ್ಥ ಮೂರ್ತಿ ಕಾರುಣ್ಯದಿಂ ನೀವೆನಗೆ
ಎಂದು ಕಣ್ಣಿಂ ಕೊಟ್ಟು ಮೆಯ್ಯಿಕ್ಕಿ ಪಟ್ಟಿರಲ್
ಮುಂದಯಿಪ ಪರವಶದ ಬೆಮರಿಂದೆ ಬಿಳ್ದಿರಲ್

ಕಂಡು ಶಿವಭಕ್ತೆಯಭಿಮಾನಿ ನೆರೆ ಕಂದಿದಳ್
ಗಂಡನಿಂತರಿದನಿನ್ನೇನೆಂದು ಕೊರಗಿದಳ್
ದೇವಭಕ್ತಿಯನಿಂತು ಗಾರುಮಾಡಿದೆ ತಂದೆ
ದೇವ ಮೀಸಲ ಮೋಹವಂ ಸೂಸಿದೈ ತಂದೆ
ಭಕ್ತಿ ಬೇಸರವಾಯಿತಿನ್ನೆಂತು ಸೈರಿಪೆಂ
ಭಕ್ತಿ ಹುರಿಹಂಚಾಯ್ತು ಇನ್ನೆಂತು ಜೀವಿಪೆಂ
ಕೆಲರರಿಯೆ ಭಕ್ತಿಯಂ ತೋರಿ ಬೀರಿದರುಂಟೆ
ಪಲರರಿಯೆ ಭಕ್ತಿಯಂ ಸಾರಿ ಮಾಡಿದರುಂಟೆ
ಎಂದಲ್ಲಿ ಬಾಡುತುಂ ಕೋಡುತುಂ ನಡೆ ನೋಡಿ

ಮುಂದಿರ್ದ ಸೆಟ್ಟಿಯುರ್ಗುಪದೇಶವಂ ಮಾಡಿ
ದೇವನಿತ್ತ ಪ್ರಸಾದದ ಫಳಮುಮಂ ಕೊಟ್ಟು
ದೇವ ಭಾಮಿನಿ ಮನದ ನಿಷ್ಠೆಗಂಡೆಡೆಗೊಟ್ಟು
ಇರೆನಿನ್ನಿರೇ ಜಗಕ್ಕೆನ್ನುಮಂ ತೋರಿದಂ
ಹರಭಕ್ತೆ ಎಂದರುಹಿ ಹುರಿಹಂಚು ಮಾಡಿದಂ



ಇನ್ನಂಜಲೇಕೆಂದು ಭಸಿತವಂ ಪೂಸಿದಳ್
ಇನ್ನರಿಯವೇಳ್ಕೆಂದ ರುದ್ರಾಕ್ಷಿ ಯಿಕ್ಕಿದಳ್

ನಡೆವೆನಾನಿಲ್ಲಿರೆಂ ಕೈಲಾಸಪುರದತ್ತ
ಮೃಡನೆ ಶರಣೆಂದೆನುತೆ ಕಲಿಯೇರಿ ಮೀರುತ್ತ
ಪೊರಮಟ್ಟಳಮ್ಮಮ್ಮ ಪುರಜನಂ ನೋಡುತಿರೆ
ಪೊರಮಟ್ಟಳಲ್ಲಲ್ಲಿ ಬಂಧುಜನ ಮರುಗುತಿರೆ
ಪುರದ ಪುಣ್ಯಪ್ರಜಂ ನೆರೆದು ಪೊರಮಡುವಂತೆ
ಪುರದ ಪರಮಾಯುಷ್ಯವಿರದೆ ಪೊರಮಡುವಂತೆ
ಬಿಸಿಲನರಿಯದ ರಮಣಿ ಬಿಸಿಲಿಂಗೆ ಮೆಯ್ಯಾಂತು
ಮಿಸುಕಲರಿಯದ ಮಾನಿಯಡಿಯ ಮೇಲಡಿಯಾಂತು
ಉತ್ತರ ದಿಶಾಭಿಮುಖಿಯಾದಳಾ ಶಿವಭಕ್ತೆ
ಚಿತ್ತದೊಳ್ ಪುರಹರನನಿರಿಸುತಂ ಶಿವಭಕ್ತೆ
ಬಂದಳ್ಪರಿಚ್ಛೇದದಿಂ ಕಾರಿಕಾಲಮ್ಮ
ಬಂದಳಾನಂದಭರದಿಂ ಕಾರಿಕಾಲಮ್ಮ
ಸಕಲ ಸುಖಮಂ ಬಿಸುಡುತುಂ ಕಾರಿಕಾಲಮ್ಮ
ಸಕಳಮಂ ಲೆಕ್ಕಿಸದ ಕಲಿ ಕಾರಿಕಾಲಮ್ಮ
ಬರೆ ನಿಂದುದಲ್ಲಿ ಬಾಂಧವ ಜನಂ ಪುರಜನಂ
ಬರೆವರಲ್ಬಿಂದುದಲ್ಲಲ್ಲಿರ್ದ ಪರಿಜನಂ
ಕಾಣಲ್ಕೆ ಬರುತಿರ್ದರೇನೆಂಬೆನಮ್ಮೆಯುಂ
ಜಾಣರರಿವಾ ರೂಪ ಯೌವ್ವನದ ಪೇರ್ಮೆಯುಂ

ಪಾಪವುಳ್ಳರ್ಗೆ ಸಿಂಗರದಂತೆ ತೋರುತುಂ
ಪಾಪವಿಲ್ಲದವರ್ಗೆ ತಾಯಂತೆ ತೋರುತುಂ
ಮಲ್ಲಿಕಾಲತೆಗೆ ಶಿವಭಕ್ತಿ ಯೊದವಿದ ತೆರದೆ
ಸಲ್ಲಲಿತ ಶಶಿಕಳೆಗೆ ನಿಷ್ಠೆಯೊದವಿದ ತೆರದೆ
ಭಕ್ತಿಲತೆ ನಡೆವಂತೆ ನಡೆಯುತಿರ್ದಳ್ನೋಡ
ಭಕ್ತಿವನಿತಾಗಮನದಂತೆ ನಡೆದಳ್ ನೋಡ
ಲಂಬಿಸುವ ಪಾವನತೆಯಂ ರೂಪುದೋರುತಿರೆ
ಇಂಬಿನಿಂ ನಡೆತಂದಳೊಡನೆ ಜನವೆಯ್ದುತಿರೆ

ಎಳೆಯಶೋಕೆದಳಿರನುಗುಳ್ವ ಪದತಳದೊಳಗೆ
ಬಳೆದು ಪ್ರದಕ್ಷಿಣಂ ನಳನಳಿಸಿ ತೊಳತೊಳಗೆ
ಕಾಮನೊಡ್ಡಣೆಗೆ ತೊಣೆಯೆನಿಪ ಕಿರಿದೊಡೆ ಕರಂ
ಸೋಮಧರನಲ್ಲಿಗೊಯ್ವುದಕೆ ನೆರೆವನೆ ಕರಂ
ಕದಳಿಯಂ ಪಳಿವುತಿರ್ಪೂರು ದಂಡಂ ನೋಡ
ಮದನವೈರಿಯ ನಮಸ್ಕಾರ ದಂಡಂ ನೋಡ
ಮದನ ಕೃತಕಾಚಲ ನಿತಂಬ ಬಿಂಬಂ ನೋಡ
ಒದವಿ ಪದ್ಮಾಸನದ ತಳವೃತ್ತವುಂ ನೋಡ
ಸರಸಿಯಂ ಪಳಿಕೆಯ್ವ ನಾಭಿಮಂಡಲವಲ್ಲಿ
ಹರಭಕ್ತಿ ಸಾರ ಮಡುವಿನ ತೆರದೊಳಿರಲಲ್ಲಿ
ಮುಗಿದ ಸರಸಿಜವನೇಳಿಸುವ ಕುಚ ಒಪ್ಪಿರಲ್
ಮಿಗೆ ಭಕ್ತಿ ರಸದ ಕಳಶದ ಮುಚ್ಚುಳಂತಿರಲ್
ಪಂಚಶರಮಂ ಪಳಿವ ನುಣ್ಬೆರಲ ಚಿತ್ರರಂ
ಪಂಚಮುಖ ಪರಿಭಾವಕರ ತೆರಮೊಳಿರೆ ಕರಂ
ಪದಕೊರಳ್ಕೇಳಿಸುವ ಕಂಬುವಿನ ತೆರದೊಳಿರೆ
ಕವಪು ಶರ್ವಂ ನೋಳ್ಪ ದರ್ಪಣದ ತೆರದೊಳಿರೆ
ಕಣ್ಣೆರಡು ಚೆಲ್ವಿಂಗೆ ಕಣ್ಮಾಡಿದಂತೆ ಇರೆ
ತಿಣ್ಣವೆನಿಸುವ ಭಕ್ತಿ ಕಣ್ದೆರೆದ ಪರಿಯೊಳಿರೆ
ಅಳಿಕುಲದ ಬಣ್ಣಮಂ ಬರಿಕೆಯ್ವ ಕುಂತಳಂ
ತಲೆಯೂರಿ ನಡೆವಲ್ಲಿಗಾದರದ ವರ್ತುಳಂ
ಇಂತು ಸೌದರ್ಯವಂ ಪಾವನತ್ವವನೀವ
ಸಂತತಂ ಶೃಂಗಾರ ರಸದ ಲಹರಿಯನೀವ

ಕಾರಿಕಾಲಮ್ಮೆಯರ ರೂಪಿಂಗೆ ಬಹು ಜನಂ
ಸಾರುತಂ ಬೆಂಬಿಡದೆ ಬರೆ ಕಷ್ಟತರ ಜನಂ
ಕಂಡಲ್ಲಿ ಕಾರಿಕಾಲಮ್ಮ ಮನದೊಳ್ನೊಂದು
ಬಂಡ ದಿಂಡೆಗೆ ಮರುಳ್ಗೊಂಡಿರಯ್ಯೋ ಎಂದು
ಅವಿಚಾರ ಮತಿಯರೇನೆಂದರಿಯರಕ್ಕಟಾ
ಸುವಿಚಾರವೆಳ್ಳನಿತಿಲ್ಲ ನಿಮಗಕ್ಕಟಾ
ಒಳಗು ಹೊರಗಾಗಿ ನೋಡಿರೆ ಎನ್ನ ದೇಹಮಂ



ಬಳಿಕ ಹೇಸಲ್ವೇಳ್ಕುಮರಿಯಿರೇ ಚೋಹಮಂ
ಪಂಚಭೂತಂ ನೆರೆಯೆ ಕಾಯಂ ಪರಿಯೆ ವಾಯು
ಇಚ್ಚೆಗೊಳ್ಳದಿರಿ ಎನ್ನ ರೂಪೆಲ್ಲ ಹ್ಯೇಯ

ಎಂಬ ಬೋಧೆಗೆ ಹೋಗದೊಡನೊಡನೆ ಬರುತಮಿರೆ
ನಂಬದುನ್ಮತ್ತ ಜನಗಳು ಪಿಂತೆ ಬರುತಮಿರೆ
ಬೇಸತ್ತು ಪುರಹರಾ ಮಾಯಾತಮೋಹರಾ
ವೇಷವೆನ್ನಂ ಕೊಂಡಪುದು ಪಂಚ ಶರಹರಾ.
ಎಂದು ಮೊರೆಯಿಡೆ ಹರಂ ಶಕ್ತಿಯಂ ಕುಡಲಲ್ಲಿ
ನಿಂದು ನಿಶ್ಚೈಸಿದಳ್ದೇಹಮಂ ಬಡಲಲ್ಲಿ
ಸೈರಿಸದೆ ಬೆಂಬತ್ತುವಜ್ಞಜನಮಂ ನೋಡಿ
ವೈರಾಗ್ಯಶಸ್ತ್ರದಿಂ ಛೇದಿಸಿಕೊಳಲ್ಬೇಡಿ
ಕಾಮಮಂ ಕ್ರೋಧಮಂ ಲೋಭಮಂ ಬಿದಿರ್ವಂತೆ
ಪ್ರೇಮಮಂ ಮದಮತ್ಸರಂಗಳಂ ಬಿದಿರ್ವಂತೆ
ಮಾಯೆಯಂ ಬಿದಿರ್ವಂತೆ ಮೋಹಮಂ ಬಿದಿರ್ವಂತೆ
ಛಾಯೆಯಂ ಬಿದಿರ್ವಂತೆ ಚಂದಮಂ ಬಿದಿರ್ವಂತೆ
ಅವಯವಂಗಳನಲ್ಲಿ ಚಲ್ಲಿದಳು ಛಲದಿಂದೆ

ತಮತಮಗೆ ಓಡಿತ್ತು ಮೂರ್ಖಜನ ಭಯದಿಂದೆ
ಸ್ಥೂಲತನುವಂ ಬಿಟ್ಟು ಸೂಕ್ಷ್ಮತನುವಿಂ ನಿಲಲು
ಕೇಳು ಭೃಂಗೀಶನೊದರಿದ ಅಂದದೊಳ್ನಿಲಲು
ಕಣ್ಣಳಿಯೆ ಮೆಯ್ಯೆಲ್ಲವೆಲುವಾಗಿ ನಿಲಲಲ್ಲಿ
ಬಣ್ಣವಳಿಯಲ್ನೋಡುತೆಲ್ಲ ಲಘು ಜನವಲ್ಲಿ
ಮರುಳೋ ಪಿಶಾಚಿಯೋ ಓಡೋಡೆನುತ್ತಲ್ಲಿ
ಮರಳಿ ನೋಡಲಮ್ಮದೆಯೋಡಿತ್ತು ಜನವಲ್ಲಿ
ಇಂತು ಮೆಯ್ಯಂ ಬಿದಿರ್ದು ತಾನೋರ್ವಳೆ ನಿಂದು
ಸಂತ ಸುಖದಿಂ ಶಂಭುವಂ ನೆನೆಯುತಂ ಬಂದು
ತಲೆಯುಳಿಯೆ ಮೆಯ್ಯಲ್ಲವೆಲುವಾಗಿ ನಿಲಲಿಂತೆ
ಕಲಿಯುಗದ ಹೊಲೆಗೆಟ್ಟ ಪುಣ್ಯಾವೇಳ್ತ್ರಪ್ಪಂತೆ
ನಡೆತಂದಳಪ್ರತಿಮ ವೈರಾಗ್ಯ ಸಂಯುಕ್ತೆ

ನಡೆತಂದಳೇಕನಿಷ್ಠೆಯ ಭಕ್ತಿಯನುರಕ್ತೆ
ಹರುಷದಿಂ ಹಾಡುತುಂ ಹಿಗ್ಗುತುಂ ಬರವರಲ್
ಪರಮ ಸಂತೋಷಿಯಾನಂದದಿಂ ಬರವರಲ್

ಕಾಂಚಿಗೆ ಬಡಗಲಿರ್ಪ ತಿರುವಾಸ ಕಾಡೊಳಗೆ
ಪಂಚಮುಖನಿರೆ ಕಂಡಳಲ್ಲಿ ಕಾನನದೊಳಗೆ
ಆಹಾ ಶಿವನೆ ನಿನ್ನ ನಾಟ್ಯಮಂ ತೋರೆನಗೆ
ಆಹಾ ಮಹಾ ನಾಟ್ಯಮಂ ಕರುಣಿಸುವುದೆನಗೆ
ತೋರಯ್ಯ ಘನ ಕಾಂಡವಾಡಂಬರವನೆನಗೆ
ತೋರಯ್ಯ ಮೆಯ್ಯೆಲ್ಲ ಕಣ್ಣಾಗಿ ನೋಳ್ಪೆನಗೆ
ಎಂದು ಬಿನ್ನೈಸೆ ಶಂಕರನಲ್ಲಿ ತೋರಿದಂ

ನಿಂದು ನೋಡಲ್ಮುಡಿ ಗಗನಮಂ ಮೀರಿದಂ
ಜಡೆ ನಭವನೆಡೆಗೊಂಡು ಪರ್ವಿ ಪಲ್ಲವಿಸುತಿರೆ
ಹೆಡೆಗಳಂ ಬಿರ್ಚಿಯುರಗಂಗಳಾಡುತ್ತಮಿರೆ
ಹಸ್ತಂಗಳೇಣ್ದೆಸಗೆ ನಟಣೆಯಿಂ ನಲಿಯುತಿರೆ
ವಿಸ್ತರದ ಚರಣ ಪಲ್ಲವವೆತ್ತಿ ಮೆರೆಯುತಿರೆ
ಮೇಲೆ ವಿಶ್ವಕ್ಸೇನನಲ್ಲಿ ತಿರ್ರನೆ ತಿರುಗೆ
ಕಾಲನೇವುರವಲ್ಲಿ ಝಣಝಣಿಸುತಂ ತಿರುಗೆ
ಡಮರುಗದ ನಾದಮುಂ ಢಣಢಣಮೆನುತ್ತಿರಲ್
ಅಮಮ ಘಂಟಾನಾದವಲ್ಲಿ ಢಣಢಣಮೆನಲ್
ಪುಲಿದೊವಲ ಪೊಂಗೆಜ್ಜೆಗಳ ಘುಲಿರ್ಘುಲಿರೆನಲ್
ಚಲಿಸುವಂದುಗೆಯ ದನಿ ಘುಲುಘುಲುಕು ಘುಲುಕೆನಲ್
ಕೆಯ್ಯ ಬೊಮ್ಮನ ಸಿರಮದರಿಯುರೇ ಎನುತಿರಲ್
ಮೆಯ್ಯ ದೇವರ ಹಿಂಡುದಲೆ ಮಾಲೆಯು ಬುಬೆನಲ್
ಗಜಚರ್ಮವಲ್ಲಿ ಜೊಂಪಿಸಿ ಝಾಡಿ ಮೂಡುತಿರೆ
ಭುಜ ಹತ್ತು ದೆಸೆಗಳಂ ಕೌಂಕುಳೊಳಿರಿಂಕುತಿರೆ
ಪದತಳದ ಹರಿನಯನವೆವೆದೆರೆದು ಹಳವಳಿಸೆ
ಬಿದಿರ್ದೆತ್ತಿ ಖಟ್ವಾಂಗಮಂಬರಕವ್ವಳಿಸೆ
ಕೋಟಿರವಿಕಾಂತಿಯುಂ ಪದನಖಂ ಸೂಸುತಿರೆ



ಕೋಟಾನುಕೋಟಿ ನಾಟ್ಯಂಗಳಂ ಚಲ್ಲುತಿರೆ
ಬ್ರಹ್ಮ ವಿಷ್ಣ್ವಾದಿಗಳ್ಜಯಜೀಯಮೆನುತಮಿರೆ
ಬ್ರಹ್ಮಾಂಡಭಾಂಡಮಾ ತಾಂಡವಕೆ ಬಿರಿವುತಿರೆ
ತಾನಾಡೆಯುಮೆಯಾಡೆ ಹರಿಯಜರ್ಸುರರಾಡೆ
ತಾನಾಡೆ ಜಗವಾಡೆ ಜೀವರಾಶಿಗಳಾಡೆ
ಆಡುತಿರ್ದಂ ವಿರುಪಾಕ್ಷ ಶಿವನಮ್ಮಮ್ಮ
ಆಡುತಿರ್ದಂ ಗಣಂಗಳ್ಕೋಡಲಮ್ಮ

ಇಂತಾಡೆ ನೋಡಿ ಅಂಜಿದಳಮ್ಮ ಶರಣೆನುತೆ
ಕಂತುಹರ ಶರಣೆನುತೆ ಸಾಲ್ಗು ಸಾಲ್ಗೆಂದೆನುತೆ
ಕಣ್ಮುಚ್ಚಿ ನಡುಗುತಿರ್ದಳ್ಕಾರಿಕಾಲಮ್ಮ
ಅಣ್ಮುಗೆಟ್ಟರಿವುಗೆಟ್ಟಳ್ಕಾರಿಕಾಲಮ್ಮ
ಇರೆ ಹರಂ ಕರುಣದಿಂದಂ ನಾಟ್ಯಮಂ ಮಾಣ್ದು
ಸುರರೆಲ್ಲ ಚೋದ್ಯಮೆನೆ ಕಾರುಣ್ಯಮಂ ಮಾಣ್ದು
ಕಂಡವ್ವೆ ಕಾರಿಕಾಲಮ್ಮ ಎಲೆ ನಾಂಟ್ಯಮಂ
ಕಂಡಿರೇಯಮ್ಮಯರೆ ಎನ್ನ ಚೆಲ್ವಾಟಮಂ
ಎನೆ ಕಂಡೆ ನಾ ಕಂಡೆ ಎನ್ನಳವೆ ಬರ್ದುಕಿದೇಂ
ಎನಗೆ ತೋರಿದೆ ದಯಾಪರತೆಯಂ ಬರ್ದುಕಿದೇಂ
ಹರಿಯಜರು ಕಾಂಬರೇ ನಿಮ್ಮ ಪೊಸ ನಾಂಟ್ಯಮಂ
ವರ ವೇದವರಿವವೇ ನಿಮ್ಮ ಕಾಲಾಟಮಂ
ಎಲೆ ದೇವ ಎನ್ನ ಭಾಗ್ಯದ ಬೆಳಗೆ ಸರಿಯುಂಟೆ
ಎಲೆ ದೇವ ನಿಮ್ಮ ನಾಟ್ಯಕ್ಕಿನ್ನು ಸರಿಯುಂಟೆ
ಎಂದು ಕುಣಿದಾಡುತಿರ್ಪಮ್ಮೆಯಂ ಮಿಗೆ ಕಂಡು
ಇಂದುಶೇಖರನಲ್ಲಿ ಹರ್ಷಮಂ ಕೈಕೊಂಡು
ನಡೆ ತಾಯೆ ಕೈಲಾಸಪುರಕೆನುತ್ತಂ ಪೇಳ್ದು
ಮೃಡನಲ್ಲಿ ಲಿಂಗದೊಳ್ಪೊಕ್ಕನೊಲವಂ ತಾಳ್ದು

ಮಿಗೆ ಕಾರಿಕಾಲಮ್ಮ ಮಿಗೆಕೌತುಕಂಗೊಂಡು
ಸೊಗಯಿಸುವ ಶರಣರಡಿ ಹೆಜ್ಜೆಗಳುಮಂಕಂಡು
ಆಹಾ ಶರಣರೆಲ್ಲ ನಡೆದ ಹಾದಿಯ ಹೆಜ್ಜೆ

ಆಹಾ ಎನ್ನೊಡೆಯರೊಲವಿಂ ನಡೆದ ಪೊಸ ಹೆಜ್ಜೆ
ಇಂತಿವೆನ್ನಯ ಶಿರದ ಮೇಲಿರಲ್ವೇಳ್ಕೆಂದು
ಚಿಂತಿಸಿದಳೊಂದು ತೆರನಂ ಚಿತ್ತದೊಳಗೊಂದು
ಅವರೆಲ್ಲ ನಡೆದಂತೆಯಾಂ ನಡೆಯಬಲ್ಲೆನೇ
ಅವರಂತೆ ಸಾಮರ್ಥ್ಯವುಳ್ಳೊಡಾಂ ಬಲ್ಲೆನೇ
ಎನ್ನ ಕೈ ಕಾಲಾಗಿ ನಡೆವೆ ನಾನಿಂತಿಲ್ಲಿ
ಎನ್ನ ತಲೆಯಡಿಯಾಗಿ ನಡೆದು ತೋರುವೆನಿಲ್ಲಿ
ಎಲೆ ಶರಣರಡಿಗಳಿರ ಶಿವನಲ್ಲಿಗೊಯ್ಯಿರೇ
ಎಲೆ ಹೆಜ್ಜೆಗಳಿರ ಕೈಲಾಸಕ್ಕೆ ಕಳಿಪಿರೇ

ಎಂದು ಶರಣರ ಹೆಜ್ಜೆಯೊೞ್ನಂಬಿ ತಲೆಯಿಟ್ಟು
ಬಂದಳೊಂದೊಂದು ಗಳಿಗೆಗದೊಂದಡಿಯನಿಟ್ಟು
ಶಿವಭಕ್ತಿಯುಕ್ತಿ ತಲೆ ಕೆಳಗಾದ ಚಂದದಿಂ
ಶಿವನಿಷ್ಠೆ ಸೊರ್ಕೆ ತಲೆಯೂರಿತೆಂಬಂದದಿಂ
ಎಲ್ಲಾ ನರಾಳಿ ಬೇರ್ವೊದಲಾಗಿ ನಡೆವುತಿರೆ
ಇಲ್ಲಿ ಬೇರ್ಕೆಳಗಾಗಿ ಸಸಿನದೊಳ್ನಡೆವುತಿರೆ
ಇತ್ತ ಕೈಲಾಸಪಥದೊೞ್ನಂಬಿ ಚೇರಮರ್
ಮತ್ತಗಜ ತುರಗಂಗಳೇರಿ ಬರುತಮವರ್
ಕಂಡಿದೆಂದಿಂಗೆ ಬರ್ಪಿರೆ ಯಮ್ಮೆಯೆಂದೆನುತೆ
ಖಂಡೇಂದುಮೌಳಿಯ ಪುರಕ್ಕೆ ನೀವೆಂದೆನುತೆ
ಪೋಗಲರ್ಥಿಕೆಯಾದಳಾ ಕಾರಿಕಾಲಮ್ಮ
ನಾಗಭೂಷಂಗೆ ಮೊರೆಯಿಟ್ಟತ್ತಳಮ್ಮಮ್ಮ
ಇಲ್ಲಿಯಳಲಲ್ಲಿ ಸಿಂಹಾಸನಂ ನೆನೆಯಿತ್ತು
ಇಲ್ಲಿ ಮೊರೆಯಿಡಲಲ್ಲಿ ಹರನ ಕಿವಿದಾಗಿತ್ತು
ಅರಿದು ಶರ್ವಂ ತನ್ನ ಮನದ ಕೆಯ್ಯಂ ನೀಡಿ
ತೆರ ಹರಿದು ತೆಗೆದುಕೊಂಡಂ ಮಹಿಮೆಯಿಂ ಕೂಡಿ
ತೆಗೆದುಕೊಳಲವರಿಂದ ಮುನ್ನಪ್ಪೈಯ್ತಂದಲ್ಲಿ
ಮಿಗೆ ರಜತಗಿರಿಯ ಸೋಪಾನವೇರುತ್ತಲ್ಲಿ
ಇದೆ ನಂಬಿ ಚೇರಮರ್ಕಾಣುತಂ ಬೆರಗಾಗಿ
ಹರಭಕ್ತಿಯಂ ಬೇಡಿಕೊಳುತುಮಿರೆ ಸಿಗ್ಗಾಗಿ



ಕರುಣಿಸುತೆ ನಡೆತಂದಳಪ್ರತಿಮ ಶಿವಭಕ್ತೆ
ಪರಮ ನಂದೀಶ್ವರನ ಬಾಗಿಲ್ಗೆ ಹರಭಕ್ತೆ
ನಂದೀಶ್ವರಂ ಕಂಡು ಕೈಗಳಂ ಮುಗಿವುತಿರೆ
ಬಂದಳೀಶ್ವರನ ಸಭೆ ಕಂಡು ಬೆರಗಾಗುತಿರೆ
ಅಲ್ಲಿ ಮೆಯ್ಯೆಲ್ಲ ಎಲ್ವಾಗಿ ತಲೆಯೂರಿ ಬರೆ
ಅಲ್ಲಿ ಪಾರ್ವತಿ ನೋಡಿ ನಡನಡನೆ ನಡುಗುತಿರೆ
ದೇವಾ ಇದೇನೆಂದು ಮರುಳು ಬಂದಿದೆ ದೇವ
ದೇವ ನಾನಂಜಿದಪೆನಿರಲಮ್ಮೆನೆಲೆ ದೇವ
ಎನುತ ಹಿಂದಂ ಪೊಕ್ಕು ಶಂಭುವಂ ಬಿಗಿದಪ್ಪಿ
ಮನಸಿಜಹರನನಲ್ಲಿ ಭಯದಿಂದ ಬಿಗಿದಪ್ಪಿ
ಅಲ್ಲಲ್ಲ ಎಲೆ ಗಿರಿಜೆ ಕಾರಿಕಾಲೆಮ್ಮೆಯರು
ಅಲ್ಲೆ ಎಲೆ ಗೌರಿ ನಿಮ್ಮತ್ತೆ ನಮ್ಮಮ್ಮೆಯರು
ಎನ್ನಯ ಜನನಿ ಎನಗೆ ಹಣ್ಣಿತ್ತ ಹಿತವೆಯರ್
ಎನ್ನವ್ವೆ ನಿಮ್ಮತ್ತೆ ಕಾರಿಕಾಲಮ್ಮೆಯರ್
ಮರುಳೆಂಬರೇ ವಿಚಾರಂ ನಿನಗೆ ತೋರದೆನೆ
ಮರುಳೆನಲ್ಕಾಗದೌ ದೇವಿ ಪೊಡೆಮಡುವುದೆನೆ
ಕೇಳ್ದಲ್ಲಿ ಕಾರಿಕಾಲಮ್ಮ ಮನದೊಳ್ನೊಂದು
ಅಳ್ದ ಇಂತೆಂಬರೇ ನಿಮ್ಮ ತೊೞ್ತೆನೆಂದು
ಎನಗೆ ನೀ ತಂದೆ ಪಾರ್ವತಿ ತಾಯಿ ಎಲೆ ದೇವ
ಎನಗೆ ನೀವಿರ್ಬರುಂ ಜೀವದುನ್ನತಿ ದೇವ
ಎನುತಲ್ಲಿ ಶಂಕರನ ಚರಣತಳದೊಳ್ಬೀಳೆ
ಅನುನಯದೊಳೆತ್ತಿದಂ ಸಭೆ ಕೌತುಕದೊಳಾಳೆ
ಎತ್ತಿ ಮೆಯ್ಯಂ ತಡವಿ ನೋಡಲೆಯುಮಾದೇವಿ
ಚಿತ್ತದ ವಿರಕ್ತಿಯಂ ಕಂಡಃ ಮಹಾದೇವಿ
ಮೆಯ್ಯೆಲ್ಲವವಿದರ್ಶ ಬಿವಿರ್ಶ ನಿಂದವರುಂಟೆ
ಕೆಯ್ಯೆ ಕಾಲಾಗಿ ತಲೆಯೂರಿ ನಡೆದವರುಂಟೆ
ಭಾಪುರೇ ಜಗದ ತಾಯಾಗಿ ಸಲೆ ನಂದಮ್ಮ
ಭಾಪು ಮಜ ಭಾಪುರೇ ಎಲೆ ಕಾರಿಕಾಲಮ್ಮ
ಎಂದಲ್ಲಿ ಗಣಕುಲಕೆ ತೋರುತುಂ ಬೀರುತುಂ
ನಂದ ಹರಿ ಬೊಮ್ಮರ್ಗೆ ಹೇಳುತುಂ ಹಿಗ್ಗುತುಂ

ಗಣಪದವಿಯಂ ಕಾರಿಕಾಲಮ್ಮೆಗೊಲಿದಿತ್ತು
ಗಣನಿವಹದೊಳ್ಸಲಿಸಿ ಪರಮ ಸುಖಮಂ ಪೊತ್ತು
ಮೇರುಚಾಪಂ ಮಂತ್ರಮೂರ್ತಿ ಶಿವನೊಪ್ಪಿದಂ
ತಾರಾದ್ರಿಯರಮನೆಯೊಳಿಂದುಧರನೊಪ್ಪಿದಂ
ಬ್ರಹ್ಮಶಿರಕೇಶ ದರ್ಭಾಂಕುರದ ಕೆಂದಳಂ
ಅಮ್ಮಮ್ಮ ಪುಲಿದೊವಲದೋವರಿಯ ನಿರ್ಮಳಂ
ಗಜಚರ್ಮದುತ್ತರೀಯದ ಮಹಾ ಬ್ರಾಹ್ಮಣಂ
ಅಜನುಂ ತ್ರಿಶೂಲ ದಂಡದ ನಿತ್ಯ ನಿರ್ಗುಣಂ
ಭಕ್ತಜನಹೃದಯಸರಸಿಜಹಂಸನೊಪ್ಪಿದಂ
ಭಕ್ತನಿಧಿ ಹಂಪೆಯ ವಿರೂಪಾಕ್ಷನೊಪ್ಪಿದಂ ॥

**ಕಂದಪದ್ಯ:—** ತಲೆಯೂರಿ ನಡೆದು ಹೇಮಾ
ಚಲಮಂ ನೆರೆ ಪೊಕ್ಕು ಕಾರಿಕಾಲಮ್ಮೆಯ
ನಿರ್ಮಲಸುತನೆಂದೊಲವಿಂದಂ
ಸಲಹೆನ್ನಂ ದೇವ ಹಂಪೆಯ ವಿರೂಪಾಕ್ಷಂ॥

## ರುದ್ರಪಶುಪತಿಯ ಮಹಾತ್ಮೆ

**ಕಂದ॥** ಅತಿಶಯದಿಂ ಗರಳಧರಂ
ನತಜನ ಸುರಧೇನು ಹಂಪೆಯ ವಿರೂಪಾಕ್ಷಂ
ಶೃತಿಚೂಡಾಮಣಿಗೌರೀ
ಪತಿಮೆರೆದಂ ರುದ್ರಪಶುಪತಿಗಳುಂ ಧರೆಯೊಳ್

### ರಗಳೆ.

ಧರೆಗೆಸೆವ ಚೋಳದೇಶದೊಳೊಂದು ಶಿವಪುರಂ
ಹರನ ಭಕ್ತಿಗೆ ತಾನೆ ನೆಲೆವನೆ ಎನಲ್ಕರಂ
ಮೆರೆವ ತಿರುತಲೆಯೂರೆನಿಪ್ಪ ಪೆಸರಿಂದೊಪ್ಪಿ
ಅರಿಕೆವಟ್ಟಿರ್ಪ್ಪುದಾ ಶಿವನ ಭಕ್ತಿಯನಪ್ಪಿ
ಅಲ್ಲಿ ರುದ್ರಪ್ರಭುವೆನಿಪ್ಪ ವಿಪ್ರಂ ನೋಡ
ಸಲ್ಲೀಲೆ ಪೇರ್ಚಿ ಶಂಕರನ ಭಕ್ತಂ ನೋಡ
ಆತಂಗೆ ರಂಜಿಪಳ್ ಶುಚಿ ಎಂಬ ಸತಿ ನೋಡ
ನೂತನ ಪತಿವ್ರತಾಲಕ್ಷಣಾನ್ವಿತೆ ನೋಡ
ಶಿವಕುಲಂ ಶಿವಬಂಧು ಶಿವನ ಗೋತ್ರಂ ನೋಡ
ಭವನ ಬಳಗಂ ಕೇಳ ಶಿವನನ್ವಯಂ ನೋಡ
ಅಲ್ಲಿ ಶಿವ ಶಿವಭವನ ಭಕ್ತಿಯುದಯಿಸುವಂತೆ
ಅಲ್ಲಿ ಶಶಿಧರನ ಸಾಮರ್ಥ್ಯ ಉದಯಿಸುವಂತೆ
ಅಲ್ಲಿ ರುದ್ರನ ಸೌಕುಮಾರ್ಯ ಉದಯಿಸುವಂತೆ
ಅಲ್ಲಿ ಪಶುಪತಿಯ ಪರಮ ಸ್ನೇಹ ಒಗೆವಂತೆ
ಹುಟ್ಟಿದಂ ಪರಮ ಭಕ್ತಂ ಸತಿಯ ಬಸುರಿಂದೆ

ಹುಟ್ಟಿದ ಮುಹೂರ್ತದಿಂ ವಿಪಗಳನೊಲವಿಂದೆ
ಒಲಿಸುವಂ ಭಕ್ತಿಯಂ ಬಲಿಸುವಂ ನಿಷ್ಠೆಯಂ
ಕಲಿಸುವಂ ಧರೆಗೆ ಈಶನ ಭಕ್ತಿ ಬಟ್ಟೆಯಂ
ಇಂತೆಂದು ಜೋಯಿಸರು ಪೇಳೆ ಹರ್ಷಂದಳೆದು
ಸಂತತಂ ಪುತ್ರಸುಖದಾಶ್ಚರ್ಯಮಂ ಬಡೆದು
ಬಂದು ತಿರುತಲೆಯೂರ ಶಿವನ ಪ್ರಸಾದಮಂ

ತಂದು ಬಾಯ್ಪೆಣ್ಣೆ ಇಕ್ಕಿದರತಿ ಸ್ವಾದುಮಂ
ಜಾತಕರ್ಮಂ ಮಾಡಿ ಸತಿ ಸಂತಸಂಬಟ್ಟು
ನೂತನದ ರುದ್ರ ಪಶುಪತಿ ಎಂದು ಪೆಸರಿಟ್ಟು
ತಂದೆತಾಯ್ಗಳ್ ಸುಖದೊಳೊಂದಿ ನೋಡುತ್ತುಮಿರೆ

ಇಂದುಕಳೆಯಂತೆ ತೊಳತೊಳಗಿ ಬೆಳಗುತ್ತುಮಿರೆ
ಹರೆಯದೊಡನೊಡನೆ ಹರಭಕ್ತಿ ದಳವೇರುತಿರೆ
ಹರಭಕ್ತಿಯೊಡನೊಡನೆ ರೂಪು ದಳವೇರುತಿರೆ
ಷೋಡಶ ಪ್ರಾಯವಾದುದು ಮುಗ್ಧ ಭಕ್ತಂಗೆ
ನೋಡೆ ಚಂದನದ ಶಶಿಯಂತಿರ್ಪ ಭಕ್ತಂಗೆ
ಗುರುಕರುಣವಾದುದಾ ಶಿವಲಿಂಗ ಮೂರ್ತಿಯೊಳ್
ಉರವಣಿಪ ನೇಹವಾಯ್ತಿಂದುಧರ ಮೂರ್ತಿಯೊಳ್

ಮನವೆಂಬ ಭೂಮಿಯೊಳ್ ಭಕ್ತಿಬೀಜವನಿರಿಸಿ
ಅನುನಯದಿ ಪಂಚಾಕ್ಷರಿಯ ವೃಕ್ಷವವತರಿಸಿ
ಶಿವನ ನೆನೆಹೆಂಬ ಫಲವಂ ಪಡೆದು ಜೀವಿಪಂ
ಶಿವನ ಪರಮ ಸ್ನೇಹರಸಮುಮಂ ಸೇವಿಪಂ
ಇಂತು ಶಿವಭಕ್ತಿಯೊಳ್ ಯುಕ್ತಿ ಇಲ್ಲದೆ ಸಂದು
ಸಂತಸದೆ ನಿತ್ಯ ನೇಮಕ್ಕೆ ಮನವಂ ತಂದು
ನಡೆದು ತಿರುತಲೆಯೂರದೇವನಲ್ಲಿಗೆ ಬಂದು

ಮೃಡನೆ ಎನ್ನಭಿಮಾನವೇ ಶಿವನೆ ಶರಣೆಂದು
ಮೆಲ್ಲಮೆಲ್ಲನೆ ಪೂಜೆಯಂ ಪರಿಹರಿಸುತಿರಲ್
ಅಲ್ಲಿ ಲಿಂಗದೊಳೊಂದಿರುಂಪೆ ಪರಿಯುತ್ತಿರಲ್
ಕಂಡು ಪವ್ವನೆ ಹಾರಿ ಮರುಗಿ ಮಿಗೆ ಬಗೆಗೆಟ್ಟು
ಕಂಡೆಯ್ಯಿರುಂಪೆಯೂರಿತ್ತೆಂದು ಬಾಯ್ಬಿಟ್ಟು
ಏನಪ್ಪ ಪಾರ್ವತೀ ಸುಮ್ಮನಿರ್ದಪಿರಪ್ಪ
ಏನಿಂತಿರುಂಪೆಯೂರಲ್ನೋಡುತಿರ್ದಪ್ಪ
ಗಂಡೆ ನಿಗೆದುದೇ ದೇಹದೊಳಗುರಿದುದೆ ತಂದೆ
ಬೆಂದೆ ನಾಂ ಬೆಂದೆ ನಾಂ ನಿಲ್ಲೀಗಳೇ ತಂದೆ



ಎನುತೆ ಪಂಚಾಕ್ಷರಿಗಳಿಂ ಮುಟ್ಟಿ ಮಂತ್ರಿಸುತೆ
ಎನುತೆ ಪಂಚಾಮೃತಂಗಳನಲ್ಲಿ ಮಾಡುತ್ತೆ
ಕಾಲವೈರಿಗೆ ಸಹಸ್ರಾಭಿಷೇಕಂ ಮಾಡಿ
ಮೇಲೆ ಪಂಚಾಕ್ಷರಿಯ ಜಪವನೊಲವಿಂ ಮಾಡಿ
ಬಳಿಕ ಪೂಜಿಸಿ ನಿತ್ಯನೇಮಂಗಳಂ ಮಾಡಿ
ಎಳೆಯ ತನು ಸುಕುಮಾರ ನೊಂದೆ ಎನುತುಂ ನೋಡಿ
ತನಿನೋಟಮುಂ ಪತ್ತೆ ಬೆಟ್ಟತೆಂದಂಜುತಂ
ನೆನೆದುಂ ಮನಂ ಕಠಿಣವೆಂದೆನುತ್ತಂಜುತಂ
ಪೂಜಿಸುವ ಪೂ ಬೀಳೆ ಪಂಚಾಮೃತಂ ಮಾಡಿ
ರಾಜಿಸಲ್ತಾಪಿರಿದು ಪಂಚಾಮೃತಂ ಮಾಡಿ
ಕನಸುಕಂಡೆಯ್ತಂದು ಪಂಚಾಮೃತಂ ಮಾಡಿ
ನೆನಹಿಸೊಳ್ಪಗೆವೆರ್ಚೆ ಪಂಚಾಮೃತಂ ಮಾಡಿ
ಅಲುಕಿದೊಡೆ ಪಂಚಾಮೃತಂಗಳಂ ಮಾಡುತುಂ
ಸಲೆ ನಿರ್ಮಳಂಗೆ ಪರಿಹಾರಮಂ ಮಾಡುತುಂ

ಇರೆ ಹರಂ ಬೆರಗಾಗಿ ಇಂತಿಪ್ಪ ಸುಖಿಯುಂಟೆ
ಧರಣಿಯೊಳಗೆನಗೀತನಿಂದೆ ಮೋಹಿತರುಂಟೆ
ಎಂದುವುಂ ಹೊಲ್ಲಹಂದೋರನಾತನ ಕಣ್ಗೆ
ಎಂದುವುಂ ಚೆಲ್ವನಾಗಿರ್ಪನಾತನ ಕಣ್ಗೆ
ಪೊಲ್ಲವಾಗಿರೆ ಕಂಡು ಸೈರಿಸದೆ ಅಂಜುವಂ
ಎಲ್ಲವಂ ಪರಿಹರಿಸಿಕೊಂಡು ತಾನೊಪ್ಪುವಂ
ಪುಳುವಡರೆ ತೆಗೆದು ಪೂ ಬಾಡಿದೊಡೆ ತಾ ತೆಗೆದು
ಕಳೆವ ಭಕ್ತಂ ನೋವನೆಂದೆಲ್ಲವಂ ತೆಗೆದು
ಇರ್ಪನಾತಂ ಬರ್ಪ ಪೊಳ್ತು ಸುಂದರನಾಗಿ
ಇರ್ಪನಾತನ ಕಣ್ಗೆ ಸುಕುಮಾರತರನಾಗಿ

ಇರೆ ಬಂದು ಪುಟವೆಳ್ದು ಪುಳುಕದಿಂ ಪೂಜಿಸುವ
ಉರವಣಿಪ ನೇಹದಿಂ ನಿಷ್ಠೆಯಿಂ ಪೂಜಿಸುವ
ಅಲ್ಲಿಯುರಗಂಗಳಂ ಪೊರ್ದವಾತನ ಮುಂದೆ
ಅಲ್ಲಿ ಕಠಿಣ ಪ್ರಾಣಿ ಸುಳಿಯುವಾತನ ಮುಂದೆ
ಅರಿಯನಾತಂ ಶಿವನ ಪೆಸರುಗ್ರನೆಂಬುದಂ

ಅರಿಯನಾತಂ ಸರ್ಪಭೂಷನೆಂದೆಂಬುದಂ
ಅರಿಯನೀಶನ ಹಸ್ತದೊಳಗೆ ತಲೆಯಿರ್ಪುದಂ
ಅರಿಯನಾತಂ ಉರದಿ ಶಿರಮಾಲೆದೊಟ್ಟಿದಂ
ಅರಿಯನಾತಂ ಶಿವಂ ಗರಳಧರನೆಂಬುದಂ
ಅರಿಯನಾತಂ ತ್ರಿಶೂಲದಲಿ ಹೆಣನಿರ್ಪುದಂ
ಬಲ್ಲನಾತಂ ಶಿವನುಮಾರಮಣನೆಂಬುದಂ
ಬಲ್ಲನಾತಂ ಶಿವಂ ಸುಖಮೂರ್ತಿಯೆಂಬುದಂ
ಬಲ್ಲನಾತಂ ವಿಮಲ ಚಂದ್ರಧರನೆಂಬುದಂ
ಬಲ್ಲನೀಶಂ ನಿರ್ಮಳೋದಯವನೆಂಬುದಂ
ಬಲ್ಲನಾನಂದಾಬ್ಧಿ ಪೂರ್ಣೇಂದುವೆಂಬುದಂ
ಬಲ್ಲನೀಶಂ ಕೃಪಾವಾರಿನಿಧಿಯೆಂಬುದಂ
ಇಂತು ಶಂಭುವನರಿದು ಸುಖದೊಳರ್ಚಿಸುತಿರ್ದು
ಸಂತಸದೆ ಪಲಕಾಲ ದೇವನನರ್ಚಿಸುತಿರ್ದು

ಒಂದು ದಿನದೊಳ್ ರುದ್ರಪಶುಪತಿಗಳೊಲವಿಂದೆ
ಇಂದುಮೌಳಿಯನರ್ಚಿಸಲ್ಕೆಂದು ಮುದದಿಂದೆ
ಎಂದುಂ ಪುರಾಣಮಂ ಕೇಳ್ದವರಿಯದ ಸಾಧು
ಎಂದುಂ ಕಥಾಗೋಷ್ಠಿಯೊಳಗೆ ಸಲ್ಲದ ಸಾಧು
ಬರುತಿರಲ್ ಶಿವಪುರಾಣದ ಸಭೆ ಇರಲ್ಕಂಡು
ಚರಿತದಿಂ ಮೆಯ್ಯಿಕ್ಕಿ ಕೇಳಲ್ಮನಂಗೊಂಡು

ಕುಳ್ಳಿರ್ದು ವಿಷಜನನವಾದ ಭೀಕರಮುಮಂ
ಬಳ್ಳಿವರಿದಮರರಂ ಸುಡುವ ಪಡಗರಮುಮಂ
ಸುರಸಮಿತಿ ಘೋಳಿಡುವ ಘನತರದ ಸ್ಮೃತಿಗಳಂ
ಹರನ ಕಾಲೊಳ್ಕೆಡೆದು ಮೊರೆಯಿಡುವ ಪರಿಗಳಂ
ಶಿವನಭಯಮಂ ಕೊಟ್ಟು ಕರುಣಿಸಿದ ಪರಿಗಳಂ
ಭವನ ಕರತಳದೊಳಗೆ ವಿಷವಿರ್ದ ಪರಿಗಳಂ
ಕೇಳುತುಂ ಕೊಂಡಾಡುತುಂ ಹಿಗ್ಗಿ ಹೆಚ್ಚುತುಂ
ಬಾಳುತುಂ ದಳವೇರುತುಂ ನಲಿದು ನಚ್ಚುತುಂ
ಪೇಳ್ದ ಕಥೆಯೆಲ್ಲವೊಂದಾದುದೆಂಬಂದದಿಂ



ಕೇಳ್ದ ಭಕ್ತನ ಕಿವಿಗೆ ಪೊಸತಾದ ಚಂದದಿಂ
ಇರಲಾ ವಿಷವನುಂಡನೀಶನೆಂದೆನಲೊಡಂ
ಹರನ ಕಂಠದೊಳಿನ್ನುಮಿರ್ದಪುದೆನಲೊಡಂ

ಎಲೆಲೆ ಕೆಟ್ಟೆಂ ಕೆಟ್ಟೆನೇನಾಯ್ತುದೇನಾಯ್ತು
ಎಲೆಲೆಲೆಲೆ ಎನುತ್ತಂ ಬೇಗ ಜೀವಂ ಪೋಯ್ತು
ಏನೆಂಬೆನಾ ರುದ್ರಪಶುಪತಿಗಳೆಚ್ಚತ್ತು
ನಾನಾ ನಿರೋಧದಿಂ ಕಡುಗೋಪಮಂ ಪೊತ್ತು
ಏನೇನದೆಂತೆಂತು ತಾನೆತ್ತ ವಿಷವೆತ್ತ
ಏನಯ್ಯದೇನಾಯ್ತು ಶಿವನೆತ್ತ ವಿಷವೆತ್ತ
ಉರಿಯೇಕೆ ಹೂವೇಕೆ ವಿಷವೇಕಮೃತವೇಕೆ
ಹರನೇಕೆ ಗರಳವೇಕಾನಿತ್ತ ಬರಲೇಕೆ
ನಿನ್ನೆಯರ್ಚಿಸಿ ಬಂದೆನೊಂದುವುಂ ಭಯವಿಲ್ಲ
ಇನ್ನೆಂತು ಮಾಳ್ಪೆನಿಂತಾದುದಂತಿನಿತಿಲ್ಲ
ಎಲೆ ಪಾಪಿಗಳಿರ ಪರಿಹಾರಮಂ ಮಾಡಿರೇ
ಎಲೆಲೆ ಸತ್ತೆಂ ಕೆಟ್ಟೆನಿನ್ನೆಂತು ಹೇಳಿರೇ
ಅಯ್ಯೋ ಇದೇತಕ್ಕೆ ಸುಮ್ಮನಿರ್ದಪಿರೆಲ್ಲ
ಅಯ್ಯೋ ಶಿವಂ ಸೈರಿಸಲ್ಕೆಯಾರ್ಪವನಲ್ಲ
ಬೆಳ್ದಿಂಗಳಂ ಕೊಳ್ಳಿ ಮುಟ್ಟಿತಿನ್ನೇಕಯ್ಯ
ಅಳ್ದಂಗೆ ವಿಷಧರತ್ವಂ ಬಂದುದೆಂತಯ್ಯ
ಇನ್ನವರನೆಂತಪ್ಪುದೋ ಶಿವಂಗೆಂದೆನುತ
ಮುನ್ನವೇ ಮಾಣಿಸದೆ ಹರಿಯಜರಿದೆಂದೆನುತ
ಪಾಪಿಗಳ್ಸುಮ್ಮನಿರ್ದರೇ ಶಿವದ್ರೋಹಿಗಳ್
ತಾಪತ್ರಯದ ಪದವಿಗೆಳಸಿರ್ಪ ಮೋಹಿಗಳ್
ತಾನೆಂತು ಸೈರಿಸಿದಳಯ್ಯೋ ಮಹಾದೇವಿ
ತಾನರಿದು ಬೇಡೆನ್ನದಿರ್ದಳೆ ಉಮಾದೇವಿ
ಸುರರಳಿದೊಡೇನಲ್ಲಿ ನರರಳಿದಡೇನಲ್ಲಿ
ಹರಿವಿರಿಂಚಿ ಸುರೇಂದ್ರರಳಿದಿರ್ದೊಡೇನಲ್ಲಿ
ಎನಿತು ಸುರರಾಗರೇ ಎನಿತು ನರರಾಗರೇ
ಎನಿತು ದೇವರ ಹಿಂಡುದೊತ್ತುಗಳ್ನೆರೆಯರೇ

ತಾನಿರಲ್ಕೇನಾಗದಯ್ಯೋ ಶಿವಂ ಮರುಳ್
ಏನೆಂಬೆನಯ್ಯೋ ಕರುಣಿ ಹರಂ ನೆರೆ ಮರುಳ್
ಪಲವು ಮಾತೇಕಿದಂ ಬಿಡಿಸುವೇಂ ಬಿಡಿಸುವೇಂ
ನೆಲನರಿಯೆ ಸುಖದಿಂದಲಿರಿಸುವೇಂ ಇರಿಸುವೇಂ
ಎಡೆಕಡೆಯ ದೇವರಿಂ ಹೋಗದಿದು ಪಿರಿದೆಂದು
ವೃಡನಿತ್ತ ಪಂಚಾಕ್ಷರಿಯನೆ ಜಪಿಸುವೆನೆಂಬು
ಇರ್ದಂ ಪುರಾಣಸಭೆ ಕೌತುಕಂಬಡುತಿರಲ್
ಇರ್ದ ಶಿವಭಕ್ತರೆಲ್ಲಚ್ಚರಿವಡುತ್ತಿರಲ್

ಪೊರಮಟ್ಟನಲ್ಲಿ ಪಂಚಾಕ್ಷರಿಯ ಸಾಧಕಂ
ಪೊರಮಟ್ಟನಮ್ಮಮ್ಮ ಶಿವಭಕ್ತಿವೇಧಕಂ
ಬಂದನುರವಣಿಸುತಂ ಭಕ್ತಿವಾರ್ಧಿಯ ತಡೆಗೆ
ನಿಂದನೊಲವಿಂ ವಿಷಂ ಪರಿಹಾರವಪ್ಪೆಡೆಗೆ
ಪ್ರೇಮಾಂಬುನಿಧಿಯಂ ಸಿರಾಕುಳಂ ಪುಗುವಂತೆ
ಕಾಮಹರನುರವಣೆಯ ನಿಷ್ಠೆಯಂ ಪುಗುವಂತೆ
ಪೊಕ್ಕನಂಬುಧಿಯೊಳಗೆ ಕಂಠಪ್ರಮಾಣಮಂ
ಮಿಕ್ಕು ಮಿಗೆ ಧರಿಸಿ ಪಂಚಾಕ್ಷರಿಯ ಮಂತ್ರಮಂ
ಜ್ವಲನಂ ಜ್ವರಂಗೊಂಡನೆಂದು ಮಂತ್ರಿಸುವಂತೆ
ಜಲಕೆ ಶೀತಂ ಬಂದುದೆಂದು ಭಾವಿಸುವಂತೆ
ಮಾರುತಂಗುರಿ ಪತ್ತಿತೆಂದು ಮಾಣಿಸುವಂತೆ
ಧಾರುಣಿಗೆ ಮಸೆ ಮುಟ್ಟಿತೆಂದು ಮಂತ್ರಿಸುವಂತೆ
ನಭಮಂ ವಿಷಂ ಪತ್ತಿತೆಂದು ಮಂತ್ರಿಸುವಂತೆ
ಅಭವನ ಕೊರಲ್ಗರಳಮಂ ಮಾಣಿಸಲ್ಕೆಂತೆ
ಪ್ರೇಮಾಬ್ಧಿಯೊಳ್ಭಕ್ತಿ ತಲೆದೋರಿದೆಂಬಂತೆ
ಆ ಮಹಾರ್ಣವದೊಳಗೆ ತಲೆದೋರಿ ನಿಂದಂತೆ
ತೊಡಗಿದಂ ಜಪಿಸಲುಂ ಪಂಚಾಕ್ಷರಿಯನಲ್ಲಿ

ನಡುಗುತಿರೆ ಹರಿಯಜರ್ಸುರಾವಳಿಗಳಂತಲ್ಲಿ
ಹೃವಯದೊಳಗೀಶ್ವರನ ಕೊರಳಗರಳವ ನೆನೆದು
ಸದಮಳ ಮನಂ ಚಿತ್ತದೊಳ್ ಭಕ್ತಿಯಿಂ ನೆನೆದು



ಪಂಚಾಕ್ಷರಿ ರಸದ ಲಹರಿಯೊಳ್ತೇಂಕಾಡೆ
ಪಂಚಮುಖ ಶರಣೆನುತೆ ಕಡು ನಿಷ್ಠೆ ಕೈಗೂಡೆ
ಶ್ರೀ ರುದ್ರ ಜಪದಿಂದೆ ಶ್ರೀರುದ್ರನಂಜುತ್ತೆ
ತಾ ರೌದ್ರದಿಂದೆ ಜಪಿಸುವ ನಿಷ್ಠೆಯೊಳಗಿಂತೆ
ಕಣ್ಮುಚ್ಚಿ ನೆರೆ ನಚ್ಚಿ ಮೆಚ್ಚಿ ಜಪಿಯಿಸುತಿರ್ದ
ಉಣ್ಮ್ಮಾವಾನಂದದಿಂ ನಿಂದು ಜಪಿಯಿಸುತಿರ್ದ
ಅತ್ತಿತ್ತ ಜಾರದಚಲಂ ಜಪಿಯಿಸುತಿರ್ದ
ಉತ್ತಮ ಪದಾರೂಢನೊಲ್ದು ಜಪಿಯಿಸುತಿರ್ದ
ಅಪ್ರತಿಮನಾನಂದಮೂರ್ತಿ ಜಪಿಯಿಸುತಿರ್ದ
ಅಪ್ರತಿಹತ ಪ್ರಬಳಕೀರ್ತಿ ಜಪಿಯಿಸುತಿರ್ದ
ಭಕ್ತಚಿಂತಾಮಣಿಯು ತಾನು ಜಪಿಯಿಸುತಿರ್ದ
ಅಮ್ಮಮ್ಮ ರುದ್ರಪಶುಪತಿಯೆ ಜಪಿಯಿಸುತಿರ್ದ

ಇಂತು ಜಪಿಯಿಸುತಿರಲ್ ಜಲಚರಂಗಳ್ಕದುರ್ಕೆ
ಪಿಂತೆ ಮುಂತೆನ್ನದಾ ಜಲಚರಂಗಳ್ಕಮುರ್ಕೆ
ಅಳಿಯದಳುಕವೆ ಹದಿರದಲ್ಲಿ ಜಪಿಸುತ್ತಿರಲ್
ಸುಳಿದು ತನುವೆಲ್ಲಮಂ ತೆಗೆಯೆ ಜಪಿಸುತ್ತಿರಲ್
ಎಲ್ವುಳಿಯಲೆಲ್ಲವಂ ಜಲಚರಂಗಳ್ಕೊಳಲ್
ಜಿಲ್ವಗೆಡಿಸುತ್ತವಯವಂಗಳೊಳಗಂ ಕೊಳಲ್
ಅಸ್ತಿಯುಳಿದುದು ಪುಣ್ಯರೂಪು ತಾನೆಂಬಂತೆ
ಅಸ್ತಿಮಾಲಾಧರಂಗರ್ಪಿತವಿವೆಂಬಂತೆ
ಆಯು ತೀರ್ದೊಡೆ ನಿಷ್ಠೆ ತೀರಲೀಯದೆ ಪಿಡಿಯೆ
ಕಾಯವಳಿದೊಡೆ ಮನಂ ನೇಹವಾರದೆ ಪಿಡಿಯೆ
ಅಲ್ಲಿ ತಮ್ಮಯ ಪದವಿಗಂಜಿ ದೇವರ್ಕಳುಂ
ಅಲ್ಲಿ ತಮತಮಗಂಜಿ ದೇವರ್ಕಳುಂ
ಅಲ್ಲಿ ಭಕ್ತಂ ದೇಹ ಮೋಹಮಂ ತಾನರಿಯ
ಅಲ್ಲಿ ಭಕ್ತಂ ಬಯಸುವರ್ಥಮಂ ತಾನರಿಯ
ಎಳಿಸುವನೆ ಶಿವಭಕ್ತನಜವಿಷ್ಣು ಪದವಿಯಂ
ಎಳಿಸುವನೆ ಭಕ್ತಿಯಲ್ಲದೆ ಕೆಡುವ ಪದವಿಯಂ

ಎಂಬ ಪುಣ್ಯಕ್ಕೆ ನೆಲೆಯಾಗಿ ಜಪಿಯಿಸುತಿರಲ್
ನಂಬಿ ಕೆಲವುಂ ಕಾಲವಿಂತು ಜಪಿಯಿಸುತಿರಲ್

ಜಪಿಯಿಸುವ ಸಾಮರ್ಥ್ಯವೈದಿತ್ತಾ ರುದ್ರನಂ
ಕಪಟವಿಲ್ಲದ ಮೋಹದಲ್ಲಿ ಕರುಣಾಳ್ದನಂ
ಪರಿದೆಯ್ದದಿರಬಾರದೆಂದು ಕರುಣಾಕರಂ
ಗಿರಿಜೆಯೊಡನುಡಿದನೆಂದುಂ ಚಂದ್ರಶೇಖರಂ
ಅಂದಿಗೆ ಮಹಾವಿಷಂ ಕಂಠಭೂಷಣವಾಯ್ತು
ಇಂದಿವನ ಪ್ರೇಮಲತೆ ಕೊರಲಪಾಶಮದಾಯ್ತು
ನಡೆ ಗಿರಿಜೆ ನೋಡುವ ಎನ್ನ ಭಕ್ತನನೆಂದು
ಮೃಡನಲ್ಲಿ ಬರುತಿರ್ದನೀ ಧರೆಗೆ ಪೊಸತೆಂದು
ಬರುತಲ್ಲಿ ಗಿರಿಜೆಯಂ ಕಾಣದಂತಿರಿಸಿದಂ
ಚರಿತದಿಂ ತಾನೊಂದು ವೇಷಮಂ ಧರಿಸಿದಂ
ಧರಿಸುತಂ ಭಕ್ತಿವಾರ್ಧಿಯ ತಡೆಯೊಳಂ ನಿಂದು

ಹರನೊಲ್ದು ನುಡಿದನಾ ರುದ್ರಪಶುಪತಿಗಂದು
ಎಲೆ ಭಕ್ತ ನೀನೇಕೆ ನಡುನೀರೊಳಿರ್ದಪೇ
ಜಲಧಿಯೊಳ್ಮಾಳ್ಪ ತಪವಾವುದೇಕಿರ್ದಪೇ
ಪೇಳೆನಲ್ ಶಂಕರನ ಕೊರಲ ಗರಳಮನಿಂದು
ಕೇಳಿ ಪರಿಹರಿಸಿದಲ್ಲದೆ ಚಲಿಸೆ ನಾನೆಂದು
ನುಡಿಯಲಟ್ಟಾಸುರಂ ಮಸಗಿ ನಕ್ಕಂ ಭಕ್ತ
ಒಡನೊಡನೆ ಕಟಕಿಗಳನಾಡುತಿರ್ದಂ ಭಕ್ತ

ಎಲೆ ಶಿಶುವೆ ನೀನೇ ಮಹಾ ಗರಳವಂ ಕಳೆಸೆ
ನೆಲದೊಳಗೆ ಮುನ್ನವಿಂತಪ್ಪ ವಾರ್ತೆಗಳೊಳವೆ
ಬಿಡಿಸುವೆಂ ಬೇರುಂಟದಂ ಬಿಡಿಸಲೇತಕ್ಕು
ಮೃಡನುಂಡ ಗರಳವಾಗಳೆ ಹೋದುದಕ್ಕಕ್ಕು
ಗರಳ ಒಂದೇ ಹರಂ ಧರಿಸಿರ್ಪುದದು ನೋಡು
ಮರುಳಾಗದಿರು ನಿನ್ನ ವಶವಲ್ಲ ಬಿಟ್ಟೋಡು
ಕೆಯ್ಯ ತಲೆಯಂ ಬಿಡಿಸು ಕೊಟ್ಟ ಹಾವಂ ಬಿಡಿಸು



ಮೆಯ್ಯೊಳ್ಸರಂಗೊಂಡ ಸುರರ ಶಿರಮಂ ಬಿಡಿಸು
ತ್ರಿಸುಳಮಂ ಬಿಡಿಸಿ ಕಳೆ ಗಜಚರ್ಮವಂ ಬಿಡಿಸು
ಎಸೆವ ಶೂಲದೊಳಿರ್ಪ ಹರಿಯ ಹೆಣನಂ ಬಿಡಿಸು
ನೀನೇಕೆ ವಿಷವೇಕೆ ಬಿಡಿಸುವಾಯಸವೇಕೆ
ನೀನೇಕೆ ಹರನೇಕೆ ಪೊರಮಡಾಯಸವೇಕೆ

ಎನೆ ರುದ್ರ ಪಶುಪತಿಗಳಲ್ಲಿ ಸುತ್ರನೆ ಸುಯ್ದು
ಎನಗೇಕೆ ರುದ್ರಜಪ ಒಪ್ಪದೆನುತಂ ಬಯ್ದು
ವಿಷದ ಹವಣಲ್ಲಮೀ ನಿಂದೆ ಬಂದಿರ್ದಪುದು
ಪಶುಪತಿಯೆ ಕರುಣಿಸೆನಗಿಂತಿದೇಕಾದಪುದು
ಮುನ್ನಮೀ ನಿಂದೆಯಂ ತೀರ್ಚಿಕೊಂಬೆಂ ಬಳಿಕ
ಎನ್ನ ಶಂಕರನ ವಿಷಮಂ ಬಿಡಿಸುವೆಂ ಬಳಿಕ
ಎಂದು ನುಡಿವುತ್ತಿರಲ್ಮತ್ತೆ ಕಟಕಿಯನಾಡೆ
ನೊಂದು ಘುಡಿಘುಡಿಸಿ ಘೂರ್ಮಿಸುವ ಕೋಪಂ ಮೂಡೆ
ಶರಧಿ ಇರ್ಬಗೆಯಾಗಲಾ ಸ್ಫೋಟಿಸುತೆ ಹೊಯ್ದು
ಹರನಿಂದೆಯಂ ಕೇಳಲಾರದೆ ಕರಂ ಕಾಯ್ದು
ಕೈಸಾರ್ದ ತಪವನೀಶ್ವರನಲ್ಲಿ ಬಿಡುವಂತೆ
ಪ್ರೈಸಾರ್ದ ನಿಷ್ಠೆಯಂ ರುದ್ರಂಗೆ ಕೊಡುವಂತೆ
ಬಿಡು ಬಿಡು ವಿಷವನೆಂದು ಮಂತ್ರಿಸುತ್ತಿಡುವಂತೆ
ಮೃಡನ ಚರಣಕ್ಕೆ ಸಲಿಲಾಂಜುಲಿಯನಿಡುವಂತೆ
ಎಲೆಲೆ ಶಿವನಿಂದಕನೆ ಅಡಗಡಗೆನುತ ಮೇಲೆ
ಜಲವನಭಿಮಂತ್ರಿಸುತ್ತಿಟ್ಟನಾತನ ಮೇಲೆ

ಇಡೆ ಶಿವಂ ಸತ್ಯದುರವಣೆಯ ನೇಹಕ್ಕಂಜಿ
ಕಡು ಹೊಸತೆನುತ್ತೆ ವೇಷವ ಬಿಟ್ಟನಂದಂಜಿ
ಆವನಾದೊಡೆ ಏನು ಕೃತ್ಯವುಂ ಗೆಲ್ವುದೇ
ದೇವನಾದೊಡೆ ಏನು ಸಟೆ ದಿಟಕೆ ನಿಲ್ವುದೇ
ವೇಷವಾಗಳೆ ಹಾರಿ ಹೋದುದೀಶ್ವರನಿರ್ದ
ಅಸುರದ ದಶಭುಜಂ ಪಂಚವಕ್ತ್ರದೊಳಿರ್ದ

ಇಂದುಕಳೆ ಜಡೆ ಕುಂಡಲಂಗಳಿಂದೊಪ್ಪಿರ್ದ
ಅಂದು ನಗೆಮೊಗದಗಜೆಯಿಂದೆ ಮೆರೆವುತ್ತಿರ್ದ

ಇರೆ ಕಂಡು ರುದ್ರಪಶುಪತಿಗಳಚ್ಚರಿವಟ್ಟು
ಹರನ ನಿಲವೆಂದರಿದು ಹರ್ಷವಂ ಮುಂದಿಟ್ಟು
ಬಿಡುಬಿಡೆನ್ನಾಣೆ ಹಿರಿಯಾಣೆ ನಿನಗೆಂದೆನುತೆ
ಬಿಡುಬಿಡು ವಿಷವನುಣ್ಬರೇ ಸದಾಶಿವ ಎನುತೆ
ಶರಧಿಯಂ ಪೊರಮಟ್ಟು ಗಳಗಳನೆ ನಡೆತರಲ್
ಹರನ ಕೊರಳೊಳಗಲ್ಲಿ ವಿಷವಿಲ್ಲದಂತಿರಲ್
ಎಲೆ ತಂದೆ ವಿಷವೆಲ್ಲಿ ಯಾವ ಕಯ್ಯೊಳ್ಪಿಡಿದೆ
ಎಲೆ ತಂದೆ ಹೇಳೆನಗೆ ಕೊರಳೊಳೇಕ್ಕೈತಂದೆ
ತಾಯೇ ಮಹಾದೇವಿ ಸೈರಿಸುವರೇ ಅವ್ವ
ತಾಯೆ ನಿನ್ನೋಲೆ ಕಲ್ಲೋಲೆಯಪ್ಪುದೆಯವ್ವ
ಎಲ್ಲಿ ವಿಷವುಂ ತೊಡದೆ ಕೊರಲೊಳೇಕೆಂದೆನುತೆ
ಅಲ್ಲಿ ಮುಟ್ಟಿತ್ತುಂ ನಮಶ್ಶಿವಾಯೆಂದೆನುತೆ
ಪಂಚಾಕ್ಷರಿಗಳಿಂದೆ ಮತ್ತಲ್ಲಿ ಮಂತ್ರಿಸುತೆ

ಪಂಚವದನಂ ಕಂಡು ಕಡು ಹಿಗ್ಗುತಂ ನಿಲುತೆ
ಕೆಯ್ಯುಮುಂ ಕೊರಳುಮುಂ ವಾಸಿಸಿಯೆ ನೋಡುತ್ತೆ
ಒಯ್ಯನೊಯ್ಯನೆ ನಾಲಿಗೆಯೊಳೀಂಟೆ ನೋಡುತ್ತೆ
ಒಂದು ಚೋಹಕ್ಕೆ ಬರ್ದುಕಿದೆ ತಂದೆ ಸಾಕಯ್ಯ
ಎಂದು ಇಂತಪ್ಪುದಂ ಮಾಡದಿರು ಕಂಡಯ್ಯ
ಇನ್ನಗಲೆನೊಂದುವಂ ಮಾಡಲಿಯ್ಯೆಂ ನೋಡ
ಇನ್ನಿವರ ವಶವಶವೆ ನಿನ್ನಂ ಬಿಡೆಂ ನೋಡ
ಹರಿಯಾಯುವಜನಾಯು ಸುರರಾಯು ನಿನಗೆಂದು
ಧರೆಯಾಯು ಅಮರಮುನಿತತಿಯಾಯು ನಿನಗೆಂದು
ಹರಿಸುತಿರೆ ಮುಂದಿರ್ದ ರುದ್ರಪಶುಪತಿಗಳಂ
ಹರುಷದಿಂ ನೋಡುತುಂ ನೇಹ ರಸ ಪರಿಗಳಂ
ಮೊಗದೊಳಗೆ ಕೆಯ್ಯಿಟ್ಟು ತಲೆದೂಗಿ ಬೆರಗಾಗಿ
ಅಗಜೆ ನೋಡೆನ್ನ ಸದ್ಭಕ್ತನ ನೆನುತ ಬೀಗಿ



ಮೆಯ್ಯೆಲ್ಲವಂ ಮುಟ್ಟಿ ಮುಟ್ಟಿ ತಲೆದಡವುತುಂ
ಮೆಯ್ಯಿಂದಲವಯವಂಗಳ ನೋಡಿ ತಡವುತುಂ
ಜಲಚರಂಗಳ್ಮದುಕೆ ಚಲಿಸದಿರ್ದವರುಂಟೆ
ತಲೆಯುಳಿಯೆ ಎಲುದೋರೆ ನಿಂದಿರ್ದರಿಂತುಂಟೆ
ನೋಡೆನಗೆ ಶ್ರೀ ರುದ್ರಮುಂ ಜಪಿಸಿದವರುಂಟೆ
ನೋಡು ಸಂದೀಶ ಕಡು ಮೋಹಿತರ್ಪೇರರುಂಟೆ
ಎನೆ ಹರಿಯಜರ್ತಲೆಗಳಂ ನೀವಿಕೊಳುತಂದು
ತನತನಗೆ ಪದವಿ ಬರ್ದುಕಿದೆನೆನುತ್ತೈಯ್ತಂದು
ಪೊಡಮಡುತೆ ನಿಂದಿರಲ್ಪೂಮಳೆಗಳೆರಗಿದವು
ಪೊಳವಿ ನಡುಗಲ್ದುಂದುಭಿ ಧ್ವಾನಮುಣ್ಮಿದವು

ಆಗಳೀಶ್ವರನಲ್ಲಿ ಗಿರಿಜೆಯ ಮೊಗಂ ನೋಡಿ
ಏಗೆಯ್ಯರೆನ್ನನರೆನುತ್ತೆಯೊಲವಿಂ ನೋಡಿ
ಎನ್ನನಲ್ಲದೆ ನೋಡರೆನ್ನ ಭಕ್ತಗಿರಿಜೆ
ಎನ್ನನಲ್ಲದೆ ಬಯಸರೆನ್ನ ಭಕ್ತಗಿರಿಜೆ
ಆನವರ್ಗೆನಗವರೆ ಭೇದವೆನಗಿನಿತಿಲ್ಲ
ಈ ನೆಲದೊಳೆನ್ನವರ್ಗೆಣೆ ಇಲ್ಲ ಹೊಣೆ ಇಲ್ಲ

ಎಂದು ನವರತ್ನದ ವಿಮಾನವಂ ತರಿಸಿದಂ
ಬಂದು ಶ್ರೀ ಕೈಲಾಸಪುರದೊಳವತರಿಸಿದಂ
ರುದ್ರಪಶುಪತಿಗಳ್ಗೆ ಗಣಪದವಿಯಂ ಕೊಟ್ಟು
ರುದ್ರನೊಪ್ಪಿದನಲ್ಲಿ ಹರುಷವಂ ಮುಂದಿಟ್ಟು
ಸಕಲ ಗಣಸಂಕುಳದೊಳಪ್ರತಿಮನೊಪ್ಪಿದಂ
ಸಕಳ ಸುರ ಮಕುಟರಂಜಿತಚರಣನೊಪ್ಪಿದಂ
ಶಶಿಧರಂ ಶಂಕರಂ ವಿಷಮಾಕ್ಷನೊಪ್ಪಿದಂ
ವಿಷಧರಂ ಸ್ಮರಹರಂ ಪುರಹರಣನೊಪ್ಪಿದಂ
ಆದಿಮಧ್ಯಾಂತ ಶೂನ್ಯಂ ಶಂಭುವೊಪ್ಪಿದಂ
ನಾದರೂಪಂ ವೇದವಿಸ್ತಾರನೊಪ್ಪಿದಂ
ಸರ್ವಗತನೊಪ್ಪಿದಂ ಸರ್ವೇಶನೊಪ್ಪಿದಂ
ಸರ್ವ ದೇವಪ್ರತಿಷ್ಠಾಚಾರ್ಯನೊಪ್ಪಿದಂ

ನೀಳಗಳನೊಪ್ಪಿದಂ ನಿರ್ದೈವನೊಪ್ಪಿದಂ
ಭಾಳಾಕ್ಷ ಹಂಪೆಯಧಿನಾಥನಿಂತೊಪ್ಪಿದಂ ॥

ಕಂದ— ಕರಿಗೊರಲಂ ಕರುಣಂ ಮಿಗೆ
ಮೆರೆಯಿಸುತಂ ರುದ್ರಪಶುಪತಿಗಳಂ ಧರೆಯೊಳ್
ಮೆರೆದ ಮಹೇಶಂ ಭಕ್ತಿಯ
ನರುಪುಗೆಯೆನಗೊಲ್ದು ಹಂಪೆಯ ವಿರೂಪಾಕ್ಷಂ ॥

---

## ತಿರುನಾಳ್ಪೋವರ ಮಹಾತ್ಮೆ.

ಕಂದ— ಹರನಘಕುಲ ಹರನಂತಕ ।
ಹರನತನುಹರಂ ಪಾಪೌಘ ಹರನಾರ್ಥ ಹರಂ
ದುರಿತಹರಂಮಿಗೆ ಮೆರೆದಂ
ತಿರುನಾಳ್ಪೋವರನೆ ಹಂಪೆಯ ವಿರೂಪಾಕ್ಷಂ ॥

### ರಗಳೆ.

ಚೋಳನ ದೇಶದೊಳಂದೆಸೆವ ಪುರಂ
ಕೇಳೊಪ್ಪುತ್ತಿರ್ಪುದು ಪುಣ್ಯಕರಂ
ನಾಮಂ ಮೆರೆವ ವನೂರೆನಿಸಿಪ್ಪುದು
ಭೂಮಿಗೆ ತಾನೆ ವಿಚಿತ್ರವೆನಿಪ್ಪುದು
ಅಲ್ಲಿರ್ಪಂ ಸರ್ವೇಶನ ಭಕ್ತಂ
ಸಲ್ಲಲಿತಂ ಸತ್ಯಂ ಶಿವಯುಕ್ತಂ
ತಿರುನಾಳ್ಪೋವರೆನಿರ್ಪುದು ನಾಮಂ
ಪುರಮಥನಂಗತ್ಯಂತ ಪ್ರೇಮಂ
ಹಿರಿಯ ಮಹೇಶ್ವರನೆಂದೆನಿಸಿರ್ಪಂ
ಹರನಾನಂದದೊಳಗೆ ಸಂದಿರ್ಪಂ
ಕುಲದೊಳ್ಕಿರಿಯಂ ಮನದೊಳ್ಪಿರಿಯಂ
ನೆಲದೊಳ್ಕಿರಿಯಂ ಪರದೊಳ್ಪಿರಿಯಂ

ಇಂತಿರ್ದೊಂದು ದಿನಂ ಚಿಂತಿಸಿದಂ
ಸಂತತ ತಿರುನಾಳ್ಪೋಗಲ್ನೆನೆದಂ
ನಾಳೇನಂ ಮಾಡಿದೊಡಂ ಪೋಪೆಂ
ಶೂಲಿಯ ಪೊನ್ನಾಂಬಲಕಾಂ ಪೋಪೆಂ
ಇಂದಿರುಳೆಲ್ಲಂ ಚಿಂತೆಯೊಳಿರುತಂ
ಇಂದುಧರನ ತಿರುನಾಳೊಳಗಿರುತಂ
ಬೆಳಗಾಗಲ್ಸಾಸಿರ ಕೆಲಸಂ ಬರೆ
ತಳವೆಳಗಾದಂ ಪಾರ್ವಂ ಬಂದಿರೆ
ಇಂದಿನ ಕೆಲಸವನೀಗಳೆ ಮಾಳ್ಪೆಂ

ಕುಂದದೆ ನಾಳೆಲ್ಲವ ನಾಂ ಪಾಳ್ವೆಂ
ಎಂದಿಂತೆನುತಿರೆ ಪುರುದಿನಕೆಲ್ಲಂ
ಕುಂದದೆ ಕೆಲಸಂ ಬರುತಿರಲೆಲ್ಲಂ

ನಿಚ್ಚಂ ನಾಳೆಂಬಬ್ಬರವಿಡಿದುದು
ನಿಚ್ಚಲಿ ತಿರುನಾಳಾರ್ಥಂ ಪಿಡಿದುದು
ಕೇಳ್ವುದು ಕಳೆ ನೆನೆವುದು ಪೊನ್ನಾಂಬಲ
ಬಾಳ್ವುದು ತನು ಬದುಕಂ ಪೊನ್ನಾಂಬಲ
ಉಂಬುದು ಕೈ ಕಾಣ್ಬುದು ಪೊನ್ನಾಂಬಲ
ಕೊಂಬುದು ತನು ಹರುಷಂ ಪೊನ್ನಾಂಬಲ
ಇರ್ಪುದು ಮನೆ ನೆನೆವುದು ಪೊನ್ನಾಂಬಲ
ಬರ್ಪುದು ಪೋಪುದು ನೆರೆ ಪೊನ್ನಾಂಬಲ
ಇರವುಂ ಪುರವುಂ ತಿರುನಾಳಾದುದು
ನೆರವುಂ ಬರವುಂ ತಿರುನಾಳಾದುದು
ಪಿತನುಂ ಪತಿಯುಂ ತಿರುನಾಳಾದುದು
ಗತಿಯುಂ ಮತಿಯುಂ ತಿರುನಾಳಾದುದು
ತಿರುನಾಳಿಂ ಬಪ್ಪವರಂ ಕಂಡರೆ
ಹರಣಂ ಬಂದಂದದೆ ಸುಖವಿಡಿದಿರೆ
ಕಾಲಂ ಕಣ್ಗಳೊಳೊತ್ತುತ್ತಿರ್ಪಂ
ನಾಲಿಗೆಯೊಳ್ತಿರುನಾಳೆನುತಿರ್ಪಂ
ಕನಸಿನೊಳಂ ತಿರುನಾಳೆನುತಿರ್ಪಂ
ಉಂಬುವಡುಡುವಡೆ ತಿರುನಾಳೆಂಬಂ
ಕೊಂಬಡೆ ಕೊಡುವಡೆ ತಿರುನಾಳೆಂಬಂ
ಕರೆವೊಡೆ ನೆರೆವೊಡೆ ತಿರುನಾಳೆಂಬಂ
ತಿರುನಾಳ್ತಿರುನಾಳ್ತಿರುನಾಳೆಂಬಂ

ಇಂತಿರೆ ಪನ್ನೆರಡುಂ ವತ್ಸರಮುಂ
ಸಂತತ ತಿರುನಾಳೆನುತಿರ್ಪಿರಮುಂ
ತಿರುನಾಳಾಗಿಯೆ ನೆರೆ ಕೈಕೊಂಡಂ



ಪರಮೇಶಂ ಕರುಣಿಸಿ ಕೈಕೊಂಡಂ
ಇಂಲಿರುಳಾಗಲ್ಮನೆಗೆಯ್ತಂದಂ
ಭಂದಿಂ ಸುತ್ರನೆ ಸುಯ್ದಿಂತೆಂದಂ
ದೇವಾ ಇನ್ನಿನಿತಲ್ಲಿಯೆ ಸಾವೆನೆ
ದೇವಾ ತಿರುನಾಳ್ಕಾಣದೆ ಬೇವೆನೆ
ಅಯ್ಯೋ ಶಿವನೇ ಕರುಣಿಸು ಕರುಣಿಸು
ಅಯ್ಯೋ ಪೊನ್ನಾಂಬಲನೇ ಕರುಣಿಸು
ಎಂದಿಂತಾತಂ ಚಿಂತಾತುರಮುಂ
ಸಂದಿಸೆ ಸುಮ್ಮನೆ ನಿದ್ರೆಗಳಿರಮುಂ

ಕೊಂಡಿರುತಿರಲಾ ಯುಗ್ಮಾದಿವಸಂ
ತಂಡದೆ ಪೊನ್ನಾಂಬಲಕಾ ಕೆಲಸಂ
ಪಂಗುನಿ ತಿರುನಾಳ್ಗಂ ನೆಲ್ಲಡಕುವ
ಹಿಂಗದೆ ಪೊನ್ನಾಂಬಲಕಂದೆಯ್ಪುವ
ಹರನಲ್ಲಿಗೆ ನೆರೆ ಬಿಟ್ಟಿಗಳಾದವು
ತಿರುನಾಳ್ಪೋವರ ತುಷ್ಟಿಗಳಾದವು
ಬೆಳಗಾಗಲ್ಪಾರ್ವಂ ನಡೆತಂದಂ
ಕಳಿಪುವ ಭರದಿಂ ಕರೆದಿಂತೆಂದಂ
ಏಳೇಳ್ತಿರುನಾಳ್ಪೋವನೆ ಬಾರೆನೆ
ಏಳೇಳ್ಕೆಲಸಂ ಬಂದುದು ಬಾರೆನೆ
ಅಯ್ಯೋ ಕೆಲಸಂ ಕುಂದದೆ ಹೋದುದೆ
ಅಯ್ಯೋ ತಿರುನಾಳೆನಗಿಲ್ಲಾದುದೆ
ಎನಲೇಳೆಲವೋ ಪೊನ್ನಾಂಬಲಕಂ
ನಿನಗಾದುದು ಬಿಟ್ಟಿಯುಮೀ ದಿನಕಂ

ಎಂದೆನೆ ಪಟ್ಟಿರ್ದವನೆಳ್ದಾಗಲ್
ಸಂದಣಿಸಿದ ಪುಳಕಂಗಳೊಳಾಗಲ್
ಹೊರಳುತ್ತುರುಳುತೆ ಬೊಬ್ಬಿರಿದಾಡುತೆ
ಅರಳುತ್ತುಬ್ಬುತ್ತೊಲವಿಂದಾಡುತೆ
ಏನೇನೆಂತೋ ಪೊನ್ನಾಂಬಲಕಂ

ಆನೆಯೆ ಬಿಟ್ಟಿಯೆ ಪೊನ್ನಾಂಬಲಕಂ
ಆಹಾ ಆಹಾ ಪೊನ್ನಾಂಬಲಕಂ
ಓಹೋ ಓಹೋ ಪೊನ್ನಾಂಬಲಕಂ

ಎನುತುಂ ತೊನೆಯುತ್ತಂ ಕೂಗುತ್ತಂ
ಮನೆಯಂ ಹಿರಿಹಿರಿದಾಡಾಡುತ್ತಂ
ಮತ್ತಂ ಮಗುಳ್ದು ಕೇಳುತೆ ಬಾಳುತೆ
ಸುತ್ತಂ ಸುಳಿವುತ್ತಂ ಪುಟವೇಳುತೆ
ನಡ ನಡೆ ಹೊರಿಸಯ್ದಾರೇಳೆಂಟಂ
ತಡವೇಕೆಂದೆನುತೀಶನ ಬಂಟಂ
ನಲಿವುತೆ ಕೆಲೆವುತೆ ಕುಕಿಲಿರಿದಾಡುತೆ
ಮಲೆಯುತೆ ಮೂಡುತೆ ದಿಟ್ಟಿಸಿ ನೋಡುತೆ
ಪೊನ್ನಾಂಬಲದತ್ತಂ ನಡೆ ನೋಡುತೆ
ಇನ್ನಾಂ ಬರ್ದುಕಿದೆನೆನುತೊಲಿದಾಡುತೆ
ಪೇರಂಬಲಮಂ ಗುಂಕಿಸಿ ನೋಡುತೆ
ಹಾರೈಸುತೆ ಹಾರುತ್ತಂ ನೋಡುತೆ
ಶಿವಭಕ್ತಿಯ ಬಿತ್ತಂ ಪೊರುವಂದದಿ
ಭವನಿಷ್ಠೆಯ ಬರವಂ ಪೊರುವಂದದಿ
ತಿರುನಾಳಂ ತಲೆಗೇರಿಸುವಂದದಿ
ಹರಪದಮಂ ಶಿರದೊಳ್ಪೊರುವಂದದಿ
ಧರಿಸಿದನೊಂದೆರಡುಂ ಮೂಡೆಗಳಂ
ಹರಹರ ಶಂಕರನ ಕ್ರೀಡೆಗಳಂ
ಬಿಟ್ಟಿಗಳೊಡ ನಲವಿಂ ನಡೆಗೊಂಡಂ
ನೆಟ್ಟನೆ ಶಿವಭಕ್ತಿಯನೊಳಕೊಂಡಂ

ಸಾವಿರ ಮೂಡೆಗಳೆತ್ತಿದುವಾಗಳ್
ಓವದೆ ನಡೆದವು ನಲವಿಂದಾಗಳ್
ಅವರೊಳಗಾಡುತೆ ಪಾಡುತೆ ಬರ್ಪಂ
ಶಿವಶಿವ ತಿರುನಾಳೆಂದೆನುತಿರ್ಪಂ
ಸಿರಿ ಪರುಕಂಗಳ್ತ್ರಣದಿಂ ಕಪ್ಪಂ



ಸುರುತರುಗಳ್ಪಲ್ಲವನಿಂ ಕಪ್ಪಂ
ಚಿಂತಾಮಣಿಯಂ ಬಗೆಯಂ ಮನದೊಳ್
ಚಿಂತಿಪನೇ ಮತ್ತೊಂದಂ ಮನದೊಳ್
ತಿರುನಾಳನುರಾಗವೆ ತಲೆದೋರುತೆ
ತರತರದಿಂ ಬಿಟ್ಟಿಗಳೊಳ್ನಡೆವುತೆ

ಮುಂದಕ್ಕುಬ್ಬಿಬೆಂದೋಡುತೆ ನಿಲುತುಂ
ಹಿಂದಕ್ಕೈತಂದಳ್ತಿಗೆ ಸಲುತುಂ
ನಡುವಡ್ಡಂ ತಿಕಟಂ ಪರಿದಾಡುತೆ
ತುಡುಂ ತುಡುಂ ದಂದಣ ಎಂದಾಡುತೆ
ಆನೇ ತಿರುನಾಳೇ ಶಿವಶಿವಶಿವ
ಆನೇ ಪೊನ್ನಾಂಬಲವೇ ಶಿವಶಿವ
ತಿರುನಾಳ್ನೋವನೆ ಬರ್ದುಕಿದೆನೆನುತುಂ
ತಿರುನಾಳಂ ಕಂಡದು ದಿನವೆನುತುಂ
ಎಲೆ ಕಾಲ್ಗಳಿರ ಬರ್ದುಕಿದಿರೆನುತುಂ
ಎಲೆ ಕೆಯ್ಗಳಿರ ಬರ್ದುಕಿದಿರೆನುತುಂ
ಎಲೆ ಕಣ್ಗಳಿರಾ ನಲವಿಂ ನೋಡಿರೆ
ಎಲೆ ಕಿವಿಗಳಿರಾ ಒಲ್ದು ಕೇಳಿರೆ
ಎಲೆ ಮನವೇ ಫಲವಾದೆಯ ಎನುತುಂ
ಎಲೆ ತನುವೇ ಪುಳುಕಿಸು ನೀನೆನುತುಂ
ತನ್ನಂ ತಾನೇ ಬರ್ದುಕಿದೆನೆನುತುಂ
ತನ್ನಂ ತಾನೇ ವಂದಿಸಿಕೊಳುತುಂ
ಬರೆವರೆ ಪೊನ್ನಾಂಬಲವದು ತೋರಲ್

ಬರೆವರೆ ನಿಸ್ಸಾಳ ಧ್ವನಿ ಮೀರಲ್
ಶಿವಶಿವಶಿವಶಿವ ಹರಹರಹರಹರ
ಭವದೂರನೇ ಭಾಳಾಕ್ಷನೆ ಎನುತುಂ
ಆಹಾ ಆಹಾ ಕಲಶಂ ತಾನದೆ
ಆಹಾ ಆಹಾ ವೃಷಭಧ್ವಜವದೆ
ಶಿವಧೋ ಶಿವಧೋ ಪರಮಾನಂದವೆ

ಶಿವಘೋ ಶಿವಘೋ ಹರನಾನಂದವೆ
ಎನುತುಂ ಕೆಲನರಿಯದೆ ಬಲನರಿಯದೆ
ಎನುತುಂ ನೆಲನರಿಯದೆ ಹೊಲನರಿಯದೆ
ಅಚ್ಚರಿಯಾನಂದವನೇನೆಂಬೇಂ
ಪೆಚ್ಚಿದ ನೇಹವನದನೇನೆಂಬೇಂ
ಇಂತೀ ತೆರದಿಂ ಬರುತಿರಲಿತ್ತಲ್

ಸಂತತ ತಿರುನಾಳ್ಪಸಗಿದುದತ್ತಲ್
ಜಗದಗಲದ ಮುತ್ತಿನ ಮಂಟಪದೊಳ್
ದಿಗದಿಪರೇೞ್ದೆಸೆಗಾಂತಿರೆ ಭುಜದೊಳ್
ಗಗನದ ಮೇಲ್ಪಟ್ಟಂ ದಟ್ಟಯಿಸಲ್
ಮಿಗೆ ಭಕ್ತರ ಜಯರವವಟ್ಟಯಿಸಲ್
ಪೊರಮಟ್ಟಂ ಪೊರಮಟ್ಟಂ ಶರ್ವಂ
ಪೊರಮಟ್ಟಂ ಭೂಮಿಗೆ ತಾನೊರ್ವಂ
ಕೆಲಬಲದೊಳ್ಗಣಸಂತತಿ ಮಸಗಲ್
ನೆಲದೊಳ್ನಭದೊಳ್ ದುಂದುಭಿ ಮಸಗಲ್
ಚಾಮರ ಸೀಗುರಿಗಳ್ಮಣಿದಾಡಲ್
ವ್ಯೋಮದ ವೃಷಭಧ್ವಜವಲ್ಲಾಡಲ್
ಕೋಟಾಕೋಟಿ ಸ್ತುತಿಗಳ್ಮಸಗಲ್
ಕೋಟಾಕೋಟೀ ಛತ್ರಂ ತೆರಳಲ್
ಆನೆಯ ಮೇಲಣ ಕಹಳೆಗಳೊಗೆದವು
ನಾನಾ ವರ್ಣದ ಬಿರುದಿಂ ನೆಗಳ್ದವು
ಬಂದಂ ಬಂದಂ ದೇವರ ದೇವಂ
ಬಂದಂ ದೇವರ ಗಂಡಂ ದೇವಂ
ಬಂದಂ ಪುರಮಥನಂ ನಡೆತಂದಂ
ಬಂದಂ ಸ್ಮರಮಥನಂ ನಡೆತಂದಂ
ಬಂದಂ ಭಕ್ತಪ್ರಜ ನಿಜವರದಂ
ಬಂದಂ ಶರಣಾವಳಿಯೊಳ್ನೆರೆದಂ
ಎಂದಲ್ಲಲ್ಲಿಯ ಕಹಳೆಗಳೊಗೆಯಲ್
ಬಂದಲ್ಲಲ್ಲಿಯ ಜೋಳನೆರೆಯಲ್



ನಿಸ್ಸಾಳಧ್ವನಿ ದಂದಳ ದಳಮೆನೆ
ನಿಸ್ಸೇಪಧ್ವನಿ ಭರದಿಂ ಭೋರೆನೆ
ವಾದ್ಯಧ್ವನಿ ಸೋಜಿಗಮೆನೆ ನೆಗೆದವು
ಚೋದ್ಯಂ ಪುಟ್ಟಲ್ತರದಿಂದೊಗೆದವು
ತಂದೋಂ ಧಿತ್ತೋಂ ಧೋಂ ಮೆಂದೆನುತಂ
ದಿಂ ದಿಂ ಧಿಮಿಧೀ ಧಿಮಿತೆಂದೆನುತಂ
ಮುಮುಮುಮು ತತ್ತೊಂ ತತ್ತೊಂಗೆನುತಂ
ಚಮಕಂ ತಕನ ಕತಕ ಎಂದೆನುತುಂ
ಝುಂ ಝುಂ ಝುಂ ಝುಂ ತಕತಕ ಎನುತುಂ
ಝುಂ ಝುಂ ದಿಕ್ಕಟ ತಕ್ಕಟ ಎನುತುಂ
ತಂದ್ರಂ ದಿಕ್ಕಟ ದಿಕ್ಕಟ ಎನುತುಂ
ಝಾಂದ್ರಂಕಟ ಝೊಂದ್ರೊಂಕಟ ಎನುತುಂ
ಸಂಗೀತಧ್ವನಿಯುಮ್ಮಳಿಸುತ್ತಲ್
ಜಂಗಮನಾದಂ ನಭಮಂ ಮುಟ್ಟಲ್
ಜಗ ಪೊಗರ್ಮಿಡಿಸಲುಘೇ ಎಂದೆನುತುಂ
ಬಗೆ ಮಿಗೆ ಶರಣರ್ಜಯಜಯ ಎನುತುಂ

ಕೈಕೊಳ ರವಕಾರಿಗಳೊಂದೆಸೆಯೊಳ್
ಬೈಕೆಯ ಸತಿಯರ ಸಾಲೊಂದೆಸೆಯೊಳ್
ಜೋಳಾದಿಗಳೊಬ್ಬಳಿಯೊಂದೆಸೆಯೊಳ್
ಜೋಳ ಸಚಿವ ಸಂತತಿಯೊಂದೆಸೆಯೊಳ್
ತುರುಗಾವಳಿಗಳ್ತಿವೊಂದೆಸೆಯೊಳ್
ಕರಿಘಟೆಗಳ್ತರದಿಂದೊಂದೆಸೆಯೊಳ್
ಹೊನ್ನರಥಂಗಳ್ಬೀರೊಂದೆಸೆಯೊಳ್
ರನ್ನದ ನಡೆವನೆ ಬೀರೊಂದೆಸೆಯೊಳ್
ಅರಸು ಮಕ್ಕಳುಂ ನೆರೆದೊಂದೆಸೆಯೊಳ್
ಸಿರಿವಂತರ ನೆರೆ ಒಂದೊಂದೆಸೆಯೊಳ್
ವ್ಯವಹಾರಿಗಳಿರೆ ತಾ ಒಂದೆಸೆಯೊಳ್
ತವೆ ಸಾಹಸವಾಗ್ಗಳು ಒಂದೆಸೆಯೊಳ್

ಬೆಟ್ಟವನೇರಿಯೆ ನೋಡುತಲಿರ್ಪರ್
ಗಟ್ಟದೊಳೆಲ್ಲಂ ನೋಡುತಲಿರ್ಪರ್
ಪಡುಗುಗಳೇರಿಯೆ ನೋಡುತ್ತಿರ್ಪರ್
ನಡೆ ಛೈತ್ರದೊಳುಂ ನೋಡುತ್ತಿರ್ಪರ್
ಮುಗಿಲೇರಿಯೆ ನಡೆ ನೋಡುತ್ತಿರ್ಪರ್
ಮುಗಿಲಂ ಮುಟ್ಟುವ ಮಾಡದೊಳಿರ್ಪರ್
ಮನೆಮನೆಗಳ ನೆಲೆಮಾಡದೊಳಿರ್ಪರ್
ಘನನಿಳಯಂಗಳ ಛಿದ್ರದೊಳಿರ್ಪರ್
ವೇದಿಕೆಗಳ ಮೇಲಂ ತೀವಿರ್ಪರ್
ವಾದಂತ ರತ್ನಸ್ತಂಭದೊಳಿರ್ಪರ್

ತಿರುವೀಥಿಯೊಳೆಡೆ ಇಲ್ಲೆಡೆ ಯಿಲ್ಲಂ
ಕರುಮಾಡದೊಳೆಡೆ ಯಿಲ್ಲೆಡೆಯಿಲ್ಲಂ
ತರುವನದೊಳಗೆಡೆ ಯಿಲ್ಲೆಡೆಯಿಲ್ಲಂ
ಗಿರಿಕುಲದೊಳಗೆಡೆ ಯಿಲ್ಲೆಡೆಯಿಲ್ಲಂ
ನೆಲದೊಳ್ನಭದೊಳಗಿಲ್ಲೆಡೆ ಇಲ್ಲಂ
ಜಲದೊಳ್ಜಗದೊಳಗಿಲ್ಲೆಡೆ ಇಲ್ಲಂ
ಏನೆಂಬೇಂ ಶಿವಶಿವ ತಿರುನಾಳಂ
ಏನೆಂಬೇಂ ಹರಹರ ತಿರುನಾಳಂ
ಇಂತಿರುತಿರಲೊಪ್ಪಿಡಿದಿಡಿದೆಡೆಯೊಳ್
ಅಂತಿಂತೆನಬಾರದ ಸಂದಣಿಯೊಳ್
ಕೆಲಬಲನರಿಯಲ್ಕೇನೆಂದರಿಯಂ
ತಲೆಯುಳಿಯಲ್ಕೊಡದೇನೆಂದರಿಯಂ
ನೆರೆ ನೆರೆದೀ ಕ್ಷೋಭಂ ನೆರೆ ಮಸಗಲ್
ಹರಹರ ಶಿವನಾನಂದಂ ಮಸಗಲ್
ಮುತ್ತಿನ ಮಂಟಪವತ್ತಿಂತೊಲೆಯಲ್
ಮೆತ್ತನೆ ಮೆಲ್ಲನೆಯೊಂದಡಿ ನಡೆಯಲ್

ಕೈಮುಗಿದುವು ಕಮಳ ವನವಿದೆಂದೆನೆ
ಮೈಮಿಕ್ಕುವು ಪುಳಕಂಗಳಿವೆಂದೆನೆ



ಹೃದಯ ಕಮಲದೊಳಗೆಯ್ತರ್ಪನ್ನಂ
ಹೃದಯ ಕಮಲವಿರಲಾರದೆ ಮುನ್ನಂ
ಮಸ್ತಕದೊಳ್ಭರದಿಂ ಮೂಡಿವವನೆ
ಹಸ್ತಂಗಳ್ಮುಗಿದಿರ್ದವು ಬೋಂಕೆನೆ
ಇರೆ ಶಿವನಂ ಸತಿಯರ್ನೆರೆ ಕಾಣುತೆ
ಹರಹರ ಎಡಹುತೆ ತಾಗುತೆ ಪರಿಯುತೆ
ಆಡಿ ಎನ್ನಡಿ ಎಂಬಂದಂ ಗಾಣೋ
ಆಡಿ ಎನ್ನಡಿ ಎನ್ನಿಂದಂ ಗಾಣೋ
ಗುಡಿಗಟ್ಟಿಂ ಗುಡಿಗಟ್ಟಿಂ ಶಿವಶಿವ
ಗುಡಿವಾಳ್ದೇಂ ಗುಡಿವಾಳ್ದೇಂ ಶಿವಶಿವ
ಓಹೋ ಓಹೋ ಕಣ್ಣಕ್ಕಿನಿಯನೆ
ಓಹೋ ಓಹೋ ಮನವಿಕ್ಕಿನಿಯನೆ
ಎನುತುಂ ತನ್ಮೊಳ್ಗಣುಗುಟ್ಟುತೆ
ಮನದೊಳ್ಮೆಚ್ಚುತೆ ಮೊಗವಂ ನೋಡುತೆ
ಲೆಕ್ಕಿಸಲಾರದೆ ಶಿವ ಸದ್ರೂಪಂ
ಉಕ್ಕುವ ನೇಹದೊಳಭವನ ರೂಪಂ
ನೋಡುತೆ ಕೆಯ್ಗಳನೆತ್ತುತೆ ಮುಗಿಯುತೆ
ಆಡುತೆ ಪಾಡುತೆ ಶಿವನಂ ಪರಸುತೆ

ಒಪ್ಪುವ ಮುತ್ತೈದೆಯರಿಕ್ಕೆಗಳಿಂ
ಇಪ್ಪಸರದ ಕಪಿಗಳ ತೆಕ್ಕೆಗಳಿಂ
ತಿರುಪಾಡೋದುತೆ ತಲೆದೂಗುವರಿಂ
ಹರಹರ ಎನುತುಂ ಕಳವಳಿಸುವರಿಂ
ಕೆಯ್ಯೆತ್ತಿಯೆ ಕರೆಯುತ್ತಿರ್ಪವರಿಂ
ಮೆಯ್ಯಿಕ್ಕಿಯೆ ಮಣಿಯುತ್ತಿರ್ಪವರಿಂ
ಪುಳಕಾವಳಿಯಂ ಹೇರಿರ್ಪವರಿಂ
ಬಳಸುವ ಬೆಮರಿಂ ಗದುಗದಿಸುವರಿಂ
ಅರಲಂ ಸೂಸುತೆ ಪೊಡೆಮಡುವವರಿಂ
ಬೆರಳಂ ಕರ್ಚುತೆ ಲಲ್ಲೈಸುವರಿಂ
ಕಣ್ಣಂ ಕಳೆದು ನಿವಾಳಿಸುವವರಿಂ

ಕಣ್ಣಂ ಕಳೆದಾಗಳೆ ಪಡೆವವರಿಂ
ಆನಂದವ ಜಲ ಶೀವಿರ್ಪವರಿಂ
ನಾನಾ ಚೇಷ್ಟೆಗಳಿಂದಿರ್ಪವರಿಂ
ಒತ್ತುವ ಸುತ್ತುವ ದೇವರಡಿಯರಿಂ
ಮುತ್ತುವ ಮಣಿದಾಡುವ ಪಡಿಯರರಿಂ
ಹಿಂದೆ ಚತುರ್ವೇದದ ಹಾದಿಗಳಿಂ
ಮುಂದೆ ಗಣಂಗಳ ತಿರುವೀಧಿಗಳಿಂ
ಕೆಲದೊಳ್ಮೆರೆವ ಮಹಾದೇವಿಯರಿಂ
ಬಲದೊಳ್ಪಯಸುವ ಮಾಹೇಶ್ವರರಿಂ
ಪೊನ್ನಾಂಬಲದಧಿಪತಿಯೊಪ್ಪಿರ್ದಂ
ಪೊನ್ನಾಂಬಲದುನ್ನತಿಯೊಪ್ಪಿರ್ದಂ
ಪೊನ್ನಾಂಬಲದರಸಂ ಮೆರೆದಿರ್ದಂ
ಪೊನ್ನಾಂಬಲನಾಥಂ ಮೆರೆದಿರ್ದಂ

ಇಂತಿರೆ ಮೂಡಣ ಬಾಗಿಲ ದೆಸೆಯೊಳ್
ಸಂತಂ ನೆರೆದುದು ಶಿವಸನ್ನಿಧಿಯೊಳ್
ಧರಣಿಯೊಳಗೆ ಪಿರಿಯರ್ಗಂ ಪಿರಿಯರ್
ಪುರದೊಳ್ನೆರೆ ಪಿರಿಯರ್ಗಂ ಪಿರಿಯರ್
ಹಿರಿಯ ಮಹೇಶ್ವರರೊಂದಾಗಿರುತಿರೆ
ತಿರುನಾಳ್ಪೋಪರ್ಕುಣಿದಾಡುತ್ತಿರೆ
ನುಡಿಸಿದೊಡರಿಯದೆ ಮುಟ್ಟಿದೊಡರಿಯದೆ
ಎಡಹಿದೊಡರಿಯದೆ ತಾಗಿದೊಡರಿಯದೆ
ದೇವರನರಿಯದೆ ತಿರುನಾಳರಿಯದೆ
ಆವುದುಮಂ ಮನದೊಳಗರಿಯದೆ
ನಾನಾ ಪರಮೋತ್ಸಾಹದಿನರಿಯದೆ
ತಾನೆಂದರಿಯದೆ ಇದಿರೆಂದರಿಯದೆ
ಬೀಗುತೆ ಬಿಕ್ಕುತೆ ತೂಗುತೆ ತೊನೆವುತೆ
ತೇಗುತೆ ತಣಿವುತೆ ತವೆ ಸುಖವೇರುತೆ
ಮೂಡೆವೆರಸಿ ಕುಣಿಕುಣಿದಾಡುತ್ತುಂ



ಕೂಡಿದ ಸುಖದಿಂ ಸುಖಿಯಾಗುತ್ತುಂ
ಹೊತ್ತುದು ಹೊರೆ ಚಿತ್ತದೊಳೀಶಂ ನೆರೆ
ಪತ್ತಿ ಜಗಿಲ್ತಿರ್ಪುದು ದೇಹಂ ನೆರೆ

ಇಂತಿರಲಲ್ಲಿಗೆ ನಡೆದಂ ದೇವಂ
ಸಂತಸದಿಂದಂ ದೇವರ ದೇವಂ
ನೋಡಾ ಪಾರ್ವತಿ ಎನ್ನಯ ಭಕ್ತನ
ಕೂಡಿದ ಸುಖ ಎರಡರಿಯದ ಭಕ್ತನ
ನೆನೆಯುತೆ ನೆನೆಯುತೆ ತಿರುನಾಳಾದಂ
ನೆನೆಯುತೆ ನೆನೆಯುತಲೆನ್ನಾಳಾದಂ
ಕುರುಹಿನ ಹೊರೆಯವನವನಿಂತೋರ್ವಂ
ಕುರುಹಿನ ಹೊರೆಯವನಾನಿಂತೋರ್ವಂ

ಎನುತೋರ್ವಂ ಪೂಜಾರಿಯನಲ್ಲಿಗೆ
ಪಿನಾಕಿ ಕಳುಪಲ್ಸುಖದಿಂದಲ್ಲಿಗೆ
ಪೋದಾತಂ ಮುಟ್ಟಲ್ಕಮ್ಮದೆ ಬರೆ
ಭೇದಾಭೇದವನರಿಯದೆ ನೆರೆ ಬರೆ
ಎನ್ನವರಂ ಮುಟ್ಟಲ್ನೀಂ ಪಡೆವಾ
ಎನ್ನಯ ಭಕ್ತರನರಿಯಲ್ಪಡೆವಾ
ಹೋಗೈ ನಂದೀಶಾ ನೀ ಹೋಗೆನೆ
ರಾಗಂಬೆತ್ತುತ್ಸವದಿಂ ಭೋಂಕೆನೆ
ಬಂದಂ ಬಂದಂ ಬದುಕಿದೆನೆನುತುಂ
ಇಂದುಧರನ ಬೆಸನೆನಗಾಯ್ತೆನುತುಂ
ಬಂದಾ ತಿರುನಾಳ್ಪೋವರನಪ್ಪುತೆ
ಸಂದಣಿಸುವ ಸಂಭ್ರಮದಿಂದಪ್ಪುತೆ
ನೋಡಲ್ಜನನವನಿಳಿಪುವ ತೆರದಿಂ
ಮೂಡೆಯನಿಳಿಪುತೆ ಶರ್ವನ ಬೆಸದಿಂ
ಕೈವಿಡಿದೊಡಗೊಂಡೊಲವಿಂ ಬಂದಂ
ಏವಡಿ ಸುಖದಿಂ ಭಕ್ತಂ ಸಿಂದಂ

ನಿಂದಿರೆ ಕಾಣುತ್ತಂ ಗಿರಿಜೇಶಂ
ಸಂದಣಿಸುವ ಪುಳಕದಿ ಸರ್ವೇಶಂ
ಕೊಂಡದೊಳಗೆ ಮುಳುಗಿಸು ಎಂದೆನುತುಂ
ಕೊಂಡೆನ್ನಲ್ಲಿಗೆ ಬಪ್ಪುದು ಎನುತುಂ
ಭಾವಿಸೆ ಪೊಗಳಲ್ದೇವರ ಕಂಡಂ
ದೇವರ ದೇವಂ ದೇವರ ಗಂಡಂ
ಕೋಟಾಕೋಟಿ ಗಣಂಗಳ್ಸಹಿತಂ
ಕೋಟಾಕೋಟಿ ಬಲಂಗಳ್ಸಹಿತಂ
ಪೊನ್ನಾಂಬಲದರಮನೆಯಂ ಪೊಕ್ಕಂ
ಪನ್ನಗಭೂಷಣನೊಲವಿಂ ಪೊಕ್ಕಂ

ಇತ್ತಂ ನಂದೀಶಂ ನಲಿದಾಗಳ್
ಚಿತ್ತಜಹರನಿತ್ತಾಜ್ಞೆಯೊಳಾಗಲ್
ತಿರುನಾಳ್ಪೋವರನೊಡಗೊಂಡೊಲವಿಂ
ಹರುಷಂಗೊಂಡಾ ಕೊಂಡದೊಳೊಲವಿಂ
ಕುಲವಂ ಜಲದೊಳಗೆಲೆದೊಳೆವಂತೆ
ಕುಲವಂ ಶಿವಕುಲವಂ ಮಾಳ್ಪಂದದಿ
ತಂದು ಮುಳುಂಗಿಸಿದಂ ನಂದೀಶಂ
ಇಂದುಧರನ ಬೆಸದಿಂ ನಂದೀಶಂ
ತಿರುನಾಳ್ಪೋವರ್ಮುಳುಂಗಿ ನಿಂದಿರೆ
ಹರಹರ ಶಿವಶಿವ ಎನುತುಂ ನಿಂದಿರೆ

ಬೆಳಗಿನ ಬಳಗವದೊರ್ಬುಳಿಗೊಂಡುದೊ
ತೊಳಗುವ ಪುಣ್ಯಂ ಪುಂಜಂಗೊಂಡುದೊ
ಚಂದ್ರಂ ನಿಜ ರೂಪಿಂದಂ ನಿಂದನೊ
ಚಂದ್ರಿಕೆಗವಯವವಂ ಶಿವನಿತ್ತನೊ
ಶಿವಕಾರುಣ್ಯಂ ತವೆ ರೂಪಾದುದೊ
ಶಿವಸಾಮರ್ಥ್ಯಂ ಸಂದಣಿಗೊಂಡುದೊ
ಎಂಬಾದದ ರೂಪಿಂ ನಿಂದಿರ್ದಂ
ಪೊಂಬಣ್ಣದ ತನುವಂ ತಳೆದಿರ್ದಂ



ಪೊಸ ಜಡೆ ಮಕುಟಂ ಭಾಳದ ಭಸಿತಂ
ಪೊಸ ಕುಂಡಲ ಯುಗಳಂ ದರಹಸಿತಂ
ಸುಲಿಪಲ್ಲೊಪ್ಪುವ ಸುರುಚಿರ ವದನಂ
ನಲವಿಂ ತೀವಿದ ಶಾಂತಿಯ ಸದನಂ
ನಿರ್ಮಳ ನೂತನ ವಸನಾವರಣಂ
ನಿರ್ಮಳ ರುದ್ರಾಕ್ಷಿಗಳಾಭರಣಂ
ತೋರಲ್ಕತಿ ಕಳೆ ಯಿಲ್ಲದ ಶಿವನಂ
ತೋರಲ್ಕರಿಗೊರಲಿಲ್ಲದ ಹರನಂ
ಶೈವ ಪವಿತ್ರಂ ಶೈವಾಕಾರಂ
ಶೈವಕುಲಾರ್ಕಂ ನಿಂದಿರೆ ಧೀರಂ
ಕುಲವಳಿದುದು ಕುಲನಾಮವದಿರ್ದುದು
ತೊಲಗಿತು ತನು ನಿಜ ಜೀವವುದಿರ್ದುದು
ಪುಣ್ಯ ಶರೀರಂ ಪುಟವಿಟ್ಟಿರ್ದುದು
ಪುಣ್ಯಂ ಪುರುಷಾಕಾರಂಗೊಂಡುದು
ಎನಿಪಾ ತಿರುನಾಳ್ಪೋವಂನೊಲವಿಂ
ಘನ ಮಹಿಮಂ ನಂದೀಶಂ ನಲವಿಂ
ಕೈಗೊಟ್ಟೊಡಗೊಂಡೊಳಗಂ ಪುಗುತಿರೆ

ಸೈಗೆಡದೆಲ್ಲಂ ಜಯ ಜೀಯ್ಯೆನುತಿರೆ
ಒಳಪುಗುತುಂ ಶಿವನೊಳಗಂ ಪೊಕ್ಕಂ
ತೊಳಗುತೆ ಬೆಳಗುತೆ ಬೆಳಗಂ ಮಿಕ್ಕಂ
ತಿರುನಾಳಾಗುತೆ ಹರನಾಳಾದಂ
ಹರನಾಳಾಗುತೆ ತಿರುನಾಳಾದಂ
ಶಿವಲಿಂಗದ ಸಂಗದ ಸುಖಿಯಾದಂ
ಶಿವಭಕ್ತಿಯ ಮುಕ್ತಿಯ ಮುದ್ದಾದಂ

ಇಂತಾಗಲ್ಸುರಿದವು ಪೂ ಮಳೆಗಳ್
ಸಂತಂ ಮೊಳಗಿದುವಾ ದುಂದುಭಿಗಳ್
ನೆಗೆದವು ವಿಮಾನವಂಬರ ತಳದೊಳ್
ಒಗೆದವು ತಾರಾದ್ರೀಶನ ಪುರದೊಳ್

ಬಂದರಮನೆಯಂ ಪರಮಂ ಪೊಕ್ಕಂ
ಹೆಂದವ ಹೆಚ್ಚಿದ ಸುಖದೊಳ್ಪೃಕ್ಕಂ
ಸಿಂಹಾಸನನಾಗುತೆ ಸುಖವದನಂ
ಸಿಂಹಾಸನ ಚರ್ಮಾಂಬರ ವಸನಂ
ಹರುಷದಿ ಗಣಪದವಿಯನೊಲವಿಂದಂ
ತಿರುನಾಳ್ಪೋವರಿಗಿತ್ತಾನಂದಂ
ಮಿಗೆ ಸುಖದಿಂ ಶಂಕರನೊಪ್ಪಿರ್ದಂ
ಮೃಗಧರಧರಮಸ್ತಕನೊಪ್ಪಿರ್ದಂ
ಹರಿಯಜಪೂಜಿತಪದನೊಪ್ಪಿರ್ದಂ
ಶರಣವ್ರಜ ಸಂಪದನೊಪ್ಪಿರ್ದಂ
ನಿತ್ಯನಿವಾಸಪ್ರಭು ಒಪ್ಪಿರ್ದಂ
ಸತ್ಯಸುಭಾಷಿತ ವಿಭು ಒಪ್ಪಿರ್ದಂ
ಸುಕುಮಾರ ಶಿಖಾಮಣಿ ಯೊಪ್ಪಿರ್ದಂ
ಸಕಲಪ್ರಮಥಾಗ್ರಣಿಯೊಪ್ಪಿರ್ದಂ
ಸೋಮಕಳಾವಿಳಸಿತನೊಪ್ಪಿರ್ದಂ
ಪ್ರೇಮಕಳಾ ವರ್ಧಿತನೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ರಾಯಂ ತಾನೊಪ್ಪಿರ್ದಂ

ಕಂದ॥ ತಿರುನಾಳ್ಪೋವರನೊಲವಿಂ
ಹರುಷಂ ಮಿಗೆ ಮೆರೆದ ಶಂಭುಶಂಕರನಘಕುಲ
ಹರಣಂ ಭಕ್ತಿಯನೆಂದುಂ
ಕರುಣಿಸುತಿರ್ಕೆಮಗೆ ಹಂಪೆಯ ವಿರೂಪಾಕ್ಷಂ ॥

---

# ತಿರುಕುರುಂಪೆ ತೊಂಡರ ಮಹಾತ್ಮೆ.

ಕಂದ॥ ಪರಮೇಶಂ ಗೌರೀಶಂ
ಕರುಣಾವಾಸಂ ಸುಖಾಂಬುನಿಧಿ ಸರ್ವೇಶಂ
ಧರಣೀತಳದೊಳ್ಮೆರೆದಂ
ತಿರುಕುರುಪೆಯು ತೊಂಟರು ವಿರೂಪಾಕ್ಷ ಶಿವಂ

## ರಗಳೆ.

ಧರೆಗೆ ಮೆರೆವ ಕಾಂಚಿಪುರದೊಳೊಪ್ಪುತಿರ್ಪನಲ್ಲಿ
ತಿರುಕುರುಂಪೆತೊಂಡರೆಂಬ ಪರಮ ಭಕ್ತನಿರ್ಪನಲ್ಲಿ
ಅಸಗನೊಂದನೆಸಗನೆತ್ತ ಮಿಸುಕದಭವ ವಶದೊಳಿರ್ಪ
ಎಸೆವ ಶಿವನ ಭಕ್ತರೆಂತು ಬೆಸಸಿದಂತೆ ಸುಖದೊಳಿರ್ಪ
ಆತನಿರವಿಳಾತಳಕ್ಕೆ ನೂತನಂ ನಮಃಶ್ಶಿವಾಯ
ಭೂತನಾಥನರಿವನುಳಿದರರಿಯುಶ್ಶೈ ನಮಃಶ್ಶಿವಾಯ
ಇಂತೆನಲ್ಕೆ ಮುಂತೆ ಜಾವವಾಗಲೆಳ್ದು ನಡೆದು ಬಂದು
ಕಂತುಹರನ ಪೂಜೆಗೋಜೆಯಿಂದೆ ಪೂವನೆಳಸಿತಂದು
ಶಿವನ ಭವನದೊಳ್ವಿರಕ್ತಿ ಎತ್ತಿ ಪತ್ತಿ ಸುತ್ತಿ ಬಂದು
ಅವಿಕೃತ ಸ್ವಭಾವ ಭಕ್ತ ನೆಳಸಿ ಬಾಗಿಲೊಳಗೆ ನಿಂದು
ಪೂವಸಭವನಂಘ್ರಿಗಳ್ಗೆ ಭಾವಿಸುತ್ತಲಿತ್ತು ನೋಡಿ
ದೇವರಾಜ ಕಲ್ಪಭೂಜ ದೇವ ಕರುಣಿಸೆಂದು ಬೇಡಿ
ನಿನ್ನ ಬಾಗಿಲಲ್ಲದನ್ಯದವರನೆಂತು ಬಗೆವುದಿಲ್ಲ
ನಿನ್ನನಲ್ಲದನ್ಯ ಸಂಗವನ್ನು ಮೆಂತು ಅರಿವುದಿಲ್ಲ
ಕರುಣಿಸಯ್ಯ ಕರುಣಿಸಭವ ಕರುಣಿಸೆಂದು ಕೈಯ್ಯನೆತ್ತಿ
ಸೆರಗು ಬೆರಗನರಿಯದಚ್ಚ ಶರಣನಲ್ಲಿ ಭಕ್ತಿ ಎತ್ತಿ
ನಡೆದು ಮನೆಗೆ ಬಂದು ತನ್ನ ಕಾಯಕಕ್ಕೆ ಸಲಲು ನೆನೆದು
ಮೃಡನ ಭಕ್ತರಿತ್ತ ವಸ್ತ್ರಮಂ ನಿಕಾಂಸಲ್ಕೆ ಬಗೆದು

ಪಾಪಮೆಂಬ ಮಲಿನ ಮನದ ಸೀರೆಯಂ ತೆರಳ್ಚಿ ಕಟ್ಟಿ
ಕೋಪಮೆಂಬ ಕತ್ತೆ ನಿಲಲು ಬೆನ್ನ ಮೇಲೆ ಮಾಣದೊಟ್ಟಿ

ಬಳಿಗೆ ಬಂದು
ನಡೆದು ಭವನ ಭಕ್ತಿರಸದ ಹೊಳೆಯು ತಡೆಯ
ನೃಡನೆ ಶರಣೆನುತ್ತೆ ದೇಹವೆಂಬ ಕಲ್ಲ ಬಳಿಗೆ ಬಂದು
ತಾಪತ್ರಯಗಳೆಂಬ ಕಿಚ್ಚಿನಿಂದೆ ಕುದಿಸೆ ಕುದಿವುತಿರಲು
ತಾಪವಾರೆ ವಸ್ತ್ರಕುಲವುನಲ್ಲಿ ಪಿಡಿದು ತೊಳೆವುತಿರಲು
ಒಗೆದನೊಗೆದನವುಪು ಹರನ ಪರಮ ಭಕ್ತಿರಸದೊಳೊಗೆದ
ಒಗೆದನೊಗೆದನಾಹ ದೇಹಭಾವವಳಿದು ಸುಖದೊಳೊಗೆದ
ಒಗೆದ ಧನಿಯನಾಲಿಸಿದರ ಪಾಪ ಓಡಿ ಹೋಗಲೊಗೆದ
ಒಗೆಯೆ ಸಿಡಿದ ಹನಿಗಳೆಯ್ದಿದವರೆ ಮುಕ್ತರಾಗಲೊಗೆದ
ಏಕ ನಿಷ್ಠೆಯಿಂದೆ ತಿರುಹಿ ಮುರುಹಿ ಹಿಳಿದು ಹಿಂಡಿ ಮತ್ತೆ
ಏಕನಭವನೆಂಬ ದಿಟದ ಬಿಸಿಲೊಳೊಣಗಿಸುತ್ತ ಮತ್ತೆ
ಪುರಹರ ಪ್ರಸಾದದಿಂದೆ ರಂಜಿಸಲ್ಕೆ ಗಂಜಿ ಇಟ್ಟು
ಶರಣಸಂಗದಿಂದೆ ಘಟ್ಟಿಸುತ್ತೆ ಹೊಳಹನೊಪ್ಪವಿಟ್ಟು
ಪರಮನಂಸ್ರಿಗಳ್ಗೆ ಇಚ್ಚೆಯಂತೆ ಮಡಿಸಿ ಗಳಿಗೆ ಮಾಡಿ
ತಿರುಕುರುಂಪೆತೊಂಡರೆಸೆವ ಮನದ ಮಡಿಯ ನೊಂದುಗೂಡಿ
ಸಕಲ ಭಕ್ತಜನಕೆ ಮನದ ಮಡಿಯ ನೀವುತಿರ್ಪನಲ್ಲಿ
ಸಕಲ ಶರಣ ಕುಲಕೆ ಸಿಂಗರಂಗಳೀವುತಿರ್ಪನಲ್ಲಿ
ಎನಿತುಪಾಸವಾದೊಡಲ್ಲಿ ಬಳಲದಳಲದೊಗೆವನೊಲ್ದು
ಎನಿತು ಶಕ್ತಿಗುಂದೆ ಕುಂದಲನಿತು ಮಿಗಿಲನೊಗೆವನೊಲ್ದು
ಇಂತು ಪಲವು ಕೆಲವು ದಿವಸವೀ ಚರಿತ್ರದಿಂದಿರಲ್ಕೆ

ಕಂತುಹರನುಮರಿದು ರಜತಗಿರಿಗೆ ಶರಣನಂ ತರಲ್ಕೆ
ನೆನೆದು ದೇವಗಣಕುಲಕ್ಕೆ ಬೆಸಸುತಿರ್ದನಭವನಲ್ಲಿ
ಮನುಜ ಲೋಕದೊಳಗೆ ತೊಳಗಿ ಬೆಳಗಿ ಮೆರೆವ ಚೋಳದೇಶದಲ್ಲಿ
ತಿರುಕುರುಂಪೆ ತೊಂಡರೆಂಬ ಭಕ್ತರಿರ್ಪರಲ್ಲಿ ಪೊಕ್ಕು
ನೆರೆದು ನಡೆದು ಮುಂದುಗೆಡಿಸಿ ಬನ್ನಿಮೆಂದು ಬೆಸಸೆ ಮಿಕ್ಕು

ನಡೆದು ದೇವಕೋಟಿಗಣಸಮೂಹವೆಲ್ಲವೆಯ್ದಿ ಬಂದು
ನೃಡನ ಭಕ್ತ ತಿರುಕುರುಂಪೆತೊಂಡರಲ್ಲಿಗೆಯ್ದಿ ಬಂದು
ಎನಗೆ ತನಗೆ ಮತ್ತೆ ವಸ್ತ್ರವೀಯಲಲ್ಲಿ ಜಟ್ಟದಂತೆ
ಘನಕೆ ಘನವೆನುತ್ತೆ ಬೆಳೆಯೆ ಸಂತಸಂಬಡುತ್ತಲಿಂತೆ



ಎನ್ನ ಭಕ್ತರಿತ್ತ ಸೀರೆಯೊಗೆಯಲಾನು ಪಡೆದೆನೆನುತೆ
ತನ್ನ ಮನದೊಳುತ್ಸವಂ ಬಡುತ್ತಲಿಂತು ಸಂದುದೆನುತೆ

ಒಗೆವುತಿರ್ದ ನೊಗೆವುತಿರ್ದ ನೆನಿತನಿನಿತು ಸವೆಯವಲ್ಲಿ
ಒಗೆಯಲೊಗೆಯೆ ಮೇಲೆ ಸೀರೆ ರಾಸಿಯಾಗುತಿರ್ದವಲ್ಲಿ
ಒಂದುಪಾಸ ಪೆರಡುಪಾಸವಾಗಲೊಗೆವುತಿರ್ದನಲ್ಲಿ
ಸಂದಿಸುತ್ತೆ ಪಲವುಪಾಸವಾಗಲೊಗೆವುತಿರ್ದನಲ್ಲಿ
ಒಗೆದು ಬಳಲೆ ಶಕ್ತಿಗೆಟ್ಟು ಬೀಳುತೇಳ್ದು ಮತ್ತೆಯೊಗೆದು
ಒಗೆಯೊಳಂಜೆನಯ್ಯ ದೇವ ಹೋಗೆನೆನುತೆ ಮೀರಿಯೊಗೆದು
ಒಗೆವುತೊಗೆವುತಲ್ಲಿ ಬಳಲಿ ಭಕ್ತಿ ಚಿತ್ತದಲ್ಲಿ ಪೊಕ್ಕು
ನೆಗೆದು ನಿಷ್ಠೆ ರೂಪುಗೊಂಡು ಮನದ ಮೊನೆಯೊಳುರ್ಕಿ ಮಿಕ್ಕು
ಮುಟ್ಟೆ ಕೆಲವು ಸೀರೆ ನಿರ್ಮಳಂಗಳಾಗುತಿರ್ದವಲ್ಲಿ
ದಿಟ್ಟಿಸಲ್ಕೆ ಕೆಲವು ಸೀರೆ ನಿರ್ಮಳಂಗಳಾದುವಲ್ಲಿ
ನೆನೆಯೆ ಸೀರೆಯೊಟ್ಟಲೆಲ್ಲ ನಿರ್ಮಳಂಗಳಾದವಲ್ಲಿ
ಮನದೊಳಂಜಿ ಗಣಸಮೂಹವರಿದೆನುತ್ತೆ ಚಿತ್ತದಲ್ಲಿ
ಎಮ್ಮ ವಶವಿದಲ್ಲ ಒಲ್ಲೆನುತ್ತೆ ಶಿವನೆ ಬಲ್ಲನೆಂದು
ತಮ್ಮೊಳೊಂದುಗೂಡಿ ರಜತ ಗಿರಿಗೆ ಭೋಂಕನೆಯ್ದಿ ಬಂದು

ದೇವ ದೇವ ಏನನೆಂಬೆವು ದಿವಿಯೊಳಗೆ ತಾನೆಯರಿದು
ಭಾವದೊಳಗೆ ಎಳ್ಳನಿತ್ತು ಚಲನೆ ಇಲ್ಲ ನಿಷ್ಠೆ ಪಿರಿದು
ಎನಿತುಪಾಸವಾಗಲಾಗಲನಿತು ಮಿಗಿಲನೊಗೆವುತಿರ್ದ
ಎನಿತೆನಿತ್ತು ಶಕುತಿಗುಂದೆ ಎನಿತನಿತ್ತು ಒಗೆವುತಿರ್ದ
ಅಭವ ನೀವೆ ಬಲ್ಲಿರಯ್ಯ ನಿಮ್ಮ ಭಕ್ತರಿರವದರಿದು
ವಿಭುವೆ ನೀನೆ ನಡೆದು ಕರುಣದಿಂದಲವರಮನವನೊರೆದು
ಕರುಣಿಸೆಂಬ ಬಿನ್ನಪಕ್ಕೆ ಮೆಯ್ಯನಾಂತು ನಡೆದು ಬಂದು
ಗಿರಿಜೆ ಬಾರ ಬಾರ ನೋಡ ಬಾರ ಬಾರೆನುತ್ತೆ ನಲಿದು ಬಂದು
ನಡೆದು ಬಂದು ಗಗನದೊಳಗೆ ಕಾಣದಂತೆಯುಮೆಯನಿರಿಸಿ

ಪೊಡವಿಗಿಳಿಯುತೊಂದು ರೂಪನಲ್ಲಿ ಮೆಲ್ಲನೊಲ್ದು ಧರಿಸಿ
ಗಜದ ಚರ್ಮವಂ ಜಗಕ್ಕೆ ಕರಿಯ ಕಂಥೆಯಾಗಿಸುತ್ತೆ

ನಿಜದ ರೂಪನಡಗಿಸುತ್ತೆ ಭಕ್ತರೂಪನೊದಗಿಸುತ್ತೆ
ಒಗೆದ ಕಯ್ಗಳೊದ್ದೆಯಾದುವದಕೆ ಮುನ್ನವೆಯ್ದಿ ಬಂದು
ನೆಗೆದ ಘನ ನಿದಾಘದೊಳಗೆ ಹೊಳೆಯುತಡೆಯು ಬಳಿಗೆ ಬಂದು
ತಿರುಕುರುಂಪೆತೊಂಡರೆಂಬರಿವರ್ಸೆ ಎಂದು ನುಡಿಯೆ
ನೊರಳುತಲ್ಲಿ ಮೆಲ್ಲನೆಳ್ದು ದೇವ ದೇವ ಅಡಿಯ ಪಿಡಿಯೆ
ಬಂದಿರೆತ್ತಣಿಂ ಬಿಸಿಲ್ಕರಂ ನೆಳಲ್ಗೆ ಸಾರಿ ದೇವ
ಹಿಂದೆಯೊಗೆವ ಸೀರೆಯೊಟ್ಟಲಿಂದೆ ಘನವ ಕಂಡೆ ದೇವ
ಬಿಸಿಲುಗಳೆಯಲೀಗ ತಂದೆಯೊಗೆದು ಕೊಟ್ಟಪೆಂ ಮಹೇಶ
ಎಸೆವ ಚೆಲ್ವು ಬಿಳಿದು ಮಾಡಿ ಯೊಗೆದು ಕೊಟ್ಟಪೆಂ ಮಹೇಶ
ಎಂದೊಡಭವನಲ್ಲಿ ಮೆಚ್ಚಿ ಬೀಳುಡೆಯನು ಕೊಡುವ ತೆರದಿ
ಮಂದರಾಚಲಕ್ಕೆ ನಡೆವ ಸಂಚಕರವನೀವ ತೆರದಿ
ಕೊಟ್ಟು ನಾಳೆ ಜಾವದೊಳಗೆ ಕುಡುವುದೆಂದು ಪೋಗಲಲ್ಲಿ
ಬಿಟ್ಟು ಬಿದಿರ್ದು ತಿರಿಕುರುಂಪೆತೊಂಡರೊಗೆವುತಿರ್ದರಲ್ಲಿ

ಇತ್ತಲಭವನೊಲ್ದು ಬಂದು ಕಾಳಮೇಘ ತತಿಯನಂದು
ಚಿತ್ತಮಂ ಪರೀಕ್ಷಿಪೊಂದು ಬಗೆಯ ನೇಹ ರಸದೊಳೊಗೆದು
ನೆನೆಯೆ ಧರಣಿಯಂ ವಿಯತ್ತಳಂಗಳಂ ತೆರಳ್ಚಿ ತೀವಿ
ಘನನಿಕಾಯಮೆಯ್ದೆ ಕರಿದು ಉರಡೆ ಧರೆಯೊಳೆಲ್ಲ ತೀವಿ
ಕತ್ತಲಿಟ್ಟು ಕವಿದು ಕರೆವ ಮಳೆಗಳೊಳಗೆ ತೆರಳದಲ್ಲಿ
ಚಿತ್ತವಿಟ್ಟು ತಿರುಕುರುಂಪೆ ತೊಂಡರೊಗೆವುತಿರ್ದರಲ್ಲಿ
ಒಗೆದನೊಗೆದನುದಯದಿಂದೆ ಯಸ್ತಮಾನವಾಗಲೊಗೆದು
ಒಗೆದು ನೋಡಿ ಮತ್ತೆಯೊಗೆದು ಬಿಚ್ಚಿ ನೋಡಿ ಮತ್ತೆ ಯೊಗೆದು
ಕರತಳಂಗಳೊಳಗೆ ಕೆಂಪು ಕೆಚ್ಚುಗಟ್ಟಿ ಸುಲಿಯಲೊಗೆದು
ಬೆರಲತುದಿಗಳೊಳಗೆ ಯರುಣಜಲದ ಧಾರೆಯೊಗೆಯಲೊಗೆದು
ಒಗೆಯಲೊಗೆಯಲೊಡೆಯೆ ಕಲ್ಲು ಕಂಥೆ ಕಠಿನಾಗಿ ತೋರೆ
ಒಗೆಯೆ ಬಿಳಿದು ಹಾರೆ ಕರಿದು ತೋರೆ ಮಸಿಯ ಬಣ್ಣವೇರೆ
ಕಂಥೆ ಕಾಳದಂತೆ ನೀಲದಂತೆ ಕಠಿನಾಗಿ ತೋರೆ
ಕಂಥೆ ಕತ್ತಲಿಟ್ಟ ಗರಳದಂತೆ ರಾಹು ಬಣ್ಣವೇರೆ
ಕಂಡು ಭ್ರಾಂತಿಗೊಂಡು ಚಿಂತೆಗೊಂಡು ಮೇಲೆ ನೋಡಿ ಸುಯ್ದು
ಕೊಂಡೆ ನಾವ ಹೊತ್ತಿನೊಳಗಿದೇನೆನುತ್ತೆ ಸುಯ್ದು ಬಯ್ದು



ತೆಗೆಯಲಿಲ್ಲ ತಿರುಹಲಿಲ್ಲ ಮುರುಹಲಿಲ್ಲ ಮಳೆಗಳೊಳಗೆ
ಒಗೆಯಲಿಲ್ಲ ಹಿಂಡಲಿಲ್ಲ ತೊಳೆಯಲಿಲ್ಲ ಮಳೆಗಳೊಳಗೆ
ಎಲ್ಲಿ ಗಳಿಸಿದಂ ಮಹಾತ್ಮನಿಂತಿದಂ ನಮಶ್ಶಿವಾಯ
ಎಲ್ಲಿ ನೊರ್ದಿ ಶಿವರನಿಂತು ಕಂಥೆ ಇದು ನಮಶ್ಶಿವಾಯ
ಎನುತೆ ಮತ್ತೆ ಯೊಗೆವುತಿರೆ ಸಹಸ್ರ ಕಿರಣನುದಯವಾಗೆ

ಮನದೊಳಲ್ಲಿ ಕಂಥೆ ಧವಳಮಪ್ಪ ಚಿಂತೆ ಘನವದಾಗೆ
ಎಂತು ಮಾಡುವೆಂ ಮಹೇಶ ಭಕ್ತನೀಗಳೆಯ್ದಿ ಬರ್ಪ
ಎಂತು ನೋಳ್ಪೆನವರ ಮುಖಮನೆಂತು ಶಿವನ ನೋಡಿ ಬರ್ಪ
ಎಂದು ಮತ್ತೆ ಬರ್ಪ ದಾರಿಯಂ ನಿರೀಕ್ಷಿಸುತ್ತಯೊಗೆಯೆ
ನೊಂದು ಮನದೊಳೇನನೆಂಬೆನೆಂದು ಚಿಂತಿಸುತ್ತಮೊಗೆಯೆ
ಕಂಥೆ ಕಠಿನಾಗೆ ಶಿವನ ಚಿತ್ತವಲ್ಲಿ ಬಿಳಿಯದಾಗಿ
ಕಂತುಹರನುಮಲ್ಲಿ ದೂರದಿಂದೆ ಭಕ್ತ ವೇಷನಾಗಿ
ಬರುತಿರಲ್ಕೆ ತಿರುಕುರುಂಪೆತೊಂಡರಾಗ ನೋಡಿ ಕಂಡು

ಹರನೆ ಹರನೆ ಬಂದರೀಪೆನೇನನೆಂದು ಭೀತಿಗೊಂಡು
ಸತ್ಯವಿಡಿದು ಸಮತೆಗೆಟ್ಟು ಭಕ್ತಿ ಮೀರಿ ಮುಂದುವರಿದು
ನಿತ್ಯ ಪದದ ನಿಷ್ಠೆ ನಿಮಿರ್ದು ನೆತ್ತಿಗೇರಿ ಮೀರಿ ನೆಗೆದು
ಧೈರ್ಯವಳಿದು ಲಜ್ಜೆಯುಳಿದು ಮನದೊಳಲ್ಲಿ ಚಿಂತೆ ಮಾಡಿ
ವೀರ್ಯವೆತ್ತಿ ನೆನಹು ಭಕ್ತಿ ತನು ವಿಸರ್ಜನಕ್ಕೆ ಮೂಡಿ
ಹುಸಿದು ಬರ್ದುಕುವಾಸೆಯಿಂದೆ ಸತ್ತೊಡೊಳ್ಳಿತೆಂಬ ತೆರದಿ
ಎಸೆವ ಕಂಥೆಗೆನ್ನ ತನುವನೊಗೆದು ಕೊಡುವೆನೆಂಬ ತೆರದಿ
ಬಿಳಿದು ಮಾಡಲಾರೆನೆಂದು ಪದತಳಕ್ಕೆ ಬೀಳ್ವ ತೆರದಿ
ತಿಳಿದು ತನಗೆ ತಾನೆ ಮುಳಿದು ತನುವನೊಗೆದು ಕುಡುವ ತೆರದಿ
ಇದಿರೊಳಾಗದೆಂದು ಸೂಕ್ಷ್ಮ ತನುವನೊಗೆದು ಕೊಡುವ ತೆರದಿ
ಅದಿರದಿಂತು ರಜತ ಗಿರಿಯೊಳೊಗೆದು ಕೊಡುವೆನೆಂಬ ತೆರದಿ
ತನ್ನನೊಗೆದುಕೊಂಡನಾಹ ತಿರುಕುರುಂಪೆತೊಂಡರಲ್ಲಿ

ಅನ್ನೆಗಂ ಮಹೇಶನರಿದು ಬೇಡ ಬೇಡೆನುತ್ತಲಲ್ಲಿ
ಬರೆ ಮಹೇಶನಿಂದೆ ಮುನ್ನ ಶಿವನ ಹಸ್ತದಲ್ಲಿ ನೆಗೆದು

ಸಿರವನೆತ್ತಿ ಸಸಿನವೆರಸಿ ಹಸ್ತಮಸ್ತಕಕ್ಕೆ ನೆಗೆದು
ಪುಷ್ಪವೃಷ್ಟಿ ಸುರಿದವಲ್ಲಿ ಪಟಮಾನೊಸಗೆ ಎಸೆದವಲ್ಲಿ
ಪುಷ್ಪಚಾಪ ವಿಪಿನ ದಾವನೆಂಬ ಕಹಳೆ ಕರೆದವಲ್ಲಿ
ಆಗಲಭವನೆಯ್ದಿ ಬಂದು ತನ್ನ ರೂಪನೊಲ್ದು ತೋರಿ
ನಾಗ ಕಟಕನಿಂದುಜೂಟನಯ್ದು ಮೊಗವನೆಯ್ದಿ ತೋರಿ
ತವಕಿಸುತ್ತ ವರಭುಜಂ ತ್ರಿಣೇತ್ರದಿಂದಲೊಪ್ಪಿ ತೋರಿ
ರವಿ ಸಹಸ್ರ ಕಿರಣ ಕೋಟಿಯಿಂದೆ ಮೀರಿ ಬೆಳಗಿ ತೋರಿ
ನೋಡ ಗೀಜೆ ಗಣಸಮೂಹವೆಯ್ದಿ ಬಂದರಾಂತರುಂಟೆ
ನೋಡ ದೇವಲೋಕದೊಳಗೆ ಮಡಿಯನಿಂತು ಮಾಳ್ಪರುಂಟೆ
ಎನ್ನ ಕಂಥೆಗಿಂತು ತನ್ನ ತನುವನೊಗೆದುಕೊಂಡರುಂಟೆ
ಎನ್ನಗೋಸುಗಿಂತು ನಿಂದು ತನ್ನ ತೊರೆದು ಪೊರೆದರುಂಟೆ
ಹುಸಿಯಲರಿಯದಚ್ಚ ಸತ್ಯ ಶರಣ ಬಾರ ಬಾರೆನುತ್ತೆ
ಹುಸಿಗೆ ಹೇಸಿ ನಿನ್ನನೊಗೆದುಕೊಂಡ ಶರಣ ಬಾರೆನುತ್ತೆ

ಎಂದು ತಿರುಕುರುಂಪೆತೊಂಡರಂ ಮಹೇಶನಪ್ಪಿಯಪ್ಪಿ
ಬಂದ ಗಣನಿಕಾಯಕಕ್ಕೆ ತೋರಿ ಹರುಷದಿಂದಲಪ್ಪಿ
ಧರಣಿಯಲ್ಲುಘೇ ಎನಲ್ಕೆ ಗಗನ ತಳಕೆ ಮೀರಿ ನೆಗೆದು
ಶರಣನಂ ವಿಮಾನದೊಳಗೆ ಪುಗಿಸಿ ಬಯಲನುಗಿದು ಜಗಿದು
ರಜತಗಿರಿಗೆ ಬಂದು ಸಿಂಹವಿಷ್ಟರ ಪ್ರತಿಷ್ಠನಾಗಿ
ಭುಜಗ ಭೂಷನವರ್ಗೆ ನಿತ್ಯಪದವನಿತ್ತು ನೋಡಿ ಬೀಗಿ

ದೇವವೃಂದದೊಳಗೆ ದೇವದೇವನೊಪ್ಪುತಿರ್ದನಲ್ಲಿ
ದೇವನಿಕರ ಮಕುಟವೇದ್ಯ ಪಾದನೊಪ್ಪುತಿರ್ದನಲ್ಲಿ
ಶರಣಕುಲ ಸರೋಜಬಾಲ ತರಣಿ ಕಿರಣನೆಸೆದನಲ್ಲಿ
ಶರಣಶರಧಿವರ್ಧನಪ್ರಭೂತಚಂದ್ರ ನೆಸೆದನಲ್ಲಿ
ಭಕ್ತಜನಮಯೂರಮೇಘನಿನದನೊಪ್ಪುತಿರ್ದನಲ್ಲಿ
ಭಕ್ತಹೃದಯ ಭಾವ ಭವನ ಚರಿತನೊಪ್ಪುತಿರ್ದನಲ್ಲಿ
ಅಮಮ ವಿಷಧರಪ್ರಸಿದ್ಧ ಮೂರ್ತಿಯೊಪ್ಪುತಿರ್ದನಲ್ಲಿ
ಅಮಮ ಸಕಲದೇವರಾಜನೊಪ್ಪುತಿರ್ದನಲ್ಲಿ
ಕುಂಜರಾಸುರೋಗ್ರ ಚರ್ಮವಸನನೊಪ್ಪುತಿರ್ದನಲ್ಲಿ



ಕಂಜನಯನನಯನ ಕುಜಲಸಿತಭರಣನೆಸೆದನಲ್ಲಿ
ಮಹಾದಾನಿ ಮಹಾಮಾನಿ ಮಹಾದೇವನೊಪ್ಪಿದಂ
ಮಹಾ ಕರುಣಿ ಹಂಪೆಯ ವಿರುಪಾಕ್ಷನಿಂತೊಪ್ಪಿದಂ ॥

**ಕಂದ**॥ ಪ್ರಿಯಪೊಗೆಯಲೊಗೆದ ತಿರುಕುರುಂ
ಪೆಯತೊಂಡರಭೃತ್ಯನೆಂದು ಶಂಕರನ ಭವಂ
ಜಯಶೀಲಂ ಕುಡು ಶಿವಭ
ಕ್ತಿಯ ನೆನಗೊಲವಿಂದೆ ಹಂಪೆಯ ವಿರೂಪಾಕ್ಷಂ ॥

# ಅರಿವಾಳತ್ತಾಂಡರ ಮಹಾತ್ಮೆ.

ಕಂದ॥ ಅರಿವಾಳ್ತಂಡರನಿಂತೀ
ಧರೆಯರಿಯಲ್ಕೆರೆದನಪ್ರತಿಮನಭವನುಮಾ
ವರನೇಕನದ್ವಿತೀಯಂ
ಪುರಮಥನಂ ಕರುಣಿ ಹಂಪೆಯ ವಿರೂಪಾಕ್ಷಂ ॥

## ರಗಳೆ.

ಪುರಹರನ ಸೆಜ್ಜೆಯೆನಿಸಿದ ಚೋಳದೇಶದೊಳ್
ಧರೆಗೆ ಮೆರೆವುತ್ತಿರ್ಪುದೊಂದು ಪುರ ಒಪ್ಪದೊಳ್
ತಿಣ್ಣಮಂಗಳವೆಂಬ ಪುರದಲ್ಲಿ ಪುಟ್ಟಿದಂ
ಕಣ್ಣಾವೆನಿಸಿದ ಶಿವನ ಭಕ್ತಿಯಂ ಮುಟ್ಟಿದಂ
ತನ್ನ ಪೆಸರೊಪ್ಪುವರಿವಾಳ್ತಾಂಡರೆಂಬುದದು
ಪನ್ನಗಾಭರಣನ ಕಿವಿಗೆ ಸವಿಯನೀವುದದು
ಕೊಟ್ಟ ಕೂಲಿಗೆ ಕೆಯ್ಗಳಂ ಕೊಯ್ದು ಜೀವಿಪಂ
ದಿಟ್ಟ ಮೂರುಳ್ಳ ಶಂಭುವಿಂಗಿತ್ತು ಸೇವಿಪಂ
ಅಲ್ಲಿ ಬೆಳೆದಿಪ್ಪ ನೆಲ್ಬರಲುಮಾಧೀಶಂಗೆ
ಅಲ್ಲಿ ಬಂದೋಗರದ ನೆಲ್ಲೆಲ್ಲವೀಶಂಗೆ
ಮರನೆಲ್ತನಿಯ ಸದಕದ ನೆಲ್ಬರಬರುತಿರಲ್
ಕರುಣೆಗಂ ತನಗಂ ಪ್ರಸಾದಸುಖಮಾಗಿರಲ್
ನನ್ನಿ ಇಲ್ಲದೆ ಬೇರೆ ನುಡಿಗಳಂ ನುಡಿದರಿಯ
ಅನ್ನೆಯಂಗಳನೆಂದುವುಂ ಮರೆದು ಕೇಳ್ದರಿಯ
ಉದಯದೊಳಗೇಳ್ದು ಕಣ್ಣ ಹೊಸೆವುತೆಯ್ತಂದು
ಮದನಾರಿ ಇರ್ಪ ತಿರುನಲ್ಲೂರ್ಗೆ ನಡೆತಂದು
ನಿಂದು ಕಿವಿವಿಡಿದು ಕೈಮುಗಿದು ಜೊತ್ತಂ ಪೊತ್ತು
ತಂದೆ ನೀಂ ಹೆಚ್ಚಿ ಬಾಳೆಂದು ಪರಕೆಯನಿತ್ತು
ಶಿವ ನಿನ್ನ ಬಾಗಿಲಲ್ಲದೆ ಮತ್ತರಿವುದಿಲ್ಲ
ಶಿವ ನಿನ್ನ ಮುಖವಲ್ಲದಿನ್ನರಿವ ಮುಖವಿಲ್ಲ



ನಿನ್ನ ತಿರುನಾಳಲ್ಲದಿನ್ನರಿವ ನಾಳಿಲ್ಲ
ನಿನ್ನ ಭೇರಿಯ ನಾದವಲ್ಲದಾಲಿಸುದಿಲ್ಲ
ಎನಗೆ ಹೊನ್ನುಂ ನೀನೆ ಎನಗೆ ಚಿನ್ನಂ ನೀನೆ
ಎನಗಪ್ಪವಂ ನೀನೆ ಎನಗುಳ್ಳವಂ ನೀನೆ
ಎಂದಿಂತು ಪೊಡಮಟ್ಟು ಹರುಷದಿಂ ನಡೆತರ್ಪ
ಎಂದುವುಂ ನಿತ್ಯ ನೇಮಂ ತಾನಿದಂ ತರ್ಪ
ಅರಸಿ ಕರೆದೊಡೆ ಪೋಪನಲ್ಲದಿರ್ದೊಡೆ ಪೋಗ
ಎರಗನಾಸೆಗೆ ಸಲ್ಲ ನಿಚ್ಚಗುಚ್ಚಕನಾಗ
ಎಂತಪ್ಪ ಲಾಭಂಗಳೆಲ್ಲ ಉಂಟಾದೊಡಂ
ಕಂತುಹರನಂ ಬಿಟ್ಟು ಪೋಗನೇನಾದೊಡಂ
ನಂಟರುಂ ಶಂಭುವೇ ನಲ್ಲರುಂ ಶಂಭುವೇ
ಉಂಟೆನಿಪ ಬಂಧುವುಂ ಬಳಗವುಂ ಶಂಭುವೇ
ತನಗೆ ಕಣ್ಣುಂ ಗತಿಯುಮೀಶನೇ ಎಂದಿರ್ದು
ತನಗೆ ಧನಮುಂ ಮನಮುಮೀಶನೆಂದೇ ಇರ್ದು
ಕೂಲಿಯಿಂದಾದ ಓಗರದ ನಲ್ಲಕ್ಕಿಯಂ
ಮೇಲೆನಿಸಿ ಬೆಳೆದ ಮಾವದು ಕೊಯ್ದು ಕೀರೆಯಂ
ತಂದು ನಲವಿಂದ ಶಿವನಾರೋಗಣೆಗೆ ಕೊಟ್ಟು
ಸಂದಣಿಪ ಪುಳಕದಿಂದಂ ಸಂತಸಂಬಟ್ಟು
ಎನ್ನಾಯುವಂ ಕೊಂಡು ಬರ್ದುಕು ನೀನೆಂದೆನುತೆ
ಎನ್ನಯ್ಯ ನೀನೆ ಬೆಳೆ ಸಿರಿವಂತನಾಗೆನುತೆ
ಎಂದು ಪೊರಮಟ್ಟು ತನ್ನೂರ ನಲವಿಂ ಪೊಕ್ಕು
ಇಂದುಶೇಖರನ ಪ್ರಸಾದಕ್ಕೆ ಮನಂ ಮಿಕ್ಕು
ಕೂಲಿಯಾಳ್ಗಳ ನಡುವೆ ಎಂತಂತೆ ನಿಂದಿರ್ಪ
ಆಲೋಕಿಸಲ್ಕವನ ಕಣ್ಗೆ ತನ್ನಂತಿರ್ಪ
ಇಂಚಿಪೋದಾ ಕೆಯ್ಗಳೊಳಗೆ ಈತಂ ಪುಗಲ್
ವಂಚಿಸದೆ ವಿಪುಳ ಫಲವಾಗಿರ್ಪವತಿ ಮಿಗಿಲ್
ಕೆಯ್ಯೊಡೆಯರುತ್ಸವಂಬಡುವರಾತನನರಿಯ
ಅಯ್ಯಯ್ಯ ಲಾಭವಾಯ್ತೆಂಬರಾತನನರಿಯ
ಇಂತು ಕೂಲಿಗೆ ಕೊಯ್ವನಂತು ಪರಮಂಗೀವ
ಇಂತಿಂತು ಎಂತುವುಂ ಶಿವನತ್ತಲೇ ಭಾವ

ಏನೆಂಬೆನೊಪ್ಪವರಿವಾಳ್ತಾಂಡರಿರ್ಪುದಂ
ನಾನಾ ವಿಧದ ಶರ್ವನರ್ಚನೆಯೊಳಿರ್ಪುದಂ
ಭಕ್ತರಂ ಕಂಡೊಡಂ ಜೀವ ಬಂದಂಪದಿಂ
ಭಕ್ತರಂ ಕಂಡೊಡೆರಗುವನೆರಗದಂದದಿಂ
ಕೂಲಿಗೊಳ್ವಂ ನೋಡ ದೇವ ದಾನದ ಕಯ್ಗೆ
ಕೂಲಿಗೊಳ್ವಂ ನೋಡ ಮಿಕ್ಕ ಭವಿಗಳ ಕಯ್ಗೆ
ಇಂತು ಪಲವುಂ ಕೆಲವು ವತ್ಸರಂ ನಡೆಯುತಿರೆ
ಸಂತತಂ ಶಿವಭಕ್ತಿ ಮೀರಿ ದಳವೇರುತಿರೆ

ಒಂದು ದಿನ ಓಗರದ ನೆಲ್ಬಾರದದಂದಿಗೆ
ಒಂದುಪವಾಸವಾದುದು ಶಿವನ ಭಕ್ತಂಗೆ
ಎರಡನೆಯ ದಿವಸಕಂ ಮತ್ತೆ ನೆಲ್ಬರದಿರಲ್
ಪರಮ ಭಕ್ತಂಗೆರಡುಪವಾಸವಾಗುತ್ತಿರಲ್
ಆಹಾ ಮಹಾದೇವ ಬರ್ದುಕಿದೆಂ ಬರ್ದುಕಿದೆಂ
ಆಹ ಉಪವಾಸವಲ್ಲಲ್ಲಯ್ಯ ಬರ್ದುಕಿದೆಂ
ಈ ತೆರದೆ ನಡೆಯಿಸಯ್ಯ ನಿನ್ನನು ಬೇಡುವೆಂ
ಈ ತೆರದೆ ಸೇವೆಯಂ ಕುಂದದಾಂ ಮಾಡುವೆಂ
ಎಂದೆನುತೆ ಉಪವಾಸಮುಂ ತೃಪ್ತಿಯಾಗುತಿರೆ
ಬಂದಕ್ಕಿಯಂ ಶಿವಂಗಳ್ಕರಿಂದೀಯುತಿರೆ
ಇಪ್ಪತ್ತು ಉಪವಾಸವಾದುದಾ ಭಕ್ತಂಗೆ
ತಪ್ಪದೆ ಶಿವಂಗೆ ಭಾಷೆಗಳನೀವಾತಂಗೆ
ಆಗ ಕೋಡಡೆ ಕೊಂಕದಲುಗದಲ್ಲಾಡದಿರೆ
ರಾಗದಿಂದೊಂದೊಂದು ದಿನಕೆ ಕಳೆ ಏರುತಿರೆ

ಇತ್ತಲಾ ಕೈಲಾಸದೊಳಗೆ ಸರ್ವೇಶ್ವರಂ
ಚಿತ್ತದೊಳಗರಿದು ದಯೆಯಿಂದಂ ಮಹೇಶ್ವರಂ
ಬಾರಾ ಉಮೇ ಎಮ್ಮ ಭಕ್ತನಂ ನೋಡುವೆಂ
ಮೇರೆಗೆಡೆ ಜೀವ ಪರಿಯಂತರಂ ಕಾಡುವಂ
ಆರುಮರಿಯದನೋರ್ವ ಗುಪ್ತ ಮಾಹೇಶ್ವರಂ
ಧಾರುಣಿಯೊಳಿರ್ದಪಂ ಸಾತ್ವಿಕ ಮಹೇಶ್ವರಂ



ತೋರಿದಪೆನೀಗಳೀ ಭಕ್ತನ ಗುಣಂಗಳಂ
ಬೀರಿದಪೆನೀಗಳೆ ಮಹೇಶನ ಗುಣಂಗಳಂ
ಎಂದು ಪೇಳುತ್ತೊಡಂಗೊಂಡು ಹರುಷಂ ಮಿಕ್ಕು
ಬಂದು ಚೋಳ ಕ್ಷಿತೀಶ್ವರನ ದೇಶಂ ಪೊಕ್ಕು
ತಿರುನಲದ ದೇವಾಲಯದ ಮುಂದೆ ನಿಂದಿರಲ್
ಗಿರಿಜೆಗೊರೆಯುತುಂ ಗರ್ದ್ದೆಯೊಳಗಂ ನಿಂದಿರಲ್

ಇತ್ತಲರಿವಾಳ್ತಾಂಡರೊಯ್ಯನೊಂದಡಿ ಇಡುತೆ
ಹತ್ತಿರ್ಪತೊತ್ತೊಂದು ಉಪವಾಸದಿಂದಂ ಬರುತೆ
ಕೂಲಿಯೋಗರದಕ್ಕಿ ಕೊಯ್ಸೀರೆಯಂ ಕೊಂಡು
ಮೇಲೆ ಕಂಪಿಡುವ ಮಾವಡುವನೊಲವಿಂ ಕೊಂಡು
ಒಚ್ಚೆ ರಂಗಿನ ಉಡಿಗೆ ಒಳಗೆ ಕುಡುಗೊಲ್ಮೆರೆಯೆ
ಪಚ್ಚೆ ಪಸಿಯೊಕ್ಕಲ ಮಗಂ ಭಕ್ತಿ ಕಣ್ದೆರೆಯೆ
ಬರೆ ಗಿರಿಜೆ ಕಂಡೀತನೇ ಭಕ್ತನಲೆ ದೇವ
ಹರ ನಿಮ್ಮನರ್ಚಿಸಲ್ಬಲ್ಲನೇ ಎಲೆ ದೇವ
ಪಾಡಲಾಡಲ್ಪೊಗಳಲೀತನೇನರಿವನೇ
ನೋಡಲೊಕ್ಕಲ ಮಗಂಗೊಲ್ವೆ ಮೇಲರಿವನೇ

ಎನೆ ವಿರೂಪಾಕ್ಷನೆಂದಂ ಮೇನಕಾಸುತೆಗೆ
ನಿನಗೆ ಪೇಳ್ವೆಂ ಕೇಳು ಕಡು ಹಿತವನಿಂತೆನಗೆ
ಅರ್ಚಿಸಲ್ಕರಿಯನನ್ಯಕ್ಕಳಿಪದಿರಬಲ್ಲ
ಎಚ್ಚತ್ತು ಪೊಗಳಲರಿಯಂ ಹುಸಿಯದಿರಬಲ್ಲ
ಆಡಲರಿಯಂ ಬಲ್ಲವರ್ಬಲ್ಲನೆಲೆ ದೇವಿ
ಪಾಡಲರಿಯಂ ಪಾಡಿ ನರ್ತವೀತಂ ದೇವಿ
ಎನ್ನನರಿಯದ ಚಲ್ವು ಶಬುದ ಚಲ್ವೆಲೆ ಗಿರಿಜೆ
ಎನ್ನನರಿಯದ ಪಾಡು ಪಲವಾದಿತೆಲೆ ಗಿರಿಜೆ
ನಡೆ ಇಲ್ಲದನ ಪಾಡ ನಾನೊಲ್ವೆನೇ ದೇವಿ
ನುಡಿದು ಪುಸಿವನ ನುಡಿಯ ನಾನೊಲ್ವೆನೇ ದೇವಿ
ನುಡಿ ಕಿರಿದು ನಡೆ ಪಿರಿದು ನೋಡೆನ್ನ ಭಕ್ತರ್ಗೆ
ನುಡಿಗಳುಂ ನಡೆಗಳುಂ ಪೊರಪೊಣ್ಮವಾತಂಗೆ

ಒಡಲ ಪಿಡಿದಿಹ ಗುಣಗಳಿಲ್ಲವಾ ಭಕ್ತಂಗೆ
ಸಡಗರದ ಸಂಭ್ರಮದ ಬಗೆ ಪೂರ್ವವೀತಂಗೆ
ಇವನ ಚರಿತವ ಪೊಗಳ್ವಡರಿದು ವೇದಂಗಳಿಗೆ
ಭುವನದೊಳು ನಡೆವ ಮನುಜರ ಪರಿಯು ಅಲ್ಲಿವಗೆ
ತೋರಿದಪೆನೀಗಳುಂ ಭಕ್ತನ ಗುಣಂಗಳಂ
ಮೀರಿ ಮಿರುಗುತಿರ್ಪೀಶ ನಿಶ್ಮನ ಗುಣಂಗಳಂ

ಎನುತಮಿರಲಂತೊಂದು ಬಿರುಗಾಳಿ ಬೀಸಿತ್ತು
ವನದ ತರಗೆಲೆ ಕಾಳ ಧೂಳಿಯಂ ನೆಗಪಿತ್ತು
ಆಗಳಾ ಗಾಳಿ ಗರಿವಾಳ್ತಾಂಡನಳುಕುತ್ತೆ
ಸಾಗಿಸುತಲಕ್ಕಿ ಕೊಯ್ಮೀರೆಯಂ ಪಿಡಿವುತ್ತೆ
ಕಣ್ಮುಚ್ಚಿ ಧೂಳಡಸಲೊತ್ತರಿಸಿ ಬರುತಿರಲ್
ಉಣ್ಮದುಪವಾಸದಿಂ ಡೆಂಡಣಿಸಿ ಬರುತಿರಲ್
ಮುಂದೊಂದು ಬೀಟೆ ಇರ್ದುದ ಕಾಣದೆಡಹಿದಂ
ನಿಂದು ಗಿರಿಸುತೆ ಶಿವಂ ನೋಡುತಿರಲೆಡಹಿದಂ
ಹರಹರ ನಮಃಶಿವಾಯೆನುತೆ ಬೀಳ್ದಂ ನೋಡ
ಎರೆಯು ಬೀಟೆಗೆ ಹಾಸಿ ಹರಹಿ ಬೀಳ್ದಂ ನೋಡ
ಬೀಳ್ದು ತನ್ನಾಯುವೊಕ್ಕಂತೆ ಹಿರಿದುಂ ಮರುಗಿ
ಏಳ್ದು ಚಲ್ಲಿರ್ದಕ್ಕಿಯಂ ಕಂಡು ಮಿಗೆ ಮರುಗಿ
ಅಯ್ಯೋ ಶಿವನ ಬಾಯ ತುತ್ತ ಎಂತೊಕ್ಕೆನೇ
ಅಯ್ಯೋ ಶಿವದ್ರೋಹವಾಯ್ತೆನ್ನ ಬಾಳ್ವೆನೇ
ಎಂದುಮಿಂತಾಗದಿಂದೇಕಿಂತುಟಾದುದೋ
ಮಂದಭಾಗ್ಯಮಿದೆನಗೆ ಬಂದು ಬಳಿಸಂದುದೋ
ಇನ್ನಾವ ಮೋರೆಯಂ ಮುಂತಿಟ್ಟು ಪೋದಪೆಂ
ಇನ್ನೆವರ ಹಸಿದಿರ್ಪನಿನ್ನೆಂತು ಪೋದಪೆಂ
ಇರೆನಿನ್ನಿರೆಂ' ಸತ್ಯಮಿದೆ ಸತ್ಯವೆಂದೆನುತೆ
ಅರಿವಾಳನಿರದೆ ಹೆಡತಲೆಗಾಗಿ ಮೋಹಿಸುತೆ
ಸಂಸರದ ಬೇರ್ಗೆ ಕುಡುಗೋಲ್ಗೊಳ್ವ ಮಾಳ್ಕೆಯಿಂ
ಸಂಸರಂ ತಾನಿಲ್ಲದಚಲೈಕ ನಿಷ್ಠೆಯಿಂ
ಘಿರಿಘಿರಿಲನರಿಯೆ ಪಾರ್ವತಿ ಕಂಡು ಸಾಲ್ಗೆನಲ್



ಹರಹರ ಮಹಾದೇವಾ ಮಾಣಿಸೈ ಎನುತಿರಲ್
ಗೋಣರಿವರೇ ನೋಯದಂಜದಿರು ಎಲೆ ದೇವಿ
ನೀನೇಕೆ ಮರುಗಿದಪೆ ನೋಡು ಪಾರ್ವತಿದೇವಿ
ಎನಲಲ್ಲಿ ಕೈಡಗೆಯಲನುವಾನಿಸದೆ ಕರಂ
ಮನವಾರೆಯರಿದು ತಲೆ ಬೀಳ್ವಾಗಲೀಶ್ವರಂ
ಹೋಹೋ ಹೂ ಸಾಕಿನ್ನು ಬಿಡು ಬಿಡರಿವಾಳ್ತಾಂಡ
ಆಹಾಹ ಇಂತು ಮೀರುವರೆ ಯರಿವಾಳ್ತಾಂಡ
ಎನುತೆ ತಲೆದಡಹಿ ಕೈವಿಡಿದೆತ್ತಿ ಶಂಕರಂ

ತನತನಗೆ ಪೂಮಳೆಗಳೆರಗಿದವನಂತರಂ
ದುಂದುಭಿ ಸ್ವನಮುಣ್ಮಿದವು ಗಗನದೊಳ್ಕೂಡೆ
ಸಂದಣಿಸಿ ಬಂದುದಲ್ಲಲ್ಲಿ ಗಣತತಿ ಕೂಡೆ
ಅಲ್ಲಿಯರಿವಾಳ್ತಾಂಡರಂ ದೇವನಪ್ಪಿದಂ
ಸಲ್ಲೀಲೆಯಿಂ ನೋಡಿ ನೋಡಿ ಮೈವೆರ್ಚಿದಂ
ಇನಿತು ಉಪವಾಸದೊಳಗಿಂತು ಬಂದವರುಂಟೆ
ಇನಿತು ದಿನಮೀ ನೇಮಮಂ ಸಲಿಸಿದವರುಂಟೆ
ನಡೆ ಮಗನೆ ಕೈಲಾಸಪುರಕೆ ನೀನೆಂದೆನುತೆ
ತಡೆಯದೇರ್ರೈ ವಿಮಾನವನಿದಂ ನೀನೆನುತೆ

ಒಲ್ಲೆನೊಲ್ಲೆಂ ತಂದೆ ನಾನಿಂತು ಬರ್ಪೆನೇ
ಇಲ್ಲಿ ನೀಯುಣ್ಣದೊಡೆ ಅಲ್ಲಿಗೈತರ್ಪೆನೇ
ಆರೋಗಿಸಲ್ವೇಳ್ಪುದಿಲ್ಲಿ ಈಗಳ್ದೇವ
ಆರಯ್ಯೆ ನಾಂ ತಂದ ಕೀರೆಯಂ ಎಲೆ ದೇವ
ನೀವುಂಡೊಡಪ್ಪೆಯಾದೊಡೆ ಬಂದಪೆಂ ದೇವ
ದೇವ ಬಾರೆಂ ಬಾರೆನತಿ ವಿರೋಧವಿದೆನಗೆ
ಎನೆ ಮುದ್ದುತನವ ಸಲಿಸುತ್ತುಂಡನೀಶ್ವರಂ
ಮನವಾರೆ ಕೀರ ಮಾವಡುವಿಂದ ಶಂಕರಂ
ದನಿಗುಡಲ್ತಾಹ ನಾಂ ಬದುಕಿದೆಂ ಶಿವನುಂಡ
ಎನಗಿನ್ನು ದಾರು ಸರಿ ಎನ್ನೊಡೆಯನೊಲಿದುಂಡ
ಎಂದು ಕೊಂಡಾಡುತಿರೆ ಕಂಡು ಮೆಯ್ಮೆಚ್ಚುತುಂ

ಇಂದುಮುಖಿ ಪಾರ್ವತಿಗೆ ತೋರಿ ನಲವೇರುತುಂ
ಕೊಂಡಾಡುತುಂ ನವ ವಿಮಾನದೊಳ್ಕುಳ್ಳಿರಿಸಿ
ಕೊಂಡೊಯ್ದು ಕೈಲಾಸಪುರದೊಳಗಲಂಕರಿಸಿ
ಓಗರದ ಕುಡುಗೋಲ ನೋಡು ನೋಡೆಂದೆನುತೆ
ರಾಗದಿಂ ಬಂದ ಗಣವೃಂದಕ್ಕೆ ತೋರಿಸುತೆ
ಗಣಪದವಿಯಂ ಕೊಟ್ಟು ಸುಖದೊಳರಿವಾಳ್ತಾಂಡ
ಗಣವೃಂದದೊಳ್ಸಂದು ಬಂದರರಿವಾಳ್ತಾಂಡ

ಎಂದು ಗಣಪದವಿಯಂ ಕೊಟ್ಟು ಕಾರುಣ್ಯದಿಂ
ಇಂದುಧರನಂದು ಕೈಲಾಸದೊಳ್ಹರುಷದಿಂ
ಕಮಲಭವ ವಿಮಲಮಸ್ತಕ ಹಸ್ತನೊಪ್ಪಿದಂ
ಪ್ರಮಥಗಣ ವಾರ್ಧಿವರ್ಧನ ಚಂದ್ರನೊಪ್ಪಿದಂ
ಕಂದರ್ಪ ದರ್ಪದಹನ ಜ್ಯೋತಿಯೊಪ್ಪಿದಂ
ಕುಂದಕುಟ್ಮಳ ಸನ್ನಿಭ ಶರೀರನೊಪ್ಪಿದಂ
ಭರ್ಗನೊಪ್ಪಿದನುಗ್ರತರ ರೂಪನೊಪ್ಪಿದಂ
ದುರ್ಗತ್ರಯಾರಣ್ಯದಾವ ಶಿಖಿಯೊಪ್ಪಿದಂ
ಅಮ್ಮಮ್ಮ ಪಂಪಾಪುರಧೀಶನೊಪ್ಪಿದಂ
ಅಮ್ಮ ಹಂಪೆಯ ವಿರೂಪಾಕ್ಷ ಶಿವನೊಪ್ಪಿದಂ

**ಕಂದ॥** ಅರಿವಾಳ್ತಾಂಡಗೊಲವಿಂ
ಕರುಣಿಸಿ ಗಣಪದವನಿತ್ತ ಶರ್ವಂ ಶಶಿಶೇ
ಖರನೆಮಗೆ ಭಕ್ತಿಯಂ ಕೂ
ರ್ತುರವಣೆಯಿಂದೀಗೆ ಹಂಪೆಯ ವಿರೂಪಾಕ್ಷಂ

# ಒಲಫಾಂಡ ಮೂರ್ತಿಗಳ ಮಹಾತ್ಮೆ.

**ಕಂದ॥** ಒಲಫಾಂಡ ಮೂರ್ತಿಗಳನಾ
ಜ್ವಲನಾರ್ಕೇಂದು ತ್ರಿಣೇತ್ರನ ಪ್ರತಿಮಂ ಮತ್
ಕುಲಪತಿ ಮೆರೆದಂ ಧಾತ್ರೀ
ತಳದೊಳ್ಮದನಾರಿ ಹಂಪೆಯ ವಿರೂಪಾಕ್ಷಂ॥

### ರಗಳೆ.

ವಸುಮತಿಗೆ ತೊಡವೆನಿಸಿ ಪಾಂಡ್ಯ ದೇಶದೊಳೊಂದು
ಎಸೆವ ಮದುರಾಪುರವೆನಿಪ್ಪ ಪೆಸರಿಂ ಸಂದು
ಮೆರೆದಿರ್ಪುದೊಂದು ಪುರವಾ ಪುರದೊಳೊಪ್ಪುವಂ
ಹೆರೆಸೂಡಿದನ ಭಕ್ತಿಭಾವಮನಪ್ಪುವಂ
ತನ್ನ ಪೆಸರೊಲಫಾಂಡಮೂರ್ತಿ ಎಂಬುದು ಧರೆಗೆ
ತನ್ನರ್ಥ ಸಂಖ್ಯೆ ಮಿಗೆ ಘನಘನಕೆ ಊರ್ವರೆಗೆ
ಬಲ್ಲಿದಂ ವ್ಯವಹಾರಿ ಎನಿಸಿರ್ದನಾ ಪುರಕೆ
ಎಲ್ಲರಿಂದಧಿಕತರನಾಗಿರ್ದನಾ ಪುರಕೆ
ಶಿವನ ಶರಣಗೆ ಕಿಂಕರನಾಗಿ ಜೀವಿಸಂ
ಭವನ ಶರಣರ್ಗೆಲ್ಲವಂ ಕೊಟ್ಟು ಸೇವಿಸಂ
ಇಂತಿರ್ದು ಶಿವನ ಭವನವನೊಲ್ದು ನಡೆತಂದು
ಸಂತತಂ ಪುಳಕಂಗಳುರವಣಿಸುತಂ ನಿಂದು
ಒಳಪೊಕ್ಕು ಮಿಗೆ ಚೊಕ್ಕ ನಾಯನಾರ್ಗೊಲ್ದಲ್ಲಿ
ತಿಳಿದಗ್ಘವಣಿಯ ಮಜ್ಜನವನೀವುತ್ತಲ್ಲಿ
ಹೊನ್ನ ಬೆಳ್ಳಿಯ ಮೌಕ್ತಿಕದ ಚಿಪ್ಪಿನೊಳಗಿಕ್ಕಿ
ಭಿನ್ನ ಸೌರಭ್ಯಂಗಳಿಂ ಹೊರೆದು ಕಂಪಿಕ್ಕಿ
ಇರ್ದ ಚಂದನವನೊಲ್ದುದ್ವರ್ತನಂ ಮಾಡಿ
ಹೊರ್ದಿದಿರವಂತಿ ಸಂಪಿಗೆಯಲರ್ಗಳಂ ಸೂಡಿ
ನವ ಧೂಪಮಂ ಕೊಟ್ಟು ಮಂಗಳಾರತಿ ಎತ್ತಿ
ನವನವ ಪ್ರೇಮಂಗಳಿಂದಭವನಂ ಸುತ್ತಿ

ಆರೋಗಿಸಲ್ಕೊಟ್ಟ ವೀಳೆಯಂಗಳನಿತ್ತು
ಸಾರ ಘನಸಾರಮಂ ಪುಳುಕಿಸುತೆ ನಲಿದಿತ್ತು
ಗರ್ಭಗೃಹದಲ್ಲಿ ಚಂದನದ ಸಾದೆಯನಿಕ್ಕೆ
ನಿರ್ಭರದ ಸ್ವೇದ ಪುಳಕಂಗಳಿಂ ಮೈಯಿಕ್ಕೆ
ದೇವ ಚಂದನದ ನೇಮವನಿದಂ ನಡೆಯಿಪುದು
ಆವುದೊಂದರಿದಾದೊಡಂ ದೇವ ಕರುಣಿಪುದು
ಎಂದೆನುತೆ ನಿತ್ಯ ನೇಮಂ ಮಾಡಿ ನಡೆತಂದು
ಇಂದು ಶೇಖರನೆ ಶರಣೆನುತುಂ ಮನೆಗೆ ಬಂದು
ಕುಂದದೆ ವ್ಯವಹಾರಮಾಡುತಿರ್ಪಂ ನೋಡ
ಎಂದುಮುಂ ಪುಸಿಗಳಂ ಕೇಳ್ದುಮರಿಯಂ ನೋಡ
ಭಕ್ತಿ ಮೊದಲಾಗಿ ಸತ್ಯವೆ ಲಾಭವಾತಂಗೆ
ಭಕ್ತರ್ಗೆ ಕುಡುವುದೆ ವ್ಯವಹಾರವಾತಂಗೆ
ಚಂದನದ ನೇಮವೇ ತನಗೆ ಹರಣಂ ನೋಡ
ಬಂದ ಶಿವಭಕ್ತರೇ ಬಂಧುಬಳಗಂ ನೋಡ
ಇಂತು ಚಂದನದ ನೇಮಂ ಹೆಚ್ಚಿ ಹಿಗ್ಗುತ್ತಿರೆ
ಸಂತತಂ ಪಲಕೆಲವು ವತ್ಸರಂ ನಡೆವುತಿರೆ
ಮನವನಾರಯ್ಯಲ್ಕೆ ನೆನೆದನೊಂದಂ ಶಿವಂ
ಧನವನಪಹರಿಸುವುದ್ಯೋಗದಾಶ್ಚರ್ಯವಂ
ನೆನೆಯೆ ಕ್ರಮಂಗಳಿಂ ಧನವೆಲ್ಲ ತೀರುತಿರೆ
ದಿನದಿನಕೆ ಚಂದನದ ನೇಮ ಪಿರಿದಾಗುತಿರೆ
ಉಳ್ಳ ಹೊನ್ನೆಲ್ಲವುಂ ಚಂದನಕೆ ತೀರುತಿರೆ
ಉಳ್ಳ ವಸ್ತ್ರಾವಳಿಯು ಚಂದನಕೆ ತೀರಿತ್ತು
ಪಡೆದಿರ್ದ ಭೂಮಿಯುಂ ಚಂದನಕೆ ತೀರಿತ್ತು
ತೊಡಿಗೆಯುಂ ತೊತ್ತಿರುಂ ಚಂದನಕೆ ತೀರಿತ್ತು
ಮಾನವುಂ ಮಹಿಮೆಯುಂ ಚಂದನಕೆ ತೀರಿತ್ತು
ನಾನಾ ವಿಳಾಸಮುಂ ಚಂದನಕೆ ತೀರಿತ್ತು
ಮದನ ಮದಹರನ ನೇಮಂ ಗಂಧವಂತಿರದೆ
ಸದಮಳನ ಸಂಪದದ ಗಂಧಕ್ಕೆ ಸೈರಿಸದೆ
ಹೆಂಡತಿಯು ಕೊರಳ್ಳೈರದಾಳಿಯೊಂದುಳಿಯಲ್ಕೆ



ಕಂಡುದೆಲ್ಲಂ ಶಿವನ ಚಂದನಕೆ ತೀರಲ್ಕೆ
ಇನ್ನಿದೇತರ ತಾ[illegible] ನೇಮವರಿದಾಗುತಿರೆ
ಇನ್ನಿದೇತರ ಬಾಳ್ಕೆ ಚಂದನಂ ಸಲ್ಲದಿರೆ

ಎಂದು ಪಶುವಿನ ಕೊರಲ ಪಾಶವಂ ಪರಿವಂತೆ
ನಿಂದು ಸಂಸಾರ ವಿಸ್ತಾರವಂ ಪರಿವಂತೆ
ಹರಿದನಾಗಳೆ ತಾಳಿಯಂ ಕುಲದ ಪಾಳಿಯಂ
ಮರೆದನಾಗಳೆ ಲಜ್ಜೆಯಂ ಐರದಾಳಿಯಂ
ತಂದು ಮಾರಿದನೈದು ಹಣವಿಂಗೆ ಸಂತಸದೆ
ಚಂದನವನೆಯ್ದೆ ಕೊಂಡಂ ಮನೆಗೆ ಚಿಂತಿಸದೆ
ಉಪವಾಸದಿಂ ಬಂದು ಚಂದನಮನೀಯುತುಂ
ಕೃಪೆ ಮಾಡು ಶಿವ ಎನುತೆ ನೇಮವಂ ಸಲಿಸುತುಂ
ಹತ್ತೈದು ದಿನದ ನೇಮಂ ಸಂದುದಾತಂಗೆ
ಹತ್ತೈದು ದಿನದುಪವಾಸಂ ಪತ್ತಿತಾತಂಗೆ

ಆಗ ಶಿವನಲ್ಲಿಗಯ್ತಂದು ಭಕ್ತಂ ನಿಂದು
ಏಗೈವೆನಭವ ಗಂಧಂ ತೀರಿತಿನ್ನೆಂದು
ನಾಳಿಂಗೆ ನೇಮಕ್ಕೆ ಗಂಧವಿನಿತಿಲ್ಲಯ್ಯ
ಶೂಲಿ ನಿನ್ನಯ ಚಿತ್ತವಿರ್ದಂತೆ ಮಾಡಯ್ಯ
ಎಂದೆನುತ್ತುಂ ಮನೆಗೆ ಬಂದಿರುಳ್ಪಟ್ಟಿರಲ್
ಚಂದನದ ನೇಮದೊಳ್ನೆರೆ ಮನಂ ಮುಟ್ಟಿರಲ್
ಕನಸಿನೊಳ್ಬಂದೀಶ್ವರಂ ನುಡಿದನಾತಂಗೆ
ಮನಸಿನೊಳ್ಮತ್ತೊಂದನರಿಯದ ಮಹೇಶಂಗೆ
ಚಂದನಕ್ಕುಮ್ಮಳಿಸಲೇಕೆ ನೀನೆಲೆ ಮಗನೆ
ಚಂದನಂ ನಿನ್ನ ಮೊಳಕೆಯ್ಯಲಾಗದೆ ಮಗನೆ

ಎನಲೆಳ್ದು ಬೆಳಗಾಗೆ ನೆನೆದು ನೋಡಿದನಂದು
ಕನಸಿನೊಳಗೀಶ್ವರಂ ಬೆಸಸಿದನಿದೇನೆಂದು
ಮೊಳಕೆಯ್ಯನಲ್ಲಿ ಮೆಲ್ಲನೆ ಮುಟ್ಟಿ ನೋಡುತಂ
ತಿಳಿಯದಿದು ಗಂಧವಿಲ್ಲಿಲ್ಲೆನುತೆ ಬಾಡುತಂ

ನೋಡುವೇಂ ತೇವೆನಿಂತಿದು ಗಂಧವಾಗದೊಡೆ
ಮಾಡುವೇಂ ಹೊಸ ಪರಿಯನೊಳ್ಗಿಂಪಿದಾಗದೊಡೆ

ಎನುತೆ ಬಂದಂ ಬಂದನಂದು ಶಿವನಿಳಯಕ್ಕೆ
ಮನಸಿಜ ಹರಂ ನೋಡುತಿರೆ ಶಿವನಿವಾಸಕ್ಕೆ
ಬಂದಿದೇನೆನ್ನ ಮೊಳಕೆಯ್ಯಮಂ ತೇಯ್ಯೆಂದೆ
ಚಂದನವಿದಪ್ಪುದೇ ಹೇಳಯ್ಯ ಎಲೆ ತಂದೆ
ಅದಕೇನೆನುತ್ತೆ ಮಜ್ಜನಕೆರೆದನಂತರಂ
ಮುದದಿಂದೆ ತೊಳೆದನಾ ಸಾಣೆಕಲ್ಲಿಂ ಕರಂ
ದೇವನಂ ನೋಡುತುಂ ಮೊಳಕೆಯ್ಯ ತೊಳೆವುತುಂ
ಭಾವದೊಳ್ವೀರರಸದಗ್ಗಳಿಕೆ ಏರುತುಂ
ದೇವಾ ಇದೇನೆಂದೆ ಚರ್ಮವಲ್ಲಾ ತಂದೆ
ದೇವಾ ಇದೇನೆಂದೆ ನೆತ್ತರಲ್ಲಾ ತಂದೆ
ನೋಡುವೇಂ ತೇದು ನೋಡುವೆನಿದರ್ಕೇಂ ಎನುತೆ
ನೋಡಿಕೊಳ್ವೆಂ ಕೊಳ್ವೆನಿಲ್ಲಿ ಬಳಿಕೇನೆನುತೆ
ಹರಭಕ್ತಿಗೊಲ್ದೆಳಸಿ ಕೆಯ್ಯಿಕ್ಕುವಂದದಿಂ
ಪರ ಮುಕ್ತಿಗೊಮ್ಮೆಳಂ ಮಿಗಿಲಿದೆಂಬಂದದಿಂ
ಕುಸಿದು ಮೊಳಕಾಲಿಕ್ಕಿ ಬಲದ ಮೊಳಕೆಯ್ಯೂರಿ
ಎಸೆವ ಮಣಿಕಟ್ಟನೆಡಗೆಯ್ಯಿಂ ಪಿಡಿದು ಮೀರಿ
ಕೊಂಕಿರ್ದ ಚಿತ್ತಮುಂ ವೃತ್ತಮುಂ ಮಾಳ್ಪಂತೆ
ಶಂಕರನನರ್ಚಿಸಲ್ಕೈಗೆ ಬೆಸನೀವಂತೆ
ಕೆಯ್ಯ ಮೇಲೇ ಗಂಧವಂ ಪಡೆಯಲೋಸುಗಂ
ಕೆಯ್ಯ ಮೇಲೇ ಭಕ್ತಿಯಂ ಪಡೆಯಲೋಸುಗಂ
ತೇದನೊಲವಿಂದೆ ಮೊಳಕೆಯ್ಯನಾನಂದದಿಂ
ಸಾದರಂ ಮಿಗೆ ಶಿವನನರ್ಚಿಪುದ್ಯೋಗದಿಂ
ತೇಯೆ ಕೆಯ್ತೇದು ಪಲ್ಲವಿಸಿತ್ತು ಪರಿಮಳಂ

ತೇಯೆ ಬಾವನ್ನಮಂ ಮೀರಿತ್ತು ಪರಿಮಳಂ
ಹರಿವುತಿರ್ಪುದು ಕರಂ ನೆರೆವುತಿರ್ಪುದು ಗಂಧ
ಒರೆವುತಿರ್ಪುದು ಶಿವನ ಭಕ್ತಿ ಪರಿಮಳ ಗಂಧ



ಇಂತಿರಲ್ಕಾಣುತೊಲಖಾಂಡಮೂರ್ತಿಗಳೆಂದು
ಇಂತು ಕೆಟ್ಟೆನೆ ಇನಿತು ಕಾಲಮರಿಯದೆ ಬೆಂದು
ಮುನ್ನಮೇ ಹೇಳದಿಂತಿರ್ಪರೇ ಶಂಕರಾ
ಇನ್ನೆವರವಿನಿತು ಸವೆದೇಂ ವೃಥಾ ಶಶಿಧರಾ
ಹೊರಗೆ ಗಂಧವನೆಳಸಿ ಯಾನಿಂತು ಕೆಟ್ಟೆನೇ
ನೆರೆ ತೇದುಕೊಂಡು ನಾ ನಿನಗಾಗಿ ಸವೆದೆನೇ
ಬಳ್ಳೆನರಿದೆಂ ದೇಹವುಳ್ಳನ್ನೆಗಂ ತೇವೆ
ಒಳ್ಳೆನೊಲ್ಲೆಂ ಬೇರೆ ಗಂಧಮುಮನಾನೀವೆ
ಎನುತೆ ಕೆಯ್ಯಂ ಸಪುರ ಸೀರೆಯಿಂ ಮುದ್ರಿಸಲ್
ಮನಸಿಜಹರಂ ದಯಾಮುದ್ರೆಯಂ ಸಡಿಲಿಸಲ್

ತೋರಿತ್ತು ಶಿವಲಿಂಗದೊಳಗೆ ಶರ್ವನ ರೂಪು
ಮೀರುತಿರ್ದುದು ಸದಾಶಿವನಂಗದೊಳ್ರೂಪು
ದಶಭುಜಂ ಪಂಚವಕ್ತ್ರಂ ತ್ರಿನೇತ್ರಂಗಳಿಂ
ಶಶಿಕಲೆ ಜಟಾಭರಂ ನಾಗಾಜಿನಂಗಳಿಂ
ಬೆಳಗುತಿರೆ ರವಿಕೋಟಿ ತೇಜಮಂ ಮಸುಳಿಸುತೆ
ತೊಳಗುತಿರೆ ಶಶಿಕೋಟಿ ತೇಜಮುಮನೇಳಿಸುತೆ
ಅಲ್ಲಿ ಶಿವನೊಲಖಾಂಡಮೂರ್ತಿಯಂ ತೆಗೆದಪ್ಪಿ
ಸಲ್ಲೀಲೆಯಿಂದೆ ಕೊಂಡಾಡುತ್ತೆ ಯಮದರ್ಪಿ
ನೋಡಯ್ಯ ನಂದೀಶ ಎನ್ನ ಸದ್ಭಕ್ತನಂ
ನೋಡ ಮೊಳಕೆಯ್ಯ ಗಂಧವನಿತ್ತ ಭಕ್ತನಂ
ಹರವರಿಯ ಭಕ್ತಿಯಂ ಸವಿಗಂಡ ಭಕ್ತನಂ
ಉರವಣಿಪ ನಿಷ್ಠೆಯಂ ಕೆಯ್ಕೊಂಡ ಭಕ್ತನಂ
ತನ್ನ ವಧುವಿನ ತಾಳಿಯಂ ಹರಿದರಿಂತುಂಟೆ
ಎನ್ನ ನೇಮಕ್ಕೆ ತನ್ನಂ ಸವಿಸಿದವರುಂಟೆ

ಎಂದೆನುತೆ ನವ ವಿಮಾನದೊಳಾತನಂ ಪುಗಿಸಿ
ತಂದು ದಿವ್ಯಾಭರಣ ಜಾಲದಿಂ ಸಿಂಗರಿಸಿ
ಪೂಮಳೆಗಳೆರಗಿ ದುಂದುಭಿನಾದಮಾಗುತಿರೆ

ಪ್ರೇಮಕ್ಕೆ ನೆಗೆದನೀ ಧರಣಿ ಬೆರಗಾಗುತಿರೆ
ಬಂದು ಕೈಲಾಸಮಂ ಹರುಷದಿಂದಂ ಪೊಕ್ಕು
ಮುಂದಣರಮನೆಯ ಪುಗುತುಂ ಮೀಗೆ ಮನಂ ಮಿಕ್ಕು
ಮಣಿಖಚಿತ ಸಿಂಹಾಸನಾರೂಢನಾಗಿರ್ದ
ಗಣ ಸಮೂಹದ ನಡುವೆ ಸಲವಿಂದೆ ಕುಳ್ಳಿರ್ದ
ಒಲಘಾಂಡ ಮೂರ್ತಿಗಂ ಗಣಪದವಿಯಂ ಕೊಟ್ಟು
ಲಲನೆ ಗಿರಿಜೆಗೆ ಪೇಳ್ದು ಹರುಷದಿಂ ಮುಂದಿಟ್ಟು
ಮೊಳಕೆಯ್ಯ ಮುದ್ರೆಯಂ ಬಿಡಿಸಿ ತಲೆದೂಗುತಂ
ತಳೆದ ಪುಳಕಂಗಳಿಂ ದಳವೇರಿ ಬೀಗುತುಂ
ಪಂಚಶರ ಮತ್ತಗಜ ಪಂಚಮುಖನೊಪ್ಪಿದಂ
ಪಂಚಾಕ್ಷರೀ ಗೇಹನೆನಿಪ ಶಿವನೊಪ್ಪಿದಂ
ಅತಿ ಬಲ ಜಲಂಧರಾಸುರವಿಜಯನೊಪ್ಪಿದಂ
ಶ್ರುತಿಗತರ್ಕ್ಯಂ ಶರಣಸನ್ನಿಹಿತನೊಪ್ಪಿದಂ
ಅಪ್ರತಿಮನತುಳಬಳನತ್ಯುಗ್ರನೊಪ್ಪಿದಂ
ಅಪ್ರತಿಹತ ಪ್ರಬಳ ಪುಣ್ಯನಿಧಿಯೊಪ್ಪಿದಂ
ಶರಣಜನಕಮಳವಿಮಳಾರ್ಕನೊಪ್ಪಿದಂ
ಶರಣಕುಲಕುಮುದವನ ಪೂರ್ಣೇಂದು ಒಪ್ಪಿದಂ
ಶ್ರೀ ಮಹಾಮಹಿಮನಾದ್ಯಂತಹರನೊಪ್ಪಿದಂ
ಕಾಮಾರಿ ಹಂಪೆಯ ವಿರೂಪಾಕ್ಷನೊಪ್ಪಿದಂ

ಕಂದ॥ ಮೊಳಕೆಯ್ಯಗಂಧಮಂ ತಾ
ನಳವಳಿಯದೆ ತೀದು ನೇಮಮಂ ಸಲಿಸಿದ ನಿ
ರ್ಮಳನೊಲಘಾಂಡ ಶಿಶುವೆಂ
ದಿಳೆಯೊಳ್ಕರುಣಿಸುಗೆ ಹಂಪೆಯ ವಿರೂಪಾಕ್ಷಂ ॥

---

# ಮುರುಘರ ಮಹಾತ್ಮೆ.

ಕಂದ॥ ಶಿವನಪ್ರತಿಮಂ ಭರ್ಗಂ
ಭವನನುಪಮದಾನಿಶಶಿಕಳಾಧರನಗಜಾ
ಧವನೊಲ್ದಂಮೆರೆದುನಮಃ
ಶಿವಾಯಮುರುಘರನೆ ಹಂಪೆಯ ವಿರೂಪಾಕ್ಷಂ ॥

## ರಗಳೆ.

ಚೋಳದೇಶದೊಳಗೆ ತಿರಿಪಗಲ್ಪುರಂ ನಮಃಶಿವಾಯ
ಕೇಳು ಮೆರೆವುತಿರ್ಪುದಲ್ಲಿ ಪುಟ್ಟಿದಂ ನಮಃಶಿವಾಯ
ಮುರಘನೆಂಬ ನಾಮದಿಂದೆ ಯೊಪ್ಪುತಿರ್ಪನಾ ಪುರಕ್ಕೆ
ಹರನ ಭಕ್ತಿಭಾವ ನಿರತನೆನಿಸಿ ಮೆರೆದನಾ ಪುರಕ್ಕೆ
ಸತ್ಯನುತ್ತಮ ಪ್ರಭಾವ ಭರಿತ ಚರಿತನೆನಿಸಿ ಮೆರೆದು
ನಿತ್ಯ ಭಕ್ತಿ ಯುಕ್ತ ಸತ್ಯ ಮನದ ಧನದ ನೆನಿಸಿ ಮೆರೆದು
ಶಿವನ ಪೂಜೆಗೆಂದು ಸಕಲ ಪುಷ್ಪವಾಟಿಯೊಳಗೆ ಪೊಕ್ಕು
ನವನವಪ್ರಸೂನ ಕುಲವನೆಯ್ದೆ ಕೊಯ್ದು ಭಕ್ತಿ ಮಿಕ್ಕು
ಕೊಂಡು ನಡೆದು ಶಿವ ನಿವಾಸ ರಂಗಮಂಟಪಕ್ಕೆ ಬಂದು
ತಂಡದಿಂದೆ ಪುಳಕ ತೆಕ್ಕೆಗೊಂಡು ಬೆಳೆದು ಮೆರೆಯೆ ನಿಂದು
ಇಂದು ಶೇಖರಂಗೆ ಮಜ್ಜನಕ್ಕೆ ಕೊಟ್ಟು ನಿಷ್ಠೆವಡೆದು
ತಂದೆತಾಯಿ ಬಂಧು ನೀನೆ ಎಂದು ನೇಹದಿಂದೆ ನುಡಿದು
ಪೂಜೆ ಮಾಡಿ ನೋಡಿ ನಲಿದು ಸೋಜಿಗಕ್ಕೆ ಸೊಗಸನಿತ್ತು
ಓಜೆಗೆಟ್ಟು ಮುಂದುಗೆಟ್ಟು ಮುದ್ದುಗೈದು ಮುನಿಸನಿತ್ತು
ಧೂಪವಿಕ್ಕಿ ಬೆಳಗನೆತ್ತಿ ಸವಿಯನೂಡಿ ನಲಿದು ನಚ್ಚಿ
ರೂಪುಗರೆದು ರುಚಿಯನಿತ್ತು ರಾಗದಿಂದೆ ಹಿಗ್ಗಿ ಹೆಚ್ಚಿ
ನನೆದು ತೊನೆದು ಒಲಿದು ನಲಿದು ಕೆಲೆದು ಮೀರಿ ಮಾಲೆತು ನೋಡಿ
ಕುಸಿದು ಕೂಗಿ ಕುಸಿದು ಮುಸುಕಿ ಕೊರಗಿ ತಿರುಗಿ ಆಡಿ ಪಾಡಿ
ಒಸೆದು ಕಣ್ಗಳಿಂದೆ ಸುಖದ ರಸದ ಹೊನಲ್ಪರಿದು ಹೆಚ್ಚಿ
ಎಸೆಯೆ ಬೆಮರ ಬಿಂದು ಬಂದು ತನುವನೆಯ್ದೆ ಮುಸುಗಿ ಮುಚ್ಚಿ

ಪುಳಕದೊಳಗೆ ಪುಳಕವೇಳುತಂಗರುಚಿಯೊಳೊಂದಿ ಬೆಳಗೆ
ಹೊಳೆವ ಗದುಗದ ಸ್ವರಂ ನಮಃಶಿವಾಯದೊಳಗೆ ತೊಳಗೆ
ಕಂಪನಂ ಕೊನರ್ತು ತಳೆತು ಕಂಪನೆಯ್ದೆ ಮೆರೆದು ಪೊಗಳೆ
ಸೊಂಪು ಸೊಗಸಿ ಲೀಲೆಯುಕ್ಕಿ ಮನವನೊಕ್ಕು ಮಿಕ್ಕು ನೆಗಳೆ
ಭವನ ಭಾವವೆಯ್ದೆ ಹೃದಯ ಕಮಳದೊಳಗೆ ತೊಳಗಿ ಬಳೆದು
ಶಿವನೆ ಶಿವನೆ ಶಿವನೆ ಎನುತೆ ಬೇಗಿ ಕೂಗಿ ಬಿಕ್ಕಿ ಬಿರಿದು
ನೋಡಿ ನಿಲ್ಲದೆಯ್ದಿ ಬಂದು ಬಿಂಕದಿಂದ ಭೋಂಕನಪ್ಪಿ
ಕೂಡಿ ತಣಿವುತೊರಗಿ ಮೀರಿ ಮರೆದು ಮೂರ್ಛೆಯಾಗುತಪ್ಪಿ
ಮನವನಂಬಿಕಾವರಂಗೆ ಮಾರುಗೊಟ್ಟು ಸೂರೆಗೊಟ್ಟು
ತನುವನೀಶ್ವರಂಗೆ ಹಿಂಗದರ್ಪಿಸುತ್ತ ತ್ರೊತ್ತುಗೊಟ್ಟು
ಇತೆ ಪುರಾರಿ ಕರುಣದಿಂದೆ ಎಚ್ಚರಿತ್ತು ನಲಿದು ನೋಡಿ
ಮುರಿದು ಮೆಲ್ಲನೇಳ್ದು ಹರ ನಮಃಶಿವಾಯ ಎಂದು ಪಾಡಿ
ಶಿವನ ರೂಪು ಮನದೊಳೆರಗಿ ಯೊಳಗೆ ಹೊರಗೆ ತೀವಿ ತೋರೆ
ಭವನೆ ಭರ್ಗ ಭೀಮ ಭಾಳನಯನನೆಂದು ಕರೆದು ಸಾರೆ
ಇಂತು ಶಿವನನೊಕ್ಕು ನಿಳ್ಕಿ ಪೂಜೆಗೆಯ್ದು ಪುಳುಕಿಸುತ್ತೆ
ಮುಂತೆ ಶಿವನೆ ಶಿವನೆ ಎನುತೆ ಬೇಗಿ ಕೂಗಿ ಬೆಮರಿಡುತ್ತೆ
ಎಳ್ದು ಶಿವನ ಮುಂದೆ ನಿಂತು ಭಕ್ತಿ ಭಾವ ಭರಿತನಾಗಿ
ಬಿಳ್ದು ಪದತಳಕ್ಕೆ ಹರುಷವೇರಿ ಮೀರಿ ತಣಿದು ಕೂಗಿ

ದೇವ ಹರಿವಿರಿಂಚಿಗಳ್ಗಗಮ್ಯನೆನಿಪ ನಾಮಲಿಂಗ
ದೇವ ಸಕಲ ಭಕ್ತಜನ ಕಣ್ಣ ಮೊದಲೊಳಿರ್ಪ ಲಿಂಗ
ದೇವ ಸರ್ವ ನಿಗಮ ನಿಕರ ದುರ್ಲಭ ಪ್ರಭಾವ ಮೂರ್ತಿ
ದೇವ ಶರಣ ನಿಚಯ ಚಿತ್ತವಲ್ಲಭ ಪ್ರಸಿದ್ಧ ಮೂರ್ತಿ
ದೇವ ದನುಜ ಮನುಜ ಖಚರ ಪೂಜಿತ ಪ್ರಮೋದ ಚರಣ
ದೇವ ತರುಣ ತರಣಿ ಕೋಟಿಗುನ್ನತ ಪ್ರತಾಪ ಕಿರಣ
ದೇವ ಕೋಟಿ ಶಶಿಕುಲಕ್ಕೆ ಶರ್ಮನೆನಿಪ ಶಾಂತ ರೂಪ
ದೇವ ನಿರುಪಮಪ್ರಕಾಶ ನಿತ್ಯ ನಿರ್ಗುಣಸ್ವರೂಪ
ಎಂದು ಶ್ರುತಿಯ ನುತಿಸುತಿರ್ಪ ನಿತ್ಯ ನೇಮದಿಂದೆ ಬರ್ಪ
ಬಂದು ಇದುವೆ ನೇಮವಾಗಿ ಕುಂದದಚ್ಚ ಸುಖದೊಳಿರ್ಪ



ಅರಿವುದುಂ ನಮಃಶಿವಾಯ ಮರೆವುದುಂ ನಮಃಶಿವಾಯ
ಉರಿವುದುಂ ನಮಃಶಿವಾಯ ಮಹಿಮೆಯುಂ ನಮಃಶಿವಾಯ
ಮನದೊಳುಂ ನಮಃಶಿವಾಯ ಬುದ್ಧಿಯೊಳು ನಮಃಶಿವಾಯ
ನೆನಹಿನೊಳುಂ ನಮಃಶಿವಾಯ ಚಿಂತೆಯೊಳು ನಮಃಶಿವಾಯ
ನುಡಿವುದುಂ ನಮಃಶಿವಾಯ ನಡೆವುದುಂ ನಮಃಶಿವಾಯ
ಉಡುವುದುಂ ನಮಃಶಿವಾಯ ಉಣ್ಬುದುಂ ನಮಃಶಿವಾಯ
ಕರೆವುದುಂ ನಮಃಶಿವಾಯ ಕಾಣ್ಬುದುಂ ನಮಃಶಿವಾಯ
ಪೊರೆವುದುಂ ನಮಃಶಿವಾಯ ನೆರೆವುದುಂ ನಮಃಶಿವಾಯ
ಬರ್ಪುದುಂ ನಮಃಶಿವಾಯ ಬಾಳ್ವುದುಂ ನಮಃಶಿವಾಯ
ಇರ್ಪುದುಂ ನಮಃಶಿವಾಯ ಪೋಪುದುಂ ನಮಃಶಿವಾಯ
ಅಂದವುಂ ನಮಃಶಿವಾಯ ಚಂದವುಂ ನಮಃಶಿವಾಯ
ಹಿಂದೆಯುಂ ನಮಃಶಿವಾಯ ಮುಂದೆಯುಂ ನಮಃಶಿವಾಯ
ಕೆಲದೊಳುಂ ನಮಃಶಿವಾಯ ಬಲದೊಳುಂ ನಮಃಶಿವಾಯ
ನೆಲದೊಳುಂ ನಮಃಶಿವಾಯ ನಭದೊಳುಂ ನಮಃಶಿವಾಯ
ಆಯಮುಂ ನಮಃಶಿವಾಯ ದಾಯಮುಂ ನಮಃಶಿವಾಯ
ಕಾಯಮುಂ ನಮಃಶಿವಾಯ ನಿತ್ಯಮುಂ ನಮಃಶಿವಾಯ
ಸತ್ಯಮುಂ ನಮಃಶಿವಾಯ ಶಬ್ದಮುಂ ನಮಃಶಿವಾಯ
ನಿತ್ಯಮುಂ ನಮಃಶಿವಾಯ ನಿರ್ಮಳಂ ನಮಃಶಿವಾಯ
ಚಿತ್ತಮುಂ ಚರಿತ್ರಮುಂ ವಿಚಿತ್ರಮುಂ ನಮಃಶಿವಾಯ
ವೃತ್ತಿಯುಂ ವಿಳಾಸಮುಂ ವಿಚಾರಮುಂ ನಮಃಶಿವಾಯ
ಸಂಜೆಯುಂ ಸಮಾಧಿಯುಂ ಸ್ವರೂಪುಮುಂ ನಮಃಶಿವಾಯ
ರಂಜಿಸಿರ್ಪ ಮಂಗಳಂ ಮನೋರಥಂ ನಮಃಶಿವಾಯ
ಕಾಮಮುಂ ನಮಃಶಿವಾಯ ಕೋಪಮುಂ ನಮಃಶಿವಾಯ
ನೇಮಮುಂ ನಮಃಶಿವಾಯ ನಿತ್ಯಮುಂ ನಮಃಶಿವಾಯ
ಉಗ್ರಮುಂ ನಮಃಶಿವಾಯ ಶಾಂತಮುಂ ನಮಃಶಿವಾಯ
ಸ್ವರ್ಗಮುಂ ನಮಃಶಿವಾಯ ಮೋಕ್ಷಮುಂ ನಮಃಶಿವಾಯ

ಇಂತು ಪಂಚವರ್ಣಮುಂ ಶರೀರವಾಗಿ ಬೀಗಿ ಬಳೆದು
ಸಂತತಂ ನಮಃಶಿವಾಯವಿಡಿದು ತೀವಿ ತುಳ್ಕಿ ತಳೆದು
ಮರೆದು ಸೋಂಕೆ ಭವಿಗಳೆಲ್ಲ ಭಕ್ತರಾಗುತಿರ್ಪರಲ್ಲಿ

ಅರಿದು ಸೋಂಕೆ ಭಕ್ತರೆಲ್ಲ ಭವನೊಳೊಂದುತಿರ್ಪರಲ್ಲಿ
ಲೋಗರೇನನೆಂದೊಡಂ ನಮಃಶಿವಾಯವಾಗಿ ತನಗೆ
ಆಗಳೇನನೆಂದೊಡಂ ನಮಃಶಿವಾಯವಾಗೆ ತನಗೆ
ಉಲಿವ ಹಕ್ಕಿಯುಲಿವು ಪಂಚವರ್ಣದಂತೆ ತಾಗೆ ಕಿವಿಗೆ
ಕೆಲೆವ ವೃಷಭನಾದಮುಂ ನಮಃಶಿವಾಯವಾಗೆ ತನಗೆ
ಕಣ್ಣೊಳಂ ನಮಃಶಿವಾಯವೆಂಬ ಲಿಖಿತವಿರ್ದ ತೆರದೆ
ಕಣ್ಣ ನೊಂದಲ ರೂಪು ಪಂಚವರ್ಣವಾಗಿ ತೋರಲುರದೆ
ಪಲವು ಕೆಲವು ದಿವಸವಿಂತು ಹರನನರ್ಚಿಸುತಿರಲ್ಕೆ

ನಲಿದು ಶಂಭು ತನ್ನ ಪದಕೆ ಭಕ್ತಿಯುಕ್ತನಂ ತರಲ್ಕೆ
ನೆನೆದು ಬಯಸಿ ಬಂದು ಭಕ್ತನನುವನರಿದು ಮುಂದೆ ನಿಂದು
ಕನಸಿನೊಳಗೆ ಮಗನೆ ಬರ್ಪುದೆಂದು ಬೆಸಸೆ ಪೋಗಲಂದು
ಎಳ್ದು ನೆನೆದು ಪುಳುಕಿಸುತ್ತೆ ಹರ್ಷರಸದ ಶರಧಿಯೊಳಗೆ
ಬಿಳ್ದು ಬಯಸಿ ಕೊರ್ವಿ ಯುರ್ವಿ ಆಡಿ ಪಾಡಿ ಭಕ್ತಿ ಬೆಳಗೆ
ಭಸಿತಮುಂ ಶರೀರದೊಪ್ಪುವಂಗದೊಳಗೆ ತೊಳಗೆ ತೀವಿ
ಎಸೆವ ರುದ್ರನೇತ್ರಮುಂ ತನು ಸ್ಥಳಂಗಳಲ್ಲಿ ಓವಿ
ನಡೆದು ಬಂದು ಪೂವನೆಳಸಿ ಕೊಯ್ವುತುಂ ನಮಃಶಿವಾಯ
ತಡೆಯದಗ್ಗವಣಿಯನಾಂತು ನಡೆವುತುಂ ನಮಃಶಿವಾಯ
ಬರುತೆ ರಂಗಮಂಟಪ ಪ್ರದೇಶದೊಳ್ ನಮಃಶಿವಾಯ
ಹರುಷದಿಂದಲಗ್ಗವಣಿಯನಿಳಿಪುತುಂ ನಮಃಶಿವಾಯ
ಬಂದು ಮಜ್ಜನಕ್ಕೆ ಮಾಣದೆರೆವುತುಂ ನಮಃಶಿವಾಯ
ನಿಂದು ಪೂಜೆ ಮಾಡಿ ನೋಡಿ ನಲಿವುತುಂ ನಮಃಶಿವಾಯ
ಎಂದು ಹೊರಗೆ ಸಾರ್ದು ಕುಣಿದು ಕೂಗಿ ಕರುಣಿಸೆಂದೆನುತ್ತೆ
ಇಂದುಮೌಳಿ ನೀನೆ ಬೆಸಸಿದಂತೆ ಮಾಡು ಮಾಡೆನುತ್ತೆ
ಸವಿಯೆ ಕಣ್ಣೆ ಗತಿಯೆ ಮತಿಯೆ ಸುಖವೆ ಕರುಣಿಸೆಂದೆನುತ್ತೆ
ತವರೆ ತಾಯಿ ತಂದೆ ಬಂಧು ಕುಲವೆ ಕರುಣಿಸೆಂದೆನುತ್ತೆ
ಗುರುವೆ ಕಲ್ಪತರುವೆ ದಯದಿರವೆ ಕರುಣಿಸೆಂದೆನುತ್ತೆ
ಪರವೆ ಪರಕೆ ಪರವೆ ಶಾಂತದಿರವೆ ಕರುಣಿಸೆಂದೆನುತ್ತೆ
ಪುಳಕವಡರೆ ನೋಟವಮರೆ ನುಡಿ ಹೊರಳ್ದು ತೊದಳನೆಳಸಿ
ತಿಳಿವುತೀವೆ ಮಾಯೆ ಮಸುಳೆ ಬೆಳಗು ಒಳಗೆ ತೊಳಗಿ ಮಸಗೆ



ಬಯಗೆ ಬೆಳೆಯೆ ತವಕನೇಳೆ ಮನದ ಲಲ್ಲೆ ಮುಂದುವರಿಯೆ
ಜಯತು ಜಗುಳೆ ಜಾಣ್ಮೆಯುಗುಳೆ ಎಚ್ಚರಿಚ್ಚೆಗಕ್ಕೆ ಸರಿಯೆ
ಮುತ್ತಿ ಚಂದ್ರಕಾಂತಮುಂ ಜಿಗುಲ್ತು ಜೊನ್ನವಪ್ಪವಂತೆ
ಹತ್ತೆ ಸಾರ್ದು ಸೊಗಸು ಪೆಳೆಯೆ ಭಕ್ತಿ ಮುಕ್ತಿಯಪ್ಪವಂತೆ
ನಮಃ ನಮಃಶಿವಾಯ ಎನುತೆ ಗದ್ಗದಕ್ಕೆ ಕಂಠ ಸಾರ್ದು
ನೆನಸು ಕನಸು ಕನಸು ನೆನಸೆನಿಪ್ಪ ಭಾವವಳಿದು ಸಾರ್ದು
ಶಿವನನಪ್ಪಿದಂ ನಮಃಶಿವಾಯ ಮುರುಘನೊಲ್ಮೆಯಿಂದೆ
ಭವನನಪ್ಪಿದಂ ನಮಃಶಿವಾಯ ನೇಹದುರ್ಕಿನಿಂದೆ
ಮನಸಿನಪ್ಪು ಚಿತ್ತವಪ್ಪೆ ತನುವಿನಪ್ಪಿನೊಳಗೆ ಬೆರಸಿ
ನೆನಹು ನಿಲ್ಕೆ ಕಳೆಯು ಕೂಡೆ ಲಿಂಗದೊಳಗೆ ಲಿಂಗವೆನಿಸಿ
ಮನದ ಮತ್ಸರಕ್ಕೆ ತನು ನಮಃಶಿವಾಯವಾಗಿ ಕರಗೆ
ತನುವ ಮಜ್ಜನಕ್ಕೆ ಮಾಡಿ ಯಗ್ಗವಣಿಯನೆನಿಸಿ ಕರಗೆ
ಎರಡುವಲ್ಲದೊಂದುವೆನಿಸಿದಂತು ಹರನೊಳೊಂದುಗೂಡಿ
ಕರಗಿ ಕಳೆದು ಭಾವವಳಿದು ಲಿಂಗದೊಳಗೆ ಬೆರಸಿ ಕೂಡಿ
ಜೀವನು ನಮಃಶಿವಾಯ ಪರಮನುಂ ನಮಃಶಿವಾಯ
ಆವನೇನನೆಂಬನೆಂಬುದೆಲ್ಲವುಂ ನಮಃಶಿವಾಯ
ವಾಗಿ ಕೂಡಿ ಕರಗಿದಂ ನಮಃ ಶಿವಾಯ ಮುರುಘನಾಹ

ಆಗಳೊಗೆದವಲ್ಲಿ ದುಂದುಭಿ ಸ್ವನಂಗಳೆಲ್ಲವಾಹ
ಹರನ ಕರುಣ ವೃಷ್ಟಿಯೊಡನೆ ಪುಷ್ಪವೃಷ್ಟಿ ಸುರಿದವಲ್ಲಿ
ಹರನ ಪೊಗಳ್ತೆ ನಾದದೊಳಗೆ ಶಂಖನಾದ ಒಗೆದುದಲ್ಲಿ
ಮೇಲೆ ತೋರಿದಂ ಶಿವಂ ನಿಜಸ್ವರೂಪ ಕಳೆಯನಲ್ಲಿ
ನೀಲಗಳದ ಹತ್ತು ಭುಜದ ಪಂಚಮುಖದ ಮುಖಮನಲ್ಲಿ
ತೋರುತುಂ ನಮಃಶಿವಾಯ ನಂದಿನಾಥ ನೋಡೆನುತ್ತೆ
ಮೀರಿದಂ ಮಹೇಶನಿರವಿದರಿದು ಧರಣಿಗರಿದೆನುತ್ತೆ
ನೇಮವಳಿದು ಪೂಜೆ ಪಂಚವರ್ಣವಾದರೀಗಳುಂಟೆ
ಸೀಮೆಗೆಟ್ಟು ಚಿತ್ತವಿಟ್ಟು ನಾಮವಾಗಿ ನಿಂದರುಂಟೆ
ನಾಮರಸದೊಳಿಂತು ನೆನೆದು ಬಿರಿದು ಕರಗಿ ಹರಿದರುಂಟೆ
ಪ್ರೇಮರಸದ ಮಳೆಯನೆನ್ನ ಮೇಲೆ ಕವಿದು ಕರೆದರುಂಟೆ

ಭಾಪುರೇ ನಮಃಶಿವಾಯ ಮುರುಘೆ ಭಾಪು ಭಾಪೆನುತ್ತೆ
ಭಾಪು ಮಝುರೆ ಪೂತುರಾವುದೇವು ಮುರುಘೆ ಲೇಸೆನುತ್ತೆ

ಬಂದ ನವ ವಿಮಾನದೊಳಗೆ ಮೋಹದಿಂದಲಿರಿಸಿ ನೋಡಿ
ಮುಂದೆ ಕುಣಿವ ಗಣಸಮೂಹದಿಂ ಸುಖಾಶ್ರುವೇರೆ ನೋಡಿ
ನಡೆದು ಬಂದು ರಜತ ಗಿರಿಯನೆಯ್ದೆ ಮೋಹದಿಂದೆ ಪೊಕ್ಕು
ನುಡಿಯಲೆಯ್ದೆ ಸೊಗಯಿಸುತ್ತೆ ಗಿರಿಜೆಗರುಪಿ ಲೀಲೆ ಮಿಕ್ಕು
ಗಣಪದಂಗಳೊಳ್ನಮಃಶಿವಾಯ ಮುರುಘರೊಪ್ಪವಿರಿಸಿ
ತ್ರಿಣಯನುಂ ನಮಃಶಿವಾಯ ಮುರುಘರಂ ನಿಜಕ್ಕೆ ಸಲಿಸಿ
ಮೇರುಗಿರಿ ನಿವಾಸದೊಳಗೆ ಮಾರಮಥನನೆಸೆದನಲ್ಲಿ
ಚಾರುತರ ಗಣಂಗಳೊಳ್ಪುರಾರಿ ಯೊಪ್ಪುತಿರ್ದನಲ್ಲಿ
ಸಕಲ ಭಕ್ತ ಭಾವ ಭರಿತ ಚರಿತನೊಪ್ಪುತಿರ್ದನಲ್ಲಿ
ಸಕಲ ದೇವ ಮಕುಟ ಮಣಿ ವಿಳಾಸ ಚರಣನೆಸೆದನಲ್ಲಿ
ನಿತ್ಯ ನಿರುಪಮ ಪ್ರಕಾಶ ಭೂಪನೊಪ್ಪುತಿರ್ದನಲ್ಲಿ
ಸತ್ಯ ಶರಣ ಕರುಣಿ ಹಂಪೆಯರಸನೊಪ್ಪುತಿರ್ದನಲ್ಲಿ

**ಕಂದ**॥ ಭುವನಂ ನೆರೆ ಮೆಚ್ಚೆ ನಮ ।
ಶ್ಶಿವಾಯ ಮುರುಘ ನೆರೆ ಮೆರೆದ ಶಂಕರನೊಲವಿಂ ॥
ದವೆ ಭಕ್ತಿ ಸುಖಮನೆಸಗೀ ।
ಗವಿರಳ ಕರುಣಾಬ್ಧಿ ಹಂಪೆಯ ವಿರೂಪಾಕ್ಷಂ ॥

# ಅಯ್ಯಡಿಯರ ಮಹಾತ್ಮೆ.

**ಕಂದ**॥ ಚರಿತದಿ ಅಯ್ಯಡಿಯರ್ಗಂ ।
ಪರಮಸುಖೋದಯಮನಿತ್ತು ಮೆರೆದ ಮಹೇಶಂ
ಕರುಣದಿನೆಮಗತಿ ಭಕ್ತಿಯ ॥
ನಿರದೆ ವಿರೂಪಾಕ್ಷದೇವನೀಗನವರತಂ ॥

## ರಗಳೆ.

ಶ್ರೀಪಲ್ಲವಕ್ಷಿತಿಯ ನಡುವೆಯೊಪ್ಪಂ ಮಿಗಲ್
ಭೂಪ ಕುಲತಿಲಕನಾಗುತ್ತ ತೇಜಂ ಮಿಗಲ್
ಮೆರೆವ ನೃಪವಂಶಮೆಂಬಧಿಕ ದುಗ್ಧಾಬ್ಧಿಯೊಳ್
ನೆರೆ ಪೂರ್ಣ ಚಂದ್ರನಂತುದಯಿಸಿದ ಕಾಂತಿಯೊಳ್
ಮೆರೆವನಯ್ಯಡಿ ಎಂಬ ಪೆಸರಿಂ ದಯಾಪರಂ
ಕರಿಕಂಠ ಭಕ್ತ್ಯಾಂಗನಾ ಸುಖಪ್ರದ ವರಂ
ಆತನುರು ಧರ್ಮಪ್ರತಾಪಂಗಳಿಂತಲ್ಲಿ
ಖ್ಯಾತ ಕಲಿಕಾಲ ರಿಪುಗಳ ನೂಂಕಿ ತಾನಲ್ಲಿ
ಶೈವಸಿದ್ಧಾಂತ ಸಾಮ್ರಾಜ್ಯ ಮಣಿಪೀಠದೊಳ್
ಭಾವದಿಂ ಶಿವಧರ್ಮದಂತಿರ್ದು ತೇಜದೊಳ್
ಸರ್ವೋರ್ವಿಯಂ ಪಾಲಿಸುತ್ತಿರಲ್ ವಿಭವದೊಳ್
ಪೂರ್ವ ಮನುಧರ್ಮಮಂ ಬಿಡದಾತನಾತ್ಮನೊಳ್
ಕುಲ ಪರಂಪರೆಯಿಂದಲೈತಂದ ಕೀರ್ತಿಯಂ
ಕುಲಗಿರಿ ತಟಂಗಳೊಳಗಿರಿಸಿ ಸತ್ಕೀರ್ತಿಯಂ
ಇಂತು ಭುಜಬಲದಿಂದ ರಾಜ್ಯವಂ ಪಾಲಿಪಂ
ಸಂತತಂ ಸರ್ವ ಜನರಂ ನೋಡಿ ರಕ್ಷಿಪಂ
ಸರ್ವ ವೇದಂಗಳಿಗೆ ಸಾರವಾಗಿರುತಿರ್ಪ
ಸರ್ವ ಸಜ್ಜನರ ಸಂತೋಷದಿಂದಿರುತಿರ್ಪ
ಎಲ್ಲೆಡೆಯೊಳುಂ ವೈದಿಕಾಚಾರ ವಿಪ್ರರುಂ

ಎಲ್ಲೆಡೆಯೊಳುಂ ಯೋಗ ಸತ್ಕ್ರಿಯಾ ಯುಕ್ತರುಂ
ಎಲ್ಲೆಡೆಯೊಳುಂ ಸರ್ವ ವೇದ ಘೋಷಂಗಳುಂ
ಎಲ್ಲೆಡೆಯೊಳುಂ ಶೈವಶಾಸ್ತ್ರ ರವಂಗಳುಂ
ಇಂತಿರಲ್ಕಾತನಧಿಕೋರ್ವಿಯಂ ಪಾಲಿಸುತೆ

ಕಂತುಹರನಾಜ್ಞೆಯಿಂ ವೈರಾಗ್ಯದೊಳ್ಸಲುತೆ
ಜನನಿ ಜನಕನು ಪುತ್ರ ಮಿತ್ರ ಸತಿ ಎಂಬವರು
ಕನಸಿನ ಸಿರಿಯು ಮಂಜು ಮೇಘದೊಡ್ಡಣೆ ಇವರು
ಸ್ಥಿರವೆಂದು ಶಿವಭಕ್ತಿಯುಳ್ಳವರು ನಂಬುವರೆ
ಎರವಿನ ಸಿರಿಯನಿಂತು ಹಿರಿದಾಗಿ ನಂಬುವರೆ
ಸತಿ ಸುತರು ಇರ್ದಂತೆ ಬಯಲಾದುದಂ ಕಂಡೆ
ಗತಿಮತಿಯು ಶಿವನಲ್ಲದಿಲ್ಲೆಂದು ನಿಜಗಂಡೆ
ಇನ್ನು ಮಾಯದ ಮೋಹದೊಳು ನಿಲುವುದಲ್ಲೆಂದು
ಚನ್ನಾಗಿ ನಿಶ್ಚೈಸಿ ಮನಮುಮಂ ತಾಂ ಬಲಿದು

ಕುಲಧುರ್ಯನಪ್ಪ ನಿಜ ಪುತ್ರನಂ ರಾಜ್ಯದೊಳ್
ಲಲಿತಮತಿ ಪಟ್ಟಮಂ ಕಟ್ಟಿ ಶಿವದಾಸ್ಯದೊಳ್
ಬಂದು ಭೂಮಿಯೊಳುಳ್ಳ ಶಿವನ ತಾಣಂಗಳೊಳ್
ಬಂದು ವಂದಿಸಿ ಪೊಗಳ್ದು ಪಾಡಿ ಹರ್ಷಂಗಳೊಳ್
ಸ್ತುತಿಮಾಲೆಗಳಿನರ್ಚಿಸಲ್ನೆನೆದು ಬೇಗದಿಂ
ನುತಮಪ್ಪ ಪೊನ್ನಾಂಬಲಕೆಯ್ದಿ ರಾಗದಿಂ
ಅಲ್ಲಿ ರುದ್ರಸ್ತೋತ್ರದಿಂ ಶಿವನನರ್ಚಿಸುತೆ
ಸಲ್ಲೀಲೆಯಿಂದಿಂತು ಹರನನುರೆ ಪೂಜಿಸುತೆ
ಪಲಕೆಲವು ಕಾಲನಲ್ಲಿಯೆ ಸುಖದಿನಿರುತಿರಲ್
ಪಲವು ಶಿವತೀರ್ಥಂಗಳಲ್ಲಿ ಶೋಭಿಸುತಿರಲ್
ಬಲ್ಲಂದದಿಂ ಭರ್ಗನಂ ಪೊಗಳ್ದು ಬಣ್ಣಿಸುತೆ
ಎಲ್ಲಂದದಿಂ ಶಿವನ ಸೇವೆಯಂ ಭಾವಿಸುತೆ
ಇಂತು ಬಹುವಿಧದ ಶಿವ ಕಾರ್ಯರತ ತಾನಾಗಿ
ಕಂತುಹರ ಸಂಭೃತ್ಯ ಭಾವ ಸಂಯುತನಾಗಿ



ಇರುತಿರಲ್ ಶಿವನೊಲ್ದು ಕೈಲಾಸ ಗಿರಿಯಲ್ಲಿ
ಪರಿಪರಿಯ ಭಕ್ತಿಯಂ ಗಾನಮಂ ಪೇಳ್ದಲ್ಲಿ
ನೆನೆದು ನಂದಿ ಪ್ರಮುಖ ರುದ್ರಗಣಮಂ ನೋಡಿ
ಘನ ಶಿವಂ ಬೆಸಸಿದನವರ್ಗೆ ಕರುಣಂ ಗೂಡಿ
ಎನ್ನ ಸದ್ಭಕ್ತನಂ ತರ್ಪುದತಿ ವೇಗದಿಂ
ಮನ್ನಣೆಯ ಮದ್ಭಾವ ಯುಕ್ತನಂ ರಾಗದಿಂ
ಎಂದೆನಲ್ಶಿವನಾಜ್ಞೆಯಿಂದವರ್ನಡೆತಂದು
ಸಂದಿಲ್ಲದಿರ್ದರಯ್ಯಾಡಿಯರ್ಗಳೊಳ್ನಿಂದು
ಇಂದುಶೇಖರನಾಜ್ಞೆಯಂ ತಿಳುಪಿ ಪೇಳುತುಂ
ತಂದ ಪುಷ್ಪಕದೊಳಗೆ ಕುಳ್ಳಿರಿಸಿ ಪೊಗಳುತುಂ
ತಳರಲೊಡನದು ರಜತಗಿರಿಯ ಸಭೆಯೊಳ್ನಿಲಲ್
ಘಳಿಲನೇ ಪುಷ್ಪಕದೊಳಿಳಿದು ನಿಂದಿರಲ್
ಶಿವನಧಿಕ ಕರುಣದಿಂ ನೋಡಿ ಕೊಂಡಾಡುತುಂ
ಭವನಾತನಂ ಗಿರಿಜೆಗರುಪಿ ಕೊಂಡಾಡುತಂ
ಎನ್ನ ಮೇಗಣ ಮೋಹದಿಂದ ರಾಜ್ಯವ ಬಿಟ್ಟು
ಮನ್ನಣೆಯ ಭಕ್ತನಿವನೆಂದು ಹರುಷಂಬಟ್ಟು
ಗಣಪದವಿಯೊಲಿದಿತ್ತ ಅತ್ಯಧಿಕ ಭೋಗದಿಂ
ಫಣಿಕಂಕಣಂ ರಜತಗಿರಿಯೊಳನುರಾಗದಿಂ
ಕಾಲಹರ ದುರಿತಭಂಜನ ಭರ್ಗನೊಪ್ಪಿದಂ
ಶೂಲಧರ ಭವಭಯ ಧ್ವಾಂತ ರವಿಯೊಪ್ಪಿದಂ
ಇಂತೆಮ್ಮ ಪಂಪಾಪುರಾಧೀಶನೊಪ್ಪಿದಂ
ಸಂತತಂ ಹಂಪೆಯ ವಿರೂಪಾಕ್ಷನೊಪ್ಪಿದಂ

**ಕಂದ॥** ಅಯ್ಯಡಿಯರ ಭಕ್ತಿಗೊಲವಿಂ ।
ಮೆಯ್ಯಾನುತೆ ರುದ್ರಪದವನಿತ್ತುರಿ ಪೆಱಿದಂ ॥
ಅಯ್ಯನೆನಗೀಗೆ ಭಕ್ತಿಯ ।
ನಯ್ಯಡಿಯರ ಭೃತ್ಯನೆಂದು ಹಂಪೆಯದೇವಂ ॥

# ಮಾನಕಂಜರ ಮಹಾತ್ಮೆ.

ಕಂದ॥ ಐದೆ ಧರೆ ಪೊಗಳೆ ಭಕ್ತಿಯೊ ।
ಳಯ್ದುಂ ಮೊಗದೀಶ್ವರಂಗೆ ತನಯಳ ಮುಡಿಯಂ ॥
ಕೊಯ್ದಿತ್ತ ಮಾನಕಂಜರ ।
ನೊಯ್ದಂ ಕೈಲಾಸಪುರಕೆ ಹಂಪೆಯ ರಾಯಂ ॥

## ರಗಳೆ.

ಎಂತೆನಲ್ಚೋಳದೇಶದೊಳೊಂದು ಪುರಮುಂಟು
ಸಂತತಂ ಕುಂಜಾರೆನಿಪ್ಪ ನಾಮಮದುಂಟು
ತನಗಾಗಿ ಮೆರೆವದು ಪುರದೊಳಿರ್ಪಂ ನೋಡ
ವಿನುತ ನಾಮಂ ಮಾನಕಂಜರೆಂಬುದು ನೋಡ
ಸತ್ಯವೇ ತಾಯಿ ಶಿವಜ್ಞಾನವೇ ಪಿತ ತನಗೆ
ನಿತ್ಯಸಖಿ ದಯೆ ಧರ್ಮ ಒಡಹುಟ್ಟಿದಂ ತನಗೆ
ಬೇರೆ ಬಂಧುಗಳಿಲ್ಲ ಬಂಧು ಶಿವಭಕ್ತರುಂ
ಬೇರಾಪ್ತ ಜನರಿಲ್ಲ ಆಪ್ತರೇ ಶರಣರುಂ
ತನ್ನ ಸಂಪದವಭವ ಭಕ್ತರ್ಗೆ ಸಂಪದಂ
ತನ್ನ ಧನವೀಶಭಕ್ತರ್ಗಂ ದಯಾಸ್ಪದಂ
ಇಲ್ಲೆನೆ ಕುಬೇರಂಗೆ ಕಡನನೀವಂ ನೋಡ
ಬಲ್ಲಿದಂ ವ್ಯವಹಾರಿ ಎನಿಸಿ ಮೆರೆವಂ ನೋಡ
ಹೊನ್ನುವುಂ ತನ್ನವುಂ ಕೊಟ್ಟು ಸದ್ಭಕ್ತಿಯಂ
ತನ್ನತ್ತ ತೆಗೆದುಕೊಳ್ವಂ ಶಿವನ ಭಕ್ತಿಯಂ
ಸಮಯಾಸಮಯವಿಲ್ಲ ಭವನ ಭಕ್ತರ್ಬರಲ್
ಸಮಯಂಗಳಿಲ್ಲ ಚೋಳಾದಿ ಭೂಪರ್ಬರಲ್
ಧನವನೀವಂ ತನ್ನನೀವನಾ ಭಕ್ತರ್ಗೆ
ತನುವನೀವಂ ಮನವನೀವನಾ ಭಕ್ತರ್ಗೆ
ಭಕ್ತರಿಲ್ಲದ ದಿನದ ತೃಪ್ತಿಯುಪವಾಸವದು
ಭಕ್ತರೊಡಗೂಡಿದುಪವಾಸವೇ ತೃಪ್ತಿಯದು



ಇಂತಿರುತೆ ನಿತ್ಯ ಲಿಂಗಾರ್ಚನೆಗೆ ನಡೆತಂದು
ಸಂತತಂ ಕುಂಜಾರ ದೇವರಲ್ಲಿಗೆ ಬಂದು
ಸಂದ ಕಸ್ತೂರಿ ಚಂದನ ಗಂಧ ವೃಂದದಿಂ
ಒಂದುಗೂಡಿರ್ದ ನವ ಕುಸುಮ ಸಂದೋಹದಿಂ
ಪೂಜೆಯಂ ಮಾಡುತುಂ ನಲವಿಂದೆ ನೋಡುತುಂ
ಓಜೆಯಂ ಮೀರುತುಂ ತೆಗೆದು ತಳ್ಕೈಸುತುಂ
ಕೆಲಬಲದೊಳೆಸೆವ ಮಾಣಿಕ ದಿಂಡೆಯಂ ಕಟ್ಟಿ
ನಲಿನಲಿದು ಹೊಸ ಮುತ್ತಿನಿಂಡೆಯಂ ಸಮೆಕಟ್ಟಿ
ಅಲ್ಲಿ ಭಕ್ತರು ಬಲ್ಬಯಸಿದುದನೀವುತುಂ
ಸಲ್ಲೀಲೆಯಿಂದೆ ಶಿವಭಕ್ತಿಯುಮನೀವುತುಂ
ಪಾದೋದಕ ಪ್ರಸಾದಂಗಳಿಂ ತಣಿವುತುಂ
ಸಾದರಂ ಮಿಗೆ ಭಕ್ತಿಗೋಷ್ಠಿಯಿಂ ಪೇರ್ಚುತುಂ
ತನ್ನರಮನೆಗೆ ಬಂದು ಸಕಲ ಸುಖದಿಂದಿರಲ್
ತನ್ನರಸಿಯುಂ ತಾನುಮಳ್ತಿಯಿಂದಿರುತಿರಲ್

ವನಿತೆ ಇಂತೆಂದಳೊಂದುಂ ಕೊರತೆ ಎಮಗಿಲ್ಲ
ತನಯನೋರ್ವಂ ನೋಳ್ಪುದಲ್ಲದೊಪ್ಪದಿದೆಲ್ಲ
ದೇವರಂ ಬೇಡಿರೇ ನೀವೋರ್ವ ಪುತ್ರನಂ
ಭೂವಳಯಮುಮನಾಳ್ವ ಮಂಗಳ ಚರಿತ್ರನಂ
ಎನೆ ಕಿವಿಗಳಂ ಮುಚ್ಚಿ ಶಿವಶಿವಿಂತೆಂಬರೇ
ಮನದೊಳಂ ದೇವರಂ ಬೇಳ್ಪುದಂ ಕಲಿವರೇ
ಬೇಡಲಾಗದು ಶೂಲಿಯೊಲಿವುದಂ ಬಲ್ಲವಂ
ಮಾಡಿತಂ ನೋಡುತಿರ್ಪುದು ಶಂಭುವೆಲ್ಲವಂ
ಶಿವನಿಚ್ಛೆಯಲ್ತೆ ಬೇರೊಂದಿಚ್ಛೆ ಎಮಗುಂಟೆ
ಶಿವನಿರಿಸಿದಂತಲ್ಲದೆಂತು ಬೇರಿರವುಂಟೆ
ಎಂದೆನಲ್ಮಾಣದಾ ವನಿತೆ ಪೇಳುತ್ತಿರಲ್
ಕುಂದದಂದಂದಿಂಗೆ ಬಿಡದೆ ಈಯುತ್ತಿರಲ್

ಒಂದು ಮನವಲ್ಲದೆ ಮನದೊಳೊಂದು ದಿವಸದೊಳ್
ಇಂದುಮುಖಿ ಇಚ್ಛೆಯಂ ಸಲಿಸುವ ನಿಹಾರದೊಳ್
ಶಿವನಿಳಯಮಂ ಪೊಕ್ಕು ನಿತ್ಯ ನೇಮಂ ಮಾಡಿ

ಶಿವನನಾಗಳೆ ಬೇಡಲೆಂದು ಮನಮಂ ಮಾಡಿ
ಬೇಡುವದೆ ಕಷ್ಟವಯ್ಯೋ ಭಕ್ತಿ ಇಂತಾಯ್ತು
ಬೇಡಲಾನೊಲ್ಲೆನೆನ್ನವಳ ಮನ ಎಂತಾಯ್ತು
ಎಂದು ಬೇಡಲ್ಕೆ ಬೇಡದಿರಲ್ಕೆಯುಂ ಜಾತ್ತೆ
ಬಂದು ಭಯದಿಂ ಕುಗ್ಗಿ ತಡಬಡಂಬೋಗುತ್ತೆ
ಪುತ್ರಿಯಂ ಕೊಡು ದೇವ ಎಂದು ಕೈಮುಗಿದಿರ್ದು
ಪುತ್ರನಂ ಕೇಳ್ವುದಂ ಮರೆದು ಭೀತಿಯೊಳಿರ್ದು
ಪೊಡಮಟ್ಟು ತೀರ್ಥಜಲಮಂ ಕೊಳ್ವ ಸಮಯದೊಳ್
ಮೃತನಿರಿಸಿದಂ ಪ್ರಸಾದತ್ವಮಂ ಹರುಷದೊಳ್
ಶಿವನಿರಿಸೆ ಲಲನಾ ಜನನ ಬೀಜ ಬಿಂದುವಂ
ಅವುಗೂಡಿ ಪಾದೋದಕ ಪ್ರಸಾದತ್ವವಂ
ಕೈಕೊಂಡು ಬಂದನುಮ್ಮಳಿಸುತುಂ ನಿಳಯಕ್ಕೆ
ಏಕೆ ಬೇಡಿದೆನೀಶನೇನೆಂಬೆನಿನಿತಕ್ಕೆ
ಎಂದೆನುತೆ ಬಂದು ವನಿತೆಗೆ ಪೇಳೆ ನಲವಿಂದೆ
ಇಂದುಮುಖಿ ಸಂತಸಂಬಡುತೆ ಮನದೊಲವಿಂದೆ

ಇರೆ ಶಿವನ ಕಾರುಣ್ಯ ಸಂದ ಸುಖಫಲದಿಂದೆ
ಸರಸಿಜಾನನೆಗೆ ಗರ್ಭಂದೋರೆ ಚಲ್ವಿಂದೆ
ಬರಬರಲ್ ನಳನಳಿಸಿ ನವಮಾಸವಾಗುತಿರೆ
ತರುಣಿಯಂ ಪಡೆದಳ್ ಜನೋತ್ಸಾಹಮುಣ್ಮುತಿರೆ
ಹರುಷದಿಂದಾಡುತುಂ ಜಾತಕರ್ಮಂ ಮಾಡಿ
ತಿರುಮುಡಿಯೊಡೆಯಳೆಂದು ನಾಮಕರಣಂ ಮಾಡಿ
ಶಿವನ ಸದ್ಭಕ್ತರ್ಗೆ ಹೊನ್ನಮಳೆಯಂ ಗರೆದು
ಭವನ ಭಕ್ತರ್ಗೆ ಬೇಡಿದನಿತ್ತು ನೆರೆ ಮೆರೆದು
ತಂದೆ ತಾಯ್ಗಳು ನೋಡಿ ಹರ್ಷದಿಂ ಹಿಗ್ಗುತಿರೆ
ಬಂದ ಭಕ್ತರ ಪಾದಜಲದಿಂದ ಸಲಹುತಿರೆ
ಶಿವನ ಪ್ರಸಾದದಿಂ ಮೊಲೆಪಾಲನೀಂಟುತುಂ
ನವನವ ಪ್ರೇಮದಿಂ ಬಾಲ್ಯಮಂ ದಾಂಟುತುಂ
ಬೆಳೆವುತಿರ್ದಳ್ ಚಂದ್ರಕಳೆಯಂತೆ ತಳತಳಿಸಿ
ಬೆಳೆವುತಿರ್ದಳ್ ಕಲ್ಪಲತೆಯಂತೆ ನಳನಳಿಸಿ



ಪುತ್ರನುಂ ಪುಣ್ಯವುಂ ತರುಣಿಯೇ ಅಂತವರ್ಗೆ
ಚಿತ್ರಮುಂ ವಿಚಿತ್ರಮುಂ ತರುಣಿಯೇ ಅಂತವರ್ಗೆ
ಇಂತಿರಲ್ ತಪದಿ ನಾಲ್ಕು ವತ್ಸರಂಗಳ್ಸಲಲ್

ಕಂತು ಕಣ್ಬಳಿಗೊಂಡು ಬಿಲ್ಲನೇರಿಸಿ ನಿಲಲ್
ಚರಣತಳವೆಳೆಯಶೋಕೆಯ ತಳಿರನುಗುಳುತಿರೆ
ಸುರುಚಿರ ನಿತಂಬ ಬಿಂಬದ ವೃತ್ತ ಮೆರೆವುತಿರೆ
ನಡುಮುಡಿಯ ಮೊಲೆಯ ಭಾರಕ್ಕೆ ನಡ ನಡುಗುತಿರೆ
ಕಡೆಗಣ್ಗಳರಲ ಸರಲಂ ದೆಸೆಗೆ ಸೂಸುತಿರೆ
ತೋಳ ಮೊದಲಂಗಜನ ಬಾಳ ಹೊಗರೆತ್ತುತಿರೆ
ಭಾಳಸ್ಥಳಂ ಬಾಲಶಶಿಯನೇಳಿಸುತಮಿರೆ
ನವಕಮಳವಂ ನಗುತ್ತಿರೆ ವದನ ಮಂಡಳಂ
ಕವಲಿಡಿದು ನೀಳ್ದು ಜೆಂಬಳವಿಡಿದು ಕುಂತಳಂ
ಕಾಮನ ಪತಾಕೆಯಂತಿರೆ ಮೆರೆವ ಮುಡಿಗಟ್ಟಿ
ಕೋಮಳೆಯ ಲಾವಣ್ಯರಸವಲ್ಲಿ ಮಡುಗಟ್ಟಿ
ಅಂಗಕಾಂತಿಗಳೊಳಗೆ ತೀವಿ ತೆರೆ ಮಸಗುತಿರೆ
ಅಂಗಜಂಗೊಳಗಾಗಿ ನೋಡಲರಿದೆನಿಸುತಿರೆ
ಇಂತು ತಿರುಮುಡಿಯೊಡೆಯುಳಿಂತು ಬೆಳೆಯುತ್ತಿರಲ್
ಸಂತತಂ ಸೌಭಾಗ್ಯ ಲತೆ ಧೀಂಕಿಡುತ್ತಿರಲ್

ಅತ್ತಲಾ ಚೋಳನೊಲವಿಂದಂ ಕುಮಾರಂಗೆ
ಚಿತ್ತದಲ್ಲಿ ವಿವಾಹಮಂ ನೆನೆಯುತಂದಿಂಗೆ
ಚರರೂಪೆ ವಾರ್ತಾ ಪರಂಪರೆಯೊಳಂ ಕೇಳ್ದು
ತಿರುಮುಡಿ ಯೆಡೆಯಳೊಪ್ಪುವಾಶ್ಚರ್ಯಮಂ ಕೇಳ್ದು
ಕಳುಪೆ ಬಂದಂ ಮಂತ್ರಿ ಗಾಂಗೇಯನಾಯೂರ್ಗೆ
ತಿಳಿಯಲರಿಪಿದನೆಲ್ಲವಂ ಮಾನಕಂಜರ್ಗೆ
ಕೇಳುತೊಡಂಬಟ್ಟೆನೆಂದವರ್ಗಳಂ ಕಳುಪೆ
ಬಾಳೆನುತವರ್ಪೋದರಾನಂದದಿಂ ಕಳುಪೆ

ಇತ್ತ ಮದುವೆಯ ಮಂಟಪಂ ಸಮೆದುದೂರೊಳಗೆ
ಮುತ್ತಿನಿಂ ಕಟ್ಟಿದರ್ಮೇಲ್ಕಟ್ಟು ತೊಳತೊಳಗೆ

ಮಕರ ತೋರಣ ಓರಣಂಗೊಂಡವಲ್ಲಲ್ಲಿ
ಸುಕರವೆನೆ ಪುಲ್ಲಿಪಟ್ಟಿಗಳಿರ್ದವಲ್ಲಲ್ಲಿ
ಹೊನ್ನಿಂ ವಿವಾಹ ವೇದಿಕೆ ಸಮೆದುದಂತಲ್ಲಿ
ರನ್ನದಿಂ ರಂಜಿಸಲ್ ಕೌತುಕಂ ಮಿಗಲಲ್ಲಿ ।
ಪುರದೊಳೆಲ್ಲಾ ಸುವಾಸಿನಿಯರಂ ಕರಿಸಿ
ಹರುಷದಿಂ ಹೊಂಗುತುಂ ತಮತಮಗೆ ಸಿಂಗರಿಸಿ
ಘಳಿಗೆವಟ್ಟಲ ಮುಂದೆ ಜೋಯಿಸರನೊಲಿದಿರಿಸಿ
ತಿಳಿದ ಶೈವಾಗಮಾಚಾರ್ಯರಂ ಕುಳ್ಳಿರಿಸಿ
ಒಳಗೆ ತಿರುಮುಡಿಯೊಡೆಯಳಂ ಸಿಂಗರಂ ಮಾಡಿ
ಒಳಗೆ ಸರ್ವಾಭರಣ ಭೂಷಿತೆಯರೊಡಗೂಡಿ
ಇಂತೆಲ್ಲಮಂ ಸಮಂ ಕಟ್ಟಿ ಸುಖದಿಂದಿರಲ್

ಸಂತತಂ ಮಾನಕಂಜಪರ್ಮುಳುಕಿಸುತ್ತಿರಲ್
ಬರುತಿರ್ದನಲ್ಲಿ ಚೋಳಂ ಸರ್ವ ಸಂಭ್ರಮದೆ
ವರ ಕುಮಾರಕನ ಮದುವೆಗೆ ಸಕಳ ಸಂಭ್ರಮದೆ
ಗಜಘಟೆಗಳಿಂ ತುರಗದಿಂ ರಥಾನಿಕರದಿಂ
ನಿಜಭುಜಸ್ಫೋಟನ ಪದಾತಿ ಸಂದೋಹದಿಂ
ಕಳಶಮಂ ಧರಿಸಿದ ಸುವಾಸಿನೀ ನಿಕರದಿಂ
ತಳಿಗೆಗಳ ಸಮಂ ಪಿಡಿದ ಲಲನಾ ಕದಂಬದಿಂ
ಸೂಳೈಪ ಭೇರಿ ನಿಸ್ಸಾಳ ತಮ್ಮಟದಿಂದೆ
ಬೋಳೈಸಿ ಬಿರಿದೆತ್ತಿ ಕರೆವ ಕಹಳೆಗಳಿಂದೆ
ಬಂದು ಮಂಟಪದೊಳಗೆಯಳ್ತಿಯಿಂ ತುಂಬಿದರ್
ಸಂದಣಿಸುವರಸು ನಿಬ್ಬಣಿಗರಿಂದೊಪ್ಪಿದರ್

ಕುಳ್ಳಿರ್ದರಗಲಕೆ ಮಕುಟವರ್ಧನರಲ್ಲಿ
ಕುಳ್ಳಿರ್ದರುರವಣಿಸಿ ರಾಜರ್ಕಳಲ್ಲಲ್ಲಿ
ಮಂತ್ರಿಗಳ್ ಸಾಮಂತರೆಸೆವ ನಾಯಕರಿಂದೆ
ತಂತ್ರಿಗಳ್ ಶಚಿವರಗ್ಗದ ಬಿರುದಿನವರಿಂದೆ
ಕವಿಗಮಕಿವಾಗ್ಮಿ ವಾದಿಗಳ ಸಂದಣಿಯಿಂದೆ



ನವನರ್ತಕೀ ನರ್ತಕ ಪ್ರಸಾರಣದಿಂದೆ
ನೀರ್ತೆಗೆದ ರತ್ನಾಕರಂಗಳಂತೋಲಗಂ
ಮಾರ್ತೊಳಪ ಮಕುಟಂಗಳಿಂದೊಪ್ಪಿತೋಲಗಂ

ಆಗಳ್ಕುಮಾರಂಗೆ ಸಿಂಗರಂ ಮಾಡಿದರ್
ರಾಗದಿಂದಾಭರಣ ಜಾಲಮಂ ನೀಡಿದರ್
ನವ ರತ್ನದೆಸೆವ ಬಾಸಿಗವನೊಲವಿಂ ಕಟ್ಟಿ
ನವಕುಮಾರಂ ಗುತ್ತಮೋತ್ಸಾಹಮುಂ ಮುಟ್ಟಿ
ಹೊಸ ಸಮರ ವಸ್ತ್ರಂಗಳಂ ಕುಡಲ್ತೆಗದುಟ್ಟು
ಹೊಸ ಸುವರ್ಣದ ಜನ್ನಿವರವನೊಲವಿಂ ತೊಟ್ಟು
ಸಕಲ ಸಂಭ್ರಮದಿಂದೆ ಮಂಟಪಕೆ ನಡೆತಂದು
ಸಕಲ ಮಂತ್ರಾಕ್ಷತೆಯನಾನುತುಂ ಪುಗುತಂದು
ಹಸೆಯ ಮೇಲೆಸೆದಿರೆ ಕುಮಾರ ಕಂಠೀರವಂ
ರಸೆಗೆ ಹೊಸ ಕಾಮನೆನಿಪಂ ಸದ್ಗುಣಾರ್ಣವಂ
ಬರುತಿರ್ದಳಿತ್ತ ತಿರುಮುಡಿಯೊಡೆಯಳಮ್ಮಮ್ಮ
ಪರಿಪರಿಯ ನವ ವಿಳಾಸಿನಿಯರಿಂದಮ್ಮಮ್ಮ
ನವರತ್ನದಿಂ ಸಮೆದ ದಂಡೆ ತೊಂಡಿಲ್ಮೆರೆಯೆ
ನವ ಕುಸುಮ ಶರವೃಷ್ಟಿಯಂ ಲೋಚನಂ ಕರೆಯೆ
ವಂದಿಗಳ್ತಮತಮಗೆ ಕೈವಾರಿಸುತ್ತುಮಿರೆ
ಸಂದ ಬಾಂಧವ ಕುಲಂ ನಲಿದು ಪರಿಸುತ್ತಮಿರೆ
ಬಂದು ಕುಳ್ಳಿರ್ದಲ್ಲಿ ಹಸೆಯ ಮೇಲೊಪ್ಪುತಿರೆ
ಇಂದುಮುಖಿಗಾನಂದಮಯ ಪುಳಕವಾಗುತಿರೆ

ಕಪಟ ನಾಟಕ ಸೂತ್ರಧಾರಿ ಪೊರಪೊಣ್ಮಿದಂ
ವಿಪರೀತ ಚರಿತ ನಿತ್ತಲ್ ಹರಂ ಮೂಡಿದಂ
ನೊಸಲ ಭಸಿತಂ ಕೆಯ್ಯ ರುದ್ರಾಕ್ಷಿಗಳ್ಮೆರೆಯೆ
ಮಿಸುಪ ದಂತದ ಚನ್ನ ಪಾವುಗೆಗಳಿಂದೆಸೆಯೆ
ಚಪ್ಪರದ ಗೊಂಟೆನೊಳ್ನೋಡುತ್ತೆ ಮಿಳುಮಿಳನೆ
ಒಪ್ಪುತಿರೆ ಮಾನಕಂಜರ್ಕಂಡು ಗಳಗಳನೆ
ಇಳಿದು ಗದ್ದುಗೆಯಿಂದಲೆಯ್ತಂದು ನೈಗೆಡೆದು

ಪುಳಕವೆತ್ತಲ್ಕೈದ್ವು ಪೊಡಮಟ್ಟು ಕೈ ಮುಗಿದು
ಕೈಗೊಟ್ಟು ಬಂದೊಪ್ಪಿ ಗದ್ದುಗೆಯ ಮೇಲಿರಿಸಿ
ಮೈಗರೆದು ಪದವನಗ್ಗಣಿಯಿಂದೆ ಸಿಂಗರಿಸಿ
ಭಾಳದೊಳ್ಗಂಡಸ್ಥಳದೊಳಕ್ಷಿಗಳೊಳೊತ್ತಿ
ತೋಳುರಸ್ಥಳದೊಳಗೆ ಕಂಠದೊಳಗೊತ್ತುತ್ತೆ
ಕೊಂಡು ಪಾದೋದಕಂ ದಳೆದು ಬದುಕಿದೆನೆಂದು
ಖಂಡೇಂದುಮೌಳಿ ಬೆಸಸುವುದು ಬದುಕಿದೆನೆಂದು

ಬಿನ್ನವಿಸೆ ಕಾಮಾರಿ ಕೇಳ್ದು ಮನದೊಳ್ನಲಿದು
ನಿನ್ನನೊಂದಂ ಬೇಡಿಬಂದೆವೀಪೊಡೆ ಪಿರಿದು
ನಿಮಗವಸರಂ ಬೇಡಲಾಗದೀ ಸಮಯದೊಳ್
ನಿಮಗೆ ಕೊಡಲರಿದು ವೈವಾಹದುತ್ಸಾಹದೊಳ್
ನಾಳೆ ಬಂದಪೆವೀಗಳೇಕೆ ಮಂಗಳದೊಳಗೆ
ಹೇಳಲಮ್ಮೆವು ಬಳಿಕೆ ಮುನಿವುದೀ ಸಭೆ ನಿನಗೆ
ಮದುವೆಯಕ್ಕಿಂದಿಂಗೆ ಪೋಗಿ ಬಂದಪೆವೆಂದು
ಮುದದಿಂದೆ ಮಾಡುವುದು ಮಂಗಳಂಗಳನೆಂದು

ಬೆಸಸೆ ಕೇಳುತ್ತಲ್ಲಿ ಮಾನಕಂಜರ ನೊಂದು
ಶಶಿಧರಾ ಇಂತು ಕರುಣಿಪರೆ ನೀನೆನಗೆಂದು
ಬಂದುದೇ ಸರ್ವ ಸಮಯಂ ದೇವ ನೀಯೊಲ್ದು
ಬಂದುದೇ ಮಂಗಳಮಯಂ ದೇವ ನೀಯೊಲ್ದು
ನಿಮ್ಮ ವಂಚಿಸಿ ಬೇರೆ ಮಂಗಳಂ ತಾನುಂಟೆ
ನಿಮ್ಮಡಿಗಳಿಲ್ಲದುತ್ಸಾಹವೀ ಧರೆಗುಂಟೆ
ನೀಂ ಮೆಚ್ಚೆ ಮಿಕ್ಕವರ್ಮುಳಿದು ಮಾಡುವುದುಂಟೆ
ನೀಂ ಮುಳಿಯೆ ಮಿಕ್ಕವರ್ಗಳೊಲ್ದು ಮಾಡುವುದುಂಟೆ
ಕರುಣಿಪುದು ಚಿತ್ತದೊಳಗಿರ್ದುದಂ ಬೇಡುವುದು
ಅರಮರಿಸದೆನ್ನಂ ಕೃತಾರ್ಥನಂ ಮಾಡುವುದು
ಶಿವಭಕ್ತರೆನ್ನುವಂ ಬೇಳ್ಪುದಂ ಪಡೆವೆನೇ
ಶಿವಭಕ್ತರೆನ್ನವನೆನಿಪ್ಪುದಂ ಪಡೆವೆನೇ



ಎನೆ ಭಕ್ತರೆಂದಪನೇರೆ ಪೇಳ್ವನೇ ದಿಟಂ
ನಿನಗಂ ನಿರೋಧಮಂ ತೋರದೆಯ್ದದು ದಿಟಂ
ಎಮ್ಮ ಪಾವುಗೆ ಬೆರಲನೊತ್ತದಂತಿರೆ ಪಿರಿದು
ನಿಮ್ಮೀ ಮಗಳ ಮುಡಿಯ ಕೂದಲತ್ಯಂತ ಮೃದು
ತಂದಿಕ್ಕವೇಳ್ಪುದೆನೆ ಕೋಟಿ ಮುಡಿವಡೆದಂತೆ
ಇಂದುಧರ ಮೂರ್ತಿಯೊಯ್ವುದಕಿನಿತು ಬೇಡೆನುತೆ
ಉಳ್ಳುದಂ ಕೊಡುವುದಕ್ಕುಪಚಾರವೇಕೆನುತೆ
ಕುಳ್ಳಿರ್ದ ಭಕ್ತಂಗೆ ಕೆಯ್ಗೊಟ್ಟು ನಡೆತರುತೆ

ಮದುವೆಯಂ ತೀರ್ದುದಾ ಮದವಣಿಗನಂತಿರ್ದ
ಇದು ಚೋದ್ಯವೆಂದೆನುತೆ ಚೋಳನೀಕ್ಷಿಸುತಿರ್ದ
ಇತ್ತಲೆಯ್ತಂದು ಮಂಟಪದ ಜಗುಲಿಯ ಮೇಲೆ
ಒತ್ತರಿಪ ನಿಬ್ಬಣಿಗರೆಲ್ಲರುಂ ಕಣ್ಮಾಲೆ
ಭಕ್ತನಂ ಸಾರೆ ಮುಂದಿರಿಸುತಂ ಬಲವಂದು
ಭಕ್ತಯುಕ್ತಂ ಸುತೆಯನೀಕ್ಷಿಸುತ್ತಂ ಬಂದು
ದಂಡೆಯಂ ತೊಂಡಿಲಂ ನೂಂಕುತುಂ ಚಂದದಿಂ
ಚಂಡಿಕೆವಿಡಿದು ಮಗಳನುತ್ತರಿಸುವಂದದಿಂ
ಶಿವಭಕ್ತಿ ಮಗಳ ತಲೆಗೇರಿತೆಂಬಂದದಿಂ
ಶಿವಭಕ್ತಿಯು ಕೆಯ್ಯೊಳಡಂಗಿತೆಂಬಂದದಿಂ
ಎಡದ ಕಯ್ಯಿಂದ ಮುಡಿಯಂ ಭಕ್ತಿಯಿಂ ಪಿಡಿದು
ಮೃಡಭಕ್ತರರಸನೇಕಾಗ್ರಚಿತ್ತಂ ಬಿಡಿದು
ಬಂದ ಮದುವೆಯು ನೆರವಿ ಕಂಡು ಚೋದ್ಯಂಬಟ್ಟು
ನೊಂದಿದೇನೆನುತ ಚೋಳಂ ಕೌತುಕಂ ಬಟ್ಟು
ಆ ಕಿತ್ತನಾ ಕಿತ್ತನಯ್ಯೋ ಕಠಾರಿಯಂ
ಲೋಕೇಶ್ವರಂ ಮೆಚ್ಚಿ ನೋಡಿದನುದಾರಿಯಂ
ಎನುತಿರಲ್ಕಿಡುವಿನೊಳ್ಮಸುಮಮಂ ಕೊಯ್ವಂತೆ
ಮನವೊಸೆದು ಪುಷ್ಪದೊಳ್ಪರಿಮಳಂಗೊಳ್ವಂತೆ
ಎತ್ತಿದ ಕಠಾರಿಯಂ ಭೋಂಕೆನಲ್ಕೊಯ್ವಲ್ಲಿ
ಚಿತ್ತಜಹರನ ಪಾದದೊಳಗೆ ಸಸಿ ನೀಡುವಲ್ಲಿ

ನೊಸಲ ಕಣ್ಣಾಶ ಭುಜಂ ಶಶಿಕಳೆ ಜಟಾಧರಂ
ಮಿಸುಪ ಪಂಚಾನನಂ ಪುಲಿದೊವಲ್ವಿಸ್ತರಂ
ಬಡಿಯೆ ರವಿಕೋಟಿ ಕಿರಣಮನೇಳಿಸುತ್ತಂದು
ವೃಡನೊಲ್ದು ಮಾನಕಂಜರನಪ್ಪಿಕೊಂಡಂದು
ಆಹ ನಂದೀಶ ನೋಡೆನ್ನ ಶಿವಭಕ್ತನಂ
ಆಹ ಪಾರ್ವತಿ ನೋಡು ಶಿವಭಕ್ತಿಯುಕ್ತನಂ
ಚೋಳಾದಿಗಳ್ನೋಡಿ ನೆರೆ ಬೆಂಗಾಗೆ
ಗೋಳಟ್ಟು ಬಂದ ನಿಬ್ಬಣಿಗರಚ್ಚಗರಾಗೆ
ಹಸೆಯ ಮೇಗಣ ಮಗಳ ಮುಡಿಯನಿತ್ತವರುಂಟೆ
ಸಸಿವದನೆಯಂ ನೋಡದಿಂತು ಮಾಡಿದರುಂಟೆ
ಒಡವೆಯಾನೊಳ್ಳಿತಾನಿಂತೆನ್ನ ಭಕ್ತರ್ಗೆ
ಒಡಲೆನ್ನದಸುವೆನ್ನದಿಂತೆನ್ನ ಭಕ್ತರ್ಗೆ
ಎನಗವರೆ ಲಾಭವವರ್ಗಾನೆ ಲಾಭಂ ಕೇಳ್
ಎನಗೆ ಎಲ್ಲಾ ಲಾಭವುಂ ಭಕ್ತರೇ ಕೇಳ್
ಎಂದು ಹಿಮವತ್ಸುತೆಗೆ ಹೇಳುತುಂ ಹಿಗ್ಗುತುಂ
ಬಂದ ಗಣವೃಂದಕ್ಕೆ ತೋರಿ ವೈವೆರ್ಚುತುಂ
ನಾನಾ ಕನಕಮಣಿ ವಿಮಾನಂಗಳಂ ತರಿಸಿ
ಮಾನಕಂಜರನ ಸತಿಸುತೆವೆರಸು ಕುಳ್ಳಿರಿಸಿ
ಪೂಮಳೆಗಳೆರಗುತಿರೆ ದುಂದುಭಿಗಳುಣ್ಮುತಿರೆ
ಕಾಮಹರನೆಂಬ ಬಿರುದಿನ ಕಹಳೆ ಕರೆವುತಿರೆ
ನೆಗೆದನೊಲ್ದೀಶ್ವರಂ ಕೈಲಾಸಪರ್ವತಕೆ
ಜಗ ಮೆಚ್ಚಿ ಪೇಳುತಂ ಬರುತಿರ್ದ ಪುರಜನಕೆ
ಬಂದು ತಾರಾದ್ರಿಯರಮನೆಯನೊಲವಿಂ ಪೊಕ್ಕು
ನಿಂದು ಸಿಂಹಾಸನಮನೇರುತೆ ಮನಂ ಮಿಕ್ಕು
ಮಾನಕಂಜರ್ಗೆ ಗಣಪದವಿಯುಂ ಸಲಿಸುತುಂ
ನಾನಾ ಗಣೇಶ್ವರಾವಳಿ ಬರಲ್ ಹಿಗ್ಗುತುಂ
ಶಿವನೊಪ್ಪಿದಂ ಸದಾಶಿವಮೂರ್ತಿಯೊಪ್ಪಿದಂ
ಭವನೊಪ್ಪಿದಂ ಫಾಳನೇತ್ರನಿಂತೊಪ್ಪಿದಂ
ಹರನೊಪ್ಪಿದಂ ಮನೋಹರ ರೂಪನೊಪ್ಪಿದಂ



ಗುರು ಒಪ್ಪಿದಂ ಗಿರಿಜೆಯರಸನಿಂತೊಪ್ಪಿದಂ
ಶರ್ವನೊಪ್ಪಿದನಖಿಲಗತರೂಪನೊಪ್ಪಿದಂ
ಸರ್ವಜ್ಞ ಪಂಪಾ ವಿರೂಪಾಕ್ಷನೊಪ್ಪಿದಂ ॥

ಕಂದ॥ ಹಸೆಯೊಳಗೆಸದಿರ್ಪಿನಿಯ
ಹೊಸಮುಡಿ ಸವಿರಂ ನಿನಗೆ ನಿವೇದಿಸಿದ ಸುಖಾ
ಪೊಸೆದನೆನೆ ಮಾನಕಂಜರ
ಶಿಸುವಂ ಕರುಣಿಪುದು ಹಂಪೆಯ ವಿರೂಪಾಕ್ಷಾ